ಸಂಪುಟ: 04 ಸಂಚಿಕೆ: 174 ಪುಟಗಳು: 08 ಗುರುವಾರ 05 ಸೆಪ್ಟೆಂಬರ್ 2024 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಪ್ರತಿಕೂಲವಾದ ಸನ್ನಿವೇಶಗಳನ್ನು ಎದುರಿಸಿ ಜೀವಿಯು ವಿಕಾಸ ಮತ್ತು ಬೆಳವಣಿಗೆಯನ್ನು ಹೊಂದುವುದೇ ಜೀವನ.

## ನಟ ದರ್ಶನ್ ತೂಗುದೀಪ ಸೇರಿ 14 ಜನರ ಮೇಲೆ ಕೊಲೆ, ಕಿಡ್ನಾಪ್; ಮೂವರ ಮೇಲೆ ಸಾಕ್ಷಿ ನಾಶ ಆರೋಪ ಉಲ್ಲೇಖ

ರಾಜ್ಯದಲ್ಲಿ ಸಂಚಲನ ಸೃಷ್ಟಿಸಿದ್ದ ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆಯಲ್ಲಿ ನಟ ದರ್ಶನ್ ,ಪವಿತ್ರಾಗೌಡ ಪಾತ್ರವನ್ನು ದೃಢಪಡಿಸಿ 17 ಮಂದಿ ಆರೋಪಿಗಳ ವಿರುದ್ಧ 3991 ಪುಟಗಳುಳ್ಳ ದೋಷಾರೋಪಪಟ್ಟಿ (ಚಾರ್ಜ್‌ಶೀಟ್)ಯನ್ನು ಕೋರ್ಟ್ ಗೆ ಸಲ್ಲಿಸಲಾಗಿದೆ. ಕೊಲೆಯಾದ ರೇಣುಕಾಸ್ವಾಮಿ ತನ್ನ ನಗ್ನ ಫೋಟೊ ಹಾಗೂ ಅಶ್ಲೀಲ ಸಂದೇಶಗಳನ್ನು ಪವಿತ್ರಾಗೌಡ ಅವರಿಗೆ ಕಳುಹಿಸಿರುವುದನ್ನು ಉಲ್ಲೇಖಿಸಿ ನದರ್ಶನ್ ಎ1 ಆಗುವ ಊಹಾಪೋಹಗಳಿಗೆ ತೆರೆ ಎಳೆದು ಎ2 ಆಗಿಯೇ ಮುಂದುವರೆಸಿ ಕೊಲೆಯಲ್ಲಿ 17 ಮಂದಿ ಆರೋಪಿಗಳ ಪಾತ್ರವನ್ನು ವಿವರಿಸಿರುವ ಚಾರ್ಜ್‌ಶೀಟ್‌ನ್ನು ನಗರದ 24ನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ (ಎಸಿಎಂಎಂ) ನ್ಯಾಯಾಲಯಕ್ಕೆ ಸಲ್ಲಿಕೆ ಮಾಡಲಾಗಿದೆ.

## ದರ್ಶನ್, ಗ್ಯಾಂಗ್ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆ



# ದಾಸನಿಗೆ ಖೆಡ್ಡಾ ರೆಡಿ!



**ಜೈಲಿನಲ್ಲಿ ದರ್ಶನ್ ಶಾಕ್!**

1. ದರ್ಶನ್ ಅಂಡ್ ಗ್ಯಾಂಗ್ ವಿರುದ್ಧ 3991 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ
2. ಬಳ್ಳಾರಿ ಜೈಲಿನಲ್ಲಿ ಟಿವಿ, ಫೋನ್‌ಗಾಗಿ ದರ್ಶನ್ ಬೇಡಿಕೆ
3. ಮಗನನ್ನು ನೆನೆಸಿಕೊಂಡು ಕಣ್ಣೀರು

• ಉದಯವಾಹಿನಿ, ಬೆಂಗಳೂರು

ಸೆಲಿಬ್ರಿಟಿಯ ಬಂಧನವಾಗಿದ್ದರೂ ಯಾವ ಪ್ರಭಾವ, ಒತ್ತಡಕ್ಕೂ ಒಳಗಾಗದೇ 17 ಆರೋಪಿಗಳ ವಿರುದ್ಧ ಸಾಕ್ಷ್ಯ ಸಂಗ್ರಹ ಮಾಡಿ ಕೊಲೆಯಾದ 88 ದಿನಕ್ಕೆ ಯಶಸ್ವಿಯಾಗಿ 231 ಸಾಕ್ಷಿದಾರರನ್ನು ಒಳಗೊಂಡ 3991 ಪುಟಗಳುಳ್ಳ 7 ಸಂಪುಟಗಳ 10 ಕಡತಗಳನ್ನು ಹೊಂದಿದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ. ಆದರೆ ದೋಷಾರೋಪಣಾ ಪಟ್ಟಿಯಲ್ಲಿ ದರ್ಶನ್ ಎ1 ಪವಿತ್ರಾ ಎ2 ಆಗಲಿದ್ದಾರೆ ಎನ್ನಲಾಗಿತ್ತು.ಆದರೆ ಇವೆಲ್ಲಾ ಊಹಾಪೋಹಗಳಿಗೆ ತೆರೆ ಎಳೆದ ಎಸಿಪಿ ಚಂದನ್ ಕುಮಾರ್ ಮತ್ತವರ ತನಿಖಾ ತಂಡ ದರ್ಶನ್ ಅವರನ್ನು ಎರಡನೇ ಆರೋಪಿ ಆಗಿ ಉಲ್ಲೇಖ ಮಾಡಿದೆ. ಇದು ನಟ ದರ್ಶನ್ ಅಭಿಮಾನಿಗಳಿಗೆ ಕೊಂಚ ನೆಮ್ಮದಿ ತಂದಿದೆ.ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿರುವ ನಟ ದರ್ಶನ್ ಅವರ ಭವಿಷ್ಯ ಏನಾಗಲಿದೆ ಎನ್ನುವುದು ಈ ಆರೋಪಟ್ಟಿಯನ್ನು ಅವಲಂಬಿಸಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದ ಇಲ್ಲಿಯವರೆಗಿನ ತನಿಖೆಯಲ್ಲಿನ ಸಂಗ್ರಹಿಸಿರುವ ಪ್ರತ್ಯಕ್ಷ, ಸಾಂದರ್ಭಿಕ, ತಾಂತ್ರಿಕ, ವೈಜ್ಞಾನಿಕ ಹಾಗೂ ಇತರೆ ಸಾಕ್ಷ್ಯಾಧಾರಗಳಿಂದ 17 ಆರೋಪಿಗಳ ವಿರುದ್ಧ 24ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅವರು ಸುದ್ದಿಗಾರರಿಗೆ ತಿಳಿಸಿದರು.

**231 ಸಾಂದರ್ಭಿಕ ಸಾಕ್ಷಿ:** ಪ್ರಕರಣದಲ್ಲಿ ಮೂರು ಪ್ರತ್ಯಕ್ಷ ಸಾಕ್ಷಿದಾರರು, ನಗರದ ಎಫ್ ಎಸ್ ಎಲ್,ಹೈದರಾಬಾದ್ ನ ಸಿಎಫ್‌ಎಸ್‌ಎಲ್ 8 ವರದಿಗಳು,161ಹಾಗೂ 164 ರಲ್ಲಿ 27, 164 ಸಿಆರ್‌ಪಿಸಿ ಅಡಿಯಲ್ಲಿನ ಸಾಕ್ಷಿದಾರರು ಸೇರಿ ಹೇಳಿಕೆ 59 ಪಂಚನಾಮೆಗಳು ದೋಷಾರೋಪಣಾ ಪಟ್ಟಿಯಲ್ಲಿ ಸೇರಿವೆ. ತಹಸೀಲ್ದಾರ್, ವೈದ್ಯರು, ಆರ್‌ಟಿಓ, ಅಭಿಯಂತರರು,ಇತರೆ ಸರ್ಕಾರಿ ಅಧಿಕಾರಿಗಳು ಸೇರಿ 8 ಹಾಗೂ 56 ಪೊಲೀಸರು ಸೇರಿ 231 ಸಾಂದರ್ಭಿಕ ಸಾಕ್ಷಾಧಾರಗಳನ್ನು ಸಂಗ್ರಹಿಸಿ ಸಿದ್ಧಪಡಿಸಿರುವ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ ಎಂದು ಹೇಳಿದರು. ಇನ್ನು ಹೆಚ್ಚಿನ ತನಿಖೆಯನ್ನು ಕೈಗೊಂಡು ಸಂಗ್ರಹವಾಗುವ ಸಾಕ್ಷಾಧಾರಗಳನ್ನು ಕಲಂ– 173(8) ಸಿಆರ್ ಪಿಸಿ ಅಡಿಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸ ಲಾಗುವುದು ಎಂದು ತಿಳಿಸಿದರು.

ರಕ್ತವಿರುವುದು ಪತ್ತೆ: ರೇಣುಕಾಸ್ವಾಮಿಯನ್ನು ಚಿತ್ರದುರ್ಗದಿಂದ ಅಪಹರಿಸಿ ಹಲ್ಲೆ ಮಾಡಿದ್ದು, ಕೊಲೆ ಬಳಿಕ ಕೃತ್ಯ ಮುಚ್ಚಿಹಾಕಲು ದರ್ಶನ್ ಹಣ ನೀಡಿರುವುದು,ಆತನ ಬಟ್ಟೆ ಮತ್ತು ಶೂನಲ್ಲಿ ರೇಣುಕಾಸ್ವಾಮಿ ಅವರ ರಕ್ತ ಇರುವುದು ಪತ್ತೆ ಆಗಿರುವುದರಿಂದ ದರ್ಶನ್ ಹಲ್ಲೆ ಮಾಡಿರುವ ಬಗ್ಗೆ ಮತ್ತು ಕೊಲೆಯಲ್ಲಿ ಭಾಗಿಯಾದ ಬಗ್ಗೆ ಖಚಿತ ಮಾಹಿತಿ ದೊರೆತಂತಾಗಿದೆ. ಕೊಲೆ ಮಾಡಲು ಮೂಲ ಕಾರಣ ಪವಿತ್ರಾಗೌಡ ಅವರಾಗಿರುವುದರಿಂದ ಆಕೆ ಎ1 ಆಗಿದ್ದಾರೆ. ಹಲ್ಲೆ ನಡೆಯುವ ಸ್ಥಳದಲ್ಲಿ ಅವರು ಹಾಜರಿದ್ದರು. ಚಪ್ಪಲಿಯಲ್ಲಿ ಅವರು ಹೊಡೆದಿದ್ದಾರೆ. ಕೃತ್ಯ ನಡೆದ ಸಮಯದಲ್ಲಿ ಪವಿತ್ರ ಗೌಡ ಅಲ್ಲೇ ಇರುವುದಕ್ಕೆ ಸಾಕ್ಷಿ ಸಿಕ್ಕಿದೆ. ಪವಿತ್ರ ಗೌಡ ಮೊಬೈಲ್ ಕೃತ್ಯದ ಸ್ಥಳದಲ್ಲಿ ಆಕ್ಟೀವ್ ಆಗಿರುವುದು ಚಾರ್ಜ್‌ಶೀಟ್‌ನಲ್ಲಿ ಪ್ರಸ್ತಾಪಗೊಂಡಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು 231ಕ್ಕೂ ಅಧಿಕ ಸಾಂದರ್ಭಿಕ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ. ಇದರಲ್ಲಿ ನಟ ದರ್ಶನ್ ಮತ್ತು ಇತರೆ ಆರೋಪಿಗಳ ಬಟ್ಟೆಗಳಲ್ಲಿನ ರಕ್ತದ ಕಲೆಗಳನ್ನು ಪರೀಕ್ಷೆಗೆ ಒಳಪಡಿಸಿದ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಗಳು ಒಳಗೊಂಡಿವೆ.

**ಅಂಗಲಾಚಿದ ರೇಣುಕಾ ಸ್ವಾಮಿ**

**ಆರೋಪಿ ಪ್ರದೂಶ್‌ನ ಮೊಬೈಲ್ ಫೋನ್‌ನಿಂದ ಫೋಟೋವೊಂದನ್ನು ಪೊಲೀಸರು ಹೊರತೆಗೆದಿದ್ದಾರೆ. ಇದರಲ್ಲಿ ಹತ್ಯೆಯಾದ ರೇಣುಕಾಸ್ವಾಮಿ, ತನ್ನನ್ನು ಥಳಿಸದಂತೆ ಆರೋಪಿಗಳ ಎದುರು ಅಂಗಲಾಚುವುದು ಕಂಡುಬಂದಿದೆ. ಪಟ್ಟಣಗೆರೆ ಶೆಡ್‌ನಲ್ಲಿ ದರ್ಶನ್ ಇದ್ದ ಸಿಸಿಟಿವಿ ವಿಡಿಯೋ ದೃಶ್ಯ, ರೇಣುಕಾಚಾರ್ಯ ಮೇಲೆ ಹಲ್ಲೆ ನಡೆಸಲು ನಟಿ ಪವಿತ್ರಾ ಗೌಡ ಬಳಿಸಿದ್ದರು ಎನ್ನಲಾದ ಚಪ್ಪಲಿಯಲ್ಲಿ ಇದ್ದ ರಕ್ತದ ಕಲೆಗಳನ್ನು ಸಾಕ್ಷ್ಯಗಳನ್ನಾಗಿ ಪೊಲೀಸರು ಉಲ್ಲೇಖಿಸಿದ್ದಾರೆ. ರೇಣುಕಾಸ್ವಾಮಿಯನ್ನು ಶೆಡ್‌ಗೆ ಕರೆತರಲಾಗಿದೆ ಎಂದು ಮಾಹಿತಿ ಸ್ವೀಕರಿಸಿದ ಸಂದೇಶವನ್ನು ದರ್ಶನ್ ಫೋನ್‌ನಿಂದ ಪಡೆದುಕೊಳ್ಳಲಾಗಿದೆ. ಪಬ್‌ನಲ್ಲಿದ್ದ ದರ್ಶನ್, ಶೆಡ್‌ಗೆ ಹೋಗಿದ್ದು ಮತ್ತು ರೇಣುಕಾಸ್ವಾಮಿ ಮೇಲೆ ಹಲ್ಲೆ ನಡೆಸಿದ ಬಳಿಕ ಮರಳಿ ಬಂದಿದ್ದರು ಎನ್ನಲಾದ ಸಿಸಿಟಿವಿ ವಿಡಿಯೋಗಳನ್ನು ಸಹ ಪಡೆಯಲಾಗಿದೆ.**

**ದರ್ಶನ್ ಅವರು ಬಟ್ಟೆ ಬದಲಿಸಲು ತಮ್ಮ ಮನೆಗೆ ಹೋಗಿದ್ದು, ಇದರ ವಿಡಿಯೋ ಕೂಡ ಪೊಲೀಸರು ಪಡೆದಿದ್ದಾರೆ. ಮುಖ್ಯವಾಗಿ ತನಿಖಾಧಿಕಾರಿಗಳು 24 ಸಾಕ್ಷಿಗಳ ಹೇಳಿಕೆಗಳನ್ನು ನ್ಯಾಯಾಧೀಶರ ಮುಂದೆ ದಾಖಲಿಸಿದ್ದಾರೆ. ಪ್ರಕರಣದಲ್ಲಿ ಅಪ್ರೂವರ್ ಆಗಲು ಒಪ್ಪಿಕೊಂಡಿರುವ ಆರೋಪಿಯ ಹೇಳಿಕೆಗಳನ್ನು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ.**

**ಪ್ರಾಸಿಕ್ಯೂಟರ್ ಪರಿಶೀಲನೆ**

**ಚಾರ್ಜ್‌ಶೀಟ್‌ನ್ನು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅವರಿಂದ ಪರಿಶೀಲನೆ ಕೂಡ ನಡೆದಿದೆ. ಅವರು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಅದನ್ನು ಅನುಸರಿಸುತ್ತಿದ್ದೇವೆ ಎಂದು ಹೇಳಿದರು. ಈ ಪ್ರಕರಣದ ತನಿಖೆಯು ಪಶ್ಚಿಮ ವಿಭಾಗದ ಉಪ ಪೊಲೀಸ್ ಆಯುಕ್ತ ಗಿರೀಶ್. ಎಸ್ ನೇತೃತ್ವದ ಎಸಿಪಿ ಚಂದನ್ ಕುಮಾರ್.ಎನ್ ಹಾಗೂ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಒಳಗೊಂಡ ತನಿಖಾ ತಂಡವು ಕೈಗೊಂಡಿತ್ತು. ಹಗಲಿರುಳು ಶ್ರಮವಹಿಸಿ ವೈಜ್ಞಾನಿಕ ತಾಂತ್ರಿಕ ಸೇರಿದಂತೆ ಎಲ್ಲಾ ಆಯಾಮಗಳಲ್ಲಿ ಸಾಕ್ಷಾಧಾರಗಳನ್ನು ಸಂಗ್ರಹಿಸಿ ಆರೋಪಪಟ್ಟಿ ಸಿದ್ಧಪಡಿಸಿದೆ.**

**ಪ್ರಭಾವಕ್ಕೆ ಮಣಿಯದ ಪೊಲೀಸ್**

**ಯಾವ ಪ್ರಭಾವ, ಒತ್ತಡಕ್ಕೂ ಒಳಗಾಗದೇ 17 ಆರೋಪಿಗಳ ವಿರುದ್ಧ ಸಾಕ್ಷ್ಯ ಸಂಗ್ರಹ ಮಾಡಿ ಕೊಲೆಯಾದ 88 ದಿನಕ್ಕೆ ಯಶಸ್ವಿಯಾಗಿ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದ್ದಾರೆ. ಮಾತ್ರವಲ್ಲದೇ ರಾಜಕಾರಣಿಗಳು, ಉದ್ಯಮಿಗಳು ಸೇರಿದಂತೆ ಸಾಕಷ್ಟು ಮಂದಿಯ ಒತ್ತಡವಿತ್ತು. ಇದ್ಯಾವುದಕ್ಕೂ ಜಗ್ಗದೆ ಪೊಲೀಸ್ ಅಧಿಕಾರಿಗಳು ಆರೋಪಿಗಳನ್ನೆಲ್ಲಾ ಬಂಧಿಸಿ ಬರೋಬ್ಬರಿ 231 ಸಾಕ್ಷ್ಯಗಳನ್ನು ಒಳಗೊಂಡ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ.**

## ನಾನು ಅರೋಗ್ಯವಾಗಿದ್ದೇನೆ ಮಾಜಿ ಬಿಜೆಪಿ ಸಚಿವ ಡಿಸ್ಚಾರ್ಜ್

• ಉದಯವಾಹಿನಿ, ಬೆಂಗಳೂರು

ಮಾಜಿ ಶಿಕ್ಷಣ ಸಚಿವ ಹಾಗೂ ಹಾಲಿ ರಾಜಾಜಿನಗರ ಕ್ಷೇತ್ರದ ಬಿಜೆಪಿಯ ಶಾಸಕ ಎಸ್.ಸುರೇಶ್ ಕುಮಾರ್ ಅವರಿಗೆ ರೂಪಾಂತರಿ ಚಿಕನ್ ಗುನ್ಯಾಯಿಂದ ಬಳಳುತ್ತಿದ್ದರು ಹಾಗಾಗಿ ನಿನ್ನೆ ಆರೋಗ್ಯದಲ್ಲಿ ಅವರಿಗೆ ಏರುಪೇರಾಗಿತ್ತು. ಇದೀಗ ಅವರನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿದೆ. ಹೌದು ರೂಪಾಂತರಿ ಚಿಕುನ್ ಗುನ್ಯಾ ಸೋಂಕು ತಗುಲಿದ ಕಾರಣ ಸುರೇಶ್ ಕುಮಾರ್ ಕೆಲ ದಿನಗಳ ಹಿಂದೆ ಶೇಷಾದ್ರಿಪುರದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ವೈದ್ಯರು ಐಸಿಯು ಘಟಕದಲ್ಲಿ ಸುರೇಶ್ ಕುಮಾರ್‌ಗೆ ಚಿಕಿತ್ಸೆ ನೀಡಿದ್ದಾರೆ. ಈಗ ಸುರೇಶ್ ಕುಮಾರ್ ಗುಣಮುಖರಾಗಿದ್ದು, ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಮನೆಗೆ ತೆರಳಿದ್ದಾರೆ. ರಾಜಾಜಿನಗರದ ಬಿಜೆಪಿ ಶಾಸಕ ಎಸ್ ಸುರೇಶ್ ಕುಮಾರ್ ಅವರು ಮ್ಯೂಟೆಂಟ್ ಚಿಕನ್ ಗುನ್ಯಾದಿಂದ ಬಳಲುತ್ತಿದ್ದರು.ಅಲ್ಲದೇ ಅವರಿಗೆ ಬ್ರೈನ್ ಹಾಗೂ ಸ್ಪೈನಲ್ ಕಾರ್ಡ್ ಸಮಸ್ಯೆ ಕಾಣಿಸಿಕೊಂಡಿತ್ತು ಎನ್ನಲಾಗಿದೆ. ಕಳೆದ ನಾಲ್ಕು ದಿನಗಳಿಂದ ತೀರ್ವ ಜ್ವರದಿದ ಬಳಲುತ್ತಿದ್ದಂತ ಅವರನ್ನು ಶೇಷಾದ್ರಿಪುರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಇದೀಗ ಅವರು ಗುಣಮುಖರಾಗಿದ್ದು, ಡಿಸ್ಚಾರ್ಜ್ ಆಗಿದ್ದಾರೆ.

## ಹಾಲು ಉತ್ಪಾದಕರಿಗೆ ದ್ರೋಹ ದರ ಹೆಚ್ಚಿಸದಿದ್ದರೆ ಹೋರಾಟ

• ಉದಯವಾಹಿನಿ, ಬೆಂಗಳೂರು

ಹಾಲು ಉತ್ಪಾದಕರಿಗೆ ದ್ರೋಹ ಬಗೆಯುವುದೇ ಕಾಂಗ್ರೆಸ್ ಸರ್ಕಾರದ ಏಕೈಕ ಅಜೆಂಡಾ ಆಗಿದೆ ಎಂದು ರಾಜ್ಯ ಬಿಜೆಪಿ ಕಿಡಿ ಕಾರಿದೆ. ಚುನಾವಣೆಗೂ ಮುನ್ನ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ 7 ರೂಪಾಯಿ ಸಬ್ಸಿಡಿ ನೀಡುತ್ತೇವೆಂದು ಬೋಗಸ್ ಗ್ಯಾರಂಟಿ ನೀಡಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಇಲ್ಲಿಯವರೆಗೂ ಹಾಲು ಉತ್ಪಾದಕರಿಗೆ ನೀಡುವ ದರವನ್ನು ಗಣನೀಯವಾಗಿ ಕಡಿತಗೊಳಿಸುತ್ತಾ, ಈಗ ಮತ್ತೊಮ್ಮೆ ಪ್ರತಿ ಲೀಟರ್ ಮೇಲೆ 1.5 ರೂ. ಕಡಿತಗೊಳಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ. ಸಿಎಂ ಸಿದ್ದರಾಮಯ್ಯನವರೆ, ಕೂಡಲೇ ಹಾಲು ಉತ್ಪಾದಕರಿಗೆ ದರ ಹೆಚ್ಚಿಸದಿದ್ದಲ್ಲಿ ಹೋರಾಟ ಖಚಿತ ಎಂದು ಎಚ್ಚರಿಕೆ ನೀಡಿದೆ.

## ಎಲೆಕ್ಟ್ರಿಕಲ್ ವಾಹನಗಳ ತಾಣವಾಗಿ ಭಾರತ : ಕೇಂದ್ರ ಸಚಿವ ಎಚ್ಡಿಕೆ

• ಉದಯವಾಹಿನಿ, ನವದೆಹಲಿ

ಮುಂದಿನ 2070ರ ವೇಳೆಗೆ ಶೂನ್ಯ ಹೊಗೆ ಹೊರಸೂಸುವಿಕೆಯನ್ನು ಸಾಧಿಸುವ ಉದ್ದೇಶವನ್ನು ಭಾರತ ಹೊಂದಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಕುಮಾರಸ್ವಾಮಿ ತಿಳಿಸಿದ್ದಾರೆ. ಎಲೆಕ್ಟ್ರಿಕ್ ಚಲನಶೀಲತೆಯನ್ನು ಅಳವಡಿಸಿಕೊಳ್ಳುವುದು, ಭಾರತದ ಸಾರಿಗೆ ವಲಯವನ್ನು ಆಧುನೀಕರಿಸುವ ನಿಟ್ಟಿನಲ್ಲಿ ಪರಿವರ್ತನೆಯ ಹೆಜ್ಜೆಯಾಗಿದೆ ಎಂದಿದ್ದಾರೆ. ಇದರಿಂದ ಪರಿಸರ ಪ್ರಯೋಜನಗಳನ್ನು ಮಾತ್ರವಲ್ಲದೆ, ಈ ಬದಲಾವಣೆಯು ಗಮನಾರ್ಹ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ಸಾಂಪ್ರದಾಯಿಕ ಇಂಧನಗಳ ಮೇಲೆ ದೇಶದ ಅವಲಂಬನೆಯನ್ನು ಕಡಿಮೆ ಮಾಡುತ್ತದೆ. ಸ್ವಚ್ಛವಾದ, ಹಸಿರು ಪರಿಸರ ಭವಿಷ್ಯಕ್ಕೆ ಕೊಡುಗೆ ನೀಡುತ್ತದೆ. ಈ ಉಪಕ್ರಮಗಳು ಸುಸ್ಥಿರ ಅಭಿವೃದ್ಧಿ ಮತ್ತು ತಾಂತ್ರಿಕ ಆವಿಷ್ಕಾರದಲ್ಲಿ ಜಾಗತಿಕ ನಾಯಕನಾಗಿ ಭಾರತದ ಸ್ಥಾನವನ್ನು ಬಲಪಡಿಸುತ್ತದೆ ಎಂದು ಅವರು ತಿಳಿಸಿದ್ದಾರೆ. ಭಾರೀ ಕೈಗಾರಿಕೆಗಳ ಸಚಿವಾಲಯವು ಭಾರತವನ್ನು ವಿದ್ಯುತ್ ಚಲನಶೀಲತೆಯ ಜಾಗತಿಕ ಕೇಂದ್ರವನ್ನಾಗಿ ಮಾಡಲು ದಣಿವರಿಯದೆ ಕೆಲಸ ಮಾಡುತ್ತಿದೆ. ವಿದ್ಯುತ್ ಚಾಲಿತ ವಾಹನಗಳ (ಇವಿ) ಪರಿಸರ ವ್ಯವಸ್ಥೆಯನ್ನು ಮುಂದುವರಿಸಲು ಕೈಗಾರಿಕಾ ಸಚಿವಾಲಯ ಅಚಲ ಬದ್ಧತೆಯನ್ನು ಹೊಂದಿದೆ ಎಂದು ಒತ್ತಿ ಹೇಳಿದರು.

## ಬಿಜೆಪಿ ಸದಸ್ಯತ್ವ ಅಭಿಯಾನ: ಪಕ್ಷದ ಕಾರ್ಯಕರ್ತರಿಗೆ ಟಾರ್ಗೆಟ್

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ದೊರೆತಿರುವ ಹಿನ್ನೆಲೆ, ಪಕ್ಷದ ಕಾರ್ಯಕರ್ತರಿಗೆ ವಿಪಕ್ಷ ನಾಯಕ ಆರ್ ಅಶೋಕ್ ಅವರು ಟಾರ್ಗೆಟ್ ಕೊಟ್ಟಿದ್ದಾರೆ. ಈ ಬಾರಿ ಎಷ್ಟು ಮತ ಬಿಜೆಪಿಗೆ ಬಂದಿದೆ ಅದರಲ್ಲಿ ಶೇ.75 ರಷ್ಟು ಜನರು ಸದಸ್ಯರಾಗಬೇಕು ಎಂದು ಹೇಳಿದರು.

ಬಿಜೆಪಿಯಲ್ಲಿ ಉಚಿತವಾಗಿ ಸದಸ್ಯತ್ವ ಮಾಡಿಕೊಳ್ಳುತ್ತದೆ. ಬಿಜೆಪಿ ಜೀವ ಇರುವುದೇ ಕಾರ್ಯಕರ್ತರಲ್ಲಿ ಎಂದರು. ಕಾಂಗ್ರೆಸ್‌ನವರಿಗೆ ಸದಸ್ಯರು ಎಷ್ಟಿದ್ದಾರೆ ಎಂಬುದು ಮುಖ್ಯ ಅಲ್ಲ, ಕುಟುಂಬ ಇದೆಯೋ ಇಲ್ಲವೋ ಎನ್ನುವುದೇ ಮುಖ್ಯ ಅವರಿಗೆ. ರಾಹುಲ್ ಗಾಂಧಿ ದೇಶ ಬಿಟ್ಟು ಹೋದರೆ ಏನು ಕಥೆ ಅವರದ್ದು ಲೀಡರ್ ಬೇಸ್ ಪಕ್ಷ. ಕಾಂಗ್ರೆಸ್‌ನವರು 1 ರೂ. ನೀಡಿ ಸದಸ್ಯತ್ವ ಮಾಡಿಕೊಳ್ಳುತ್ತಿದ್ದರು. ಹೆಚ್ಚು ಸದಸ್ಯತ್ವ ಆಗಿದೆ ಎಂದು ತೋರಿಸಲು ಈ ತರಹ ಮಾಡುತ್ತಿದ್ದರು ಎಂದು ಹೇಳಿದರು.


## ರಾಜ್ಯ ಸರ್ಕಾರದ ಪತನ ಕುರಿತು ಸ್ಫೋಟಕ ಬೊಮ್ಮಾಯಿ ಮಾಹಿತಿ

• ಉದಯವಾಹಿನಿ, ಹಾವೇರಿ

ಇನ್ನು ಎರಡು ತಿಂಗಳಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರುವುದಿಲ್ಲ. ಆ ರೀತಿಯ ರಾಜಕೀಯ ಪರಿಸ್ಥಿತಿ ರಾಜ್ಯದಲ್ಲಿ ಇದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಇಂದು ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಹೋತನಹಳ್ಳಿ ಗ್ರಾಮದಲ್ಲಿ ಭಾರತೀಯ ಜನತಾ ಪಕ್ಷದ ವತಿಯಿಂದ ಏರ್ಪಡಿಸಿದ ಸದಸ್ಯತಾ ಅಭಿಯಾನದಲ್ಲಿ ಪಾಲ್ಗೊಂಡು ಅಭಿಯಾನಕ್ಕೆ ಚಾಲನೆ ಕೊಟ್ಟು ಮಾತನಾಡಿದರು. ರಾಜ್ಯ ಸರ್ಕಾರದ ಬಳಿ ಹಣವಿಲ್ಲ. ನಾವಿದ್ದಾಗ ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುತ್ತಿದ್ದೆವು ಅದನ್ನು ನಿಲ್ಲಿಸಿದರು. ಡಿಸೆಲ್ ಸಬ್ಸಿಡಿ ಕೊಡುತ್ತಿದ್ದೆವು ಅದನ್ನು ನಿಲ್ಲಿಸಿದರು. ಇದು ರೈತರು ಹಾಗೂ ವಿದ್ಯಾರ್ಥಿಗಳ ವಿರೋಧಿ ಸರ್ಕಾರ ಗ್ಯಾರೆಂಟಿಯಿಂದ ವಿದ್ಯಾರ್ಥಿಗಳಿಗೆ ಬಸ್‌ನಲ್ಲಿ ಜಾಗ ಇಲ್ಲದಂತಾಗಿದೆ. ಹಣಕಾಸಿನ ದಿವಾಳಿತನಕ್ಕೆ ಬಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ರೀತಿ ಮುಂದುವರೆದರೆ ಸಂಧ್ಯಾ ಸುರಕ್ಷಾ, ವಿಧವಾ ವೇತನ, ಅಂಗನವಾಡಿ ಕಾರ್ಯಕರ್ತರ ವೇತನ ನಿಲ್ಲುತ್ತದೆ. ನಾವು ಒಂದು ಭವಿಷ್ಯ ಹೇಳುತ್ತೇನೆ. ನಾವು ದೊಡ್ಡ ಮಟ್ಟದಲ್ಲಿ ಸದಸ್ಯತ್ವ ಅಭಿಯಾನ ಮಾಡಬೇಕು. ರೈತರು, ಮಹಿಳೆಯರು, ಯುವಕರನ್ನು ಬೂತ್ ಮಟ್ಟದಲ್ಲಿ ಸದಸ್ಯರನ್ನಾಗಿ ಮಾಡಬೇಕು. ನಂತರ ದೊಡ್ಡ ಸಮಾವೇಶ ಮಾಡೋಣ, ಬರುವ ನವೆಂಬರ್‌ನಲ್ಲಿ ಉಪ ಚುನಾವಣೆ ಬರಲಿದ್ದು ಅದಕ್ಕೂ ಮುನ್ನ ಸದಸ್ಯತ್ವ ಅಭಿಯಾನ ಯಶಸ್ವಿಯಾಗಬೇಕು. ಮುಂಬರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿ ಚುನಾವಣೆಗಳಲ್ಲಿ ನಾವು ಜಯಭೇರಿ ಬಾರಿಸಬೇಕು ಎಂದು ಹೇಳಿದರು.



**ರಾಜೀನಾಮೆ ಕೊಟ್ಟರೆ ಮರ್ಯಾದೆ ಉಳಿಯುತ್ತೆ**

**ಮುಡಾ ಹಗರಣದ ಬಗ್ಗೆ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಅವರು ರಾಜೀನಾಮೆ ನೀಡುವ ಪರಿಸ್ಥಿತಿ ಎದುರಾಗುತ್ತದೆ. ತೀರ್ಪು ಬರುವ ಮುನ್ನ ರಾಜೀನಾಮೆ ನೀಡಿದರೆ ಅವರ ಮರ್ಯಾದೆ ಉಳಿಯುತ್ತದೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹೇಳಿದರು. ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ತಪ್ಪು ಸಾಭೀತಾಗುತ್ತಿವೆ. ಅವರ ಪದತ್ಯಾಗ ನೂರಕ್ಕೆ ನೂರು ಖಚಿತ. ಅವರು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದರು.'**

## ರಾಮೇಶ್ವರಂ ಕೆಫೆ ಸ್ಫೋಟ ಕೇಸ್ ಕ್ಷಮೆಯಾಚಿಸಿದ ಕೇಂದ್ರ ಸಚಿವೆ!

• ಉದಯವಾಹಿನಿ, ಬೆಂಗಳೂರು



ರಾಮೇಶ್ವರಂ ಕೆಫೆ ಸ್ಫೋಟ ಕೇಸ್ ಗೆ ಸಂಬಧಪಟ್ಟಂತೆ ಹೈಕೋರ್ಟ್ ನಲ್ಲಿ ಸಚಿವೆ ಶೋಭಾ ಕರಂದ್ಲಾಜೆ ಆವರು ಕ್ಷಮೆಯಾಚಿಸಿದ್ದಾರೆ.

ಬೆಂಗಳೂರು ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ಉಗ್ರ ತಮಿಳುನಾಡಿನಲ್ಲಿ ತರಬೇತಿ ಪಡೆದಿದ್ದ ಎಂಬ ಹೇಳಿಕೆ ನೀಡಿದ್ದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ಭಾರೀ ಆಕ್ರೋಶ ವ್ಯಕ್ತವಾಗಿತ್ತು. ಅದರಲ್ಲೂ ತಮಿಳುನಾಡು ಸರ್ಕಾರ ಸೇರಿದಂತೆ ಅಲ್ಲಿನ ಜನಪ್ರತಿನಿಧಿಗಳು ಕಿಡಿಕಾರಿದ್ದರು. ಇದೀಗ ಈ ಸಂಬಂಧ ಶೋಭಾ ಕರಂದ್ಲಾಜೆ ಅವರು ಮದ್ರಾಸ್ ಹೈಕೋರ್ಟ್ ನಲ್ಲಿ ತಮಿಳುನಾಡಿನ ಜನರ ಕ್ಷಮೆಯಾಚಿಸಿದ್ದಾರೆ. ಈ ಕುರಿತು ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿ ಮದ್ರಾಸ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದ್ದು, ಅದರ ವಿಚಾರಣೆ ಸೆಪ್ಟೆಂಬರ್ 3 ರಂದು ನಡೆಯಿತು. ಶೋಭಾ ಪರ ವಾದ ಮಂಡಿಸಿದ ವಕೀಲರು, ಸಚಿವರ ಹೇಳಿಕೆಗೆ ಸಂಬಂಧಿಸಿ ತಮಿಳುನಾಡು ಜನರ ಕ್ಷಮೆಯಾಚಿಸುವುದಾಗಿ ಅಫಿಡವಿಟ್ ಸಲ್ಲಿಸಲಾಗಿದೆ. ತಮಿಳುನಾಡಿನ ಮುಖ್ಯ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರದಿಂದ ಸೂಕ್ತ ಸೂಚನೆ ಪಡೆದ ನಂತರ ತಿಳಿಸುವೆ ಎಂದು ಹೇಳಿದ್ದಾರೆ.

## ಮೈಸೂರು ಮುಡಾ ಹಗರಣ ಸಂಬಂಧ ಸಿಎಂ ರಾಜೀನಾಮೆ ಅನಿವಾರ್ಯ

### ಛಲವಾದಿ ನಾರಾಯಣಸ್ವಾಮಿಯವರ ವಿರುದ್ಧ ರಾಜ್ಯಪಾಲರಿಗೆ ದೂರು ಕೊಡಲು ಹೋದಾಗ ಎಲ್ಲಿದ್ದರು ನಿಮ್ಮ ಮಹಾನ್ ನಾಯಕರು


• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಪಕ್ಷದ ಕೆಲವು ಮುಖಂಡರು ನಿನ್ನೆ ಛಲವಾದಿ ನಾರಾಯಣಸ್ವಾಮಿಯವರ ವಿರುದ್ಧ ರಾಜ್ಯಪಾಲರಿಗೆ ದೂರು ಕೊಡಲು ಹೋಗಿದ್ದರು. ಎಲ್ಲಿದ್ದರು ನಿಮ್ಮ ಮಹಾನ್ ನಾಯಕರು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಪ್ರಿಯಾಂಕ್ ಖರ್ಗೆಯವರನ್ನು ಪ್ರಶ್ನಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಅವರು ಮಾತನಾಡಿ, ಯಾಕೆ ಡಿ.ಕೆ.ಶಿವಕುಮಾರ್ ಇರಲಿಲ್ಲ ಯಾಕೆ ಮುಖ್ಯಮಂತ್ರಿಗಳು ಬರಲಿಲ್ಲ ಯಾಕೆ ನಿಮ್ಮ ಸರಕಾರದ ಇತರ ಹಿರಿಯ ಸಚಿವರು ನಿಮ್ಮದೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಪರವಾಗಿ ಕಾಂಗ್ರೆಸ್ ಪಕ್ಷದ ಯಾವುದೇ ಹಿರಿಯ ನಾಯಕರು ರಾಜಭವನದಲ್ಲಿ ಕಾಣಲಿಲ್ಲ. ಈ ವಿಷಯಕ್ಕೆ ಪ್ರಿಯಾಂಕ್ ಖರ್ಗೆಯವರು ಉತ್ತರಿಸಲಿ ಎಂದು ಆಗ್ರಹಿಸಿದರು.

ನಮ್ಮ ಪಕ್ಷದ ಮುಖಂಡ ಛಲವಾದಿ ನಾರಾಯಣಸ್ವಾಮಿಯವರು ಈಗಾಗಲೇ ಹೇಳಿಕೆ ಕೊಟ್ಟಿದ್ದಾರೆ. ಹಗರಣಗಳಲ್ಲಿ ಮುಳುಗಿದ ಕಾಂಗ್ರೆಸ್ ಪಕ್ಷ ಮತ್ತು ಕಾಂಗ್ರೆಸ್ ಸರಕಾರವು ತನ್ನನ್ನು ತಾನು ಕಾಪಾಡಲು ಮತ್ತು ಭ್ರಷ್ಟಾಚಾರದಿಂದ ನುಣುಚಿಕೊಳ್ಳಲು ಬಿಜೆಪಿ ಮೇಲೆ ಕೆಸರು ಎರಚುವ ಕೆಲಸ ಮಾಡುತ್ತಿದೆ ಎಂದು ಟೀಕಿಸಿದರು. ಬಿಜೆಪಿ ಮುಖಂಡರ ವಿರುದ್ಧ ಕೇಸುಗಳನ್ನು ದಾಖಲಿಸುವ ಪ್ರಯತ್ನದಲ್ಲಿದ್ದಾರೆ. ಇದ್ಯಾವುದಕ್ಕೂ ನಾವು ಅಂಜುವುದಿಲ್ಲ ಎಂದು ತಿಳಿಸಿದರು.





ಅಧಿಕಾರಿ ಅಮಾನತಿನ ಮೂಲಕ ಮುಖ್ಯಮಂತ್ರಿಗಳು ಹಾಗೂ ಕಾಂಗ್ರೆಸ್ ಸರಕಾರವು ಮೊದಲ ಬಾರಿಗೆ ಮುಡಾ ಹಗರಣ ನಡೆದುದನ್ನು ಒಪ್ಪಿಕೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಡಾ ಹಗರಣ ಸಂಬಂಧ ರಾಜೀನಾಮೆ ಕೊಡಲೇಬೇಕಾಗುತ್ತದೆ ಎಂದು ತಿಳಿಸಿದರು. ಕಾದು ನೋಡಿ ಎಂದರು. ನಾನು ರಾಷ್ಟ್ರೀಯ ಅಧ್ಯಕ್ಷರು, ಅಮಿತ್ ಶಾ ಅವರನ್ನು ಭೇಟಿ ಮಾಡಿದಾಗ ರಾಜ್ಯದ ಚನ್ನಪಟ್ಟಣ ಮತ್ತಿತರ ಕ್ಷೇತ್ರಗಳ ಉಪ ಚುನಾವಣೆ ಸಂಬಂಧ ಚರ್ಚೆ ಮಾಡಿದ್ದೇನೆ. ಯೋಗೇಶ್ವರ್ ಅವರು ಚನ್ನಪಟ್ಟಣ ಅಭ್ಯರ್ಥಿ ಆಗುವ ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಸಂಡೂರು, ಶಿಗ್ಗಾವಿಯಲ್ಲಿ ಅನೇಕ ಆಕಾಂಕ್ಷಿಗಳಿದ್ದಾರೆ. ನಾವು ರಾಜ್ಯಮಟ್ಟದಲ್ಲಿ ಚರ್ಚೆ ಮಾಡಿ, ಅಭ್ಯರ್ಥಿಗಳ ಹೆಸರನ್ನು ದೆಹಲಿಗೆ ಕಳಿಸಿಕೊಡುತ್ತೇವೆ ಎಂದು ಹೇಳಿದರು.

ಕೆಪಿಎಸ್ಸಿ ಮರು ಪರೀಕ್ಷೆ ಸಂಬಂಧ ಪ್ರಶ್ನೆಗೆ ಉತ್ತರ ಕೊಟ್ಟ ಅವರು, ಇಂಥ ಬೇಜವಾಬ್ದಾರಿ ಅಧಿಕಾರಿಯನ್ನು ಯಾಕೆ ಅಲ್ಲಿ ಇಟ್ಟುಕೊಂಡಿದ್ದಾರೆ ಎಂದು ಕೇಳಿದರು. ಪರೀಕ್ಷೆ ಮುಂದೂಡಿಕೆ ಒಂದು ಭಾಗ ಅಂಥ ಅಧಿಕಾರಿಗೆ ಶಿಕ್ಷೆ ಆಗಬೇಕಲ್ಲವೇ ಎಂದು ಪ್ರಶ್ನಿಸಿದರು. ಬೇಜವಾಬ್ದಾರಿ ಅಧಿಕಾರಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಆಗ್ರಹಿಸಿದರು. ಯುಪಿಎಸ್ಸಿ ಪರೀಕ್ಷೆ ದಿನದಂದೇ ಪಿಎಸ್‌ಐ ಪರೀಕ್ಷೆ ನಿರ್ಧರಿಸಿದ್ದು ಖಂಡಿತ ಸರಿಯಲ್ಲ ಎಂದು ತಿಳಿಸಿದರು.

**ಕಳೆದ ಬಾರಿ 1.04 ಕೋಟಿ ಸದಸ್ಯರ ನೋಂದಣಿ ಆಗಿತ್ತು. ಅದನ್ನು ಮೀರಿ ಸದಸ್ಯತ್ವ ನೋಂದಣಿ ಮಾಡುವ ಸಂಕಲ್ಪ ನಮ್ಮದು ಎಂದು ತಿಳಿಸಿದರು. ಅಟಲ್ ಬಿಹಾರಿ ವಾಜಪೇಯಿ ಅವರ 100ನೇ ಜನ್ಮದಿನದ ಆಚರಣೆಯ ಈ ಸಂದರ್ಭದಲ್ಲಿ ಸದಸ್ಯತ್ವ ಅಭಿಯಾನದ ಜೊತೆಜೊತೆಗೇ ಮೋದಿಜೀ ಅವರ 2047ನೇ ಇಸವಿಗೆ ಭಾರತವನ್ನು ವಿಕಸಿತ ರಾಷ್ಟ್ರವಾಗಿ, ಅಭಿವೃದ್ಧಿ ಹೊಂದಿದ ದೇಶವಾಗಿ ಪರಿವರ್ತನೆ ಮಾಡುವ ಸಂಕಲ್ಪಕ್ಕೆ ದೊಡ್ಡ ಶಕ್ತಿ ತುಂಬಲು ಸಮಾಜದ ವಿವಿಧ ಸ್ತರದ ಎಲ್ಲಾರನ್ನೂ ಕೂಡ, ಬೇರೆ ಬೇರೆ ಕ್ಷೇತ್ರದವರನ್ನು ಗುರುತಿಸಿ ಎಲ್ಲಾರನ್ನೂ ಸದಸ್ಯತ್ವದ ಅಭಿಯಾನದಲ್ಲಿ ನೋಂದಣಿ ಮಾಡುವ ಗುರಿ ಇದೆ**

**-ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

**87 ಕೋಟಿ ಹಗರಣ ಒಪ್ಪಿಕೊಂಡಿದ್ದರು**

**ಉಪ್ಪು ತಿಂದವರು ನೀರು ಕುಡಿಯಲೇ ಬೇಕಾಗುತ್ತದೆ. ವಾಲ್ಮೀಕಿ ನಿಗಮದ ಹಗರಣ ಆದಾಗ ಮತ್ತು ಅಧಿಕಾರಿ ಚಂದ್ರಶೇಖರ್ ಅವರು ಆತ್ಮಹತ್ಯೆ ಮಾಡಿಕೊಂಡಾಗ ಮುಖ್ಯಮಂತ್ರಿಗಳು ಸರಕಾರದಲ್ಲಿ ಯಾವುದೇ ಹಗರಣ ಆಗಿಲ್ಲ ಎಂದಿದ್ದರು. ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಾಲ್ಮೀಕಿ ನಿಗಮದಲ್ಲಿ 87 ಕೋಟಿ ಹಗರಣ ಆದುದನ್ನು ಸದನದಲ್ಲಿ ಒಪ್ಪಿಕೊಂಡಿದ್ದರು. ಮುಡಾದಲ್ಲಿ ಹಗರಣ ಆಗಿಲ್ಲ. ಬಿಜೆಪಿಯವರು ರಾಜಕಾರಣ ಮಾಡುತ್ತಿದ್ದಾರೆ ಎಂದು ತದನಂತರ ಆರೋಪಿಸಿದ್ದರು. ಈಗ ಪ್ರಕರಣ ಕೋರ್ಟಿನಲ್ಲಿದ್ದು, ಮುಡಾದ ಹಿಂದಿನ ಕಮೀಷನರ್ ಅನ್ನು ಅಮಾನತು ಮಾಡಿದ್ದಾರೆ ಎಂದು ಬಿ.ವೈ.ವಿಜಯೇಂದ್ರ ಅವರು ತಿಳಿಸಿದರು.**

**ಈ ದಿನದ ದರ** ಪೆಟ್ರೋಲ್: 103.44 ₹/L ಡೀಸೆಲ್ : 89.97 ₹/L ಬಂಗಾರ: ₹7,276/Gram24ct ₹6,669/Gram22ct ಬೆಳ್ಳಿ: ₹85.00/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಅರವಿನೊಳ್ಮರವೆ ಘಟಿಸದು

ನಿಜಗುಣರ ಪರಮಾನುಭವ ಬೋಧೆಯ ಮಾತು. ಪರಬ್ರಹ್ಮದಲ್ಲಿ ತೋರಿದ ಕಲ್ಪಿತ ಪುರುಷನಿಂದ ಮಿಥ್ಯಾ ಪ್ರಪಂಚ ತೋರುವುದು. ಹೊರತು ಪರಬ್ರಹ್ಮದಿಂದ ಈ ಜಗತ್ತು ತೋರದು. ಪರಬ್ರಹ್ಮ ಶುದ್ಧ ಜ್ಞಾನಸ್ವರೂಪ. ಸತ್ಯದಂತೆ ತೋರುವ ಜಗತ್ತು ಅಜ್ಞಾನದ್ದು. ಜ್ಞಾನ ಅಜ್ಞಾನಗಳಿಗೆ ಸಂಬಂಧ ಹೊಂದದು. ಸೂರ್ಯನ ಸನ್ನಿಧಿಯಲ್ಲಿ ಕತ್ತಲೆ ತೋರದು. ಪರಬ್ರಹ್ಮದ ಸಾನ್ನಿಧ್ಯದಲ್ಲಿ ಜಗತ್ತು ತೋರದು. ಆದ್ದರಿಂದ ಕಲ್ಪಿತ ಪುರುಷನ ಸಾನ್ನಿಧ್ಯದಲ್ಲಿ ಜಗತ್ತಿನ ತೋರಿಕೆ. ಕನಸ್ಸಿನ ಆಯಸ್ಕಾಂತ ಕನಸ್ಸಿನ ಲೋಹವನ್ನು ಪ್ರೇರಿಸುವಂತೆ, ಕಲ್ಪಿತ ಪುರುಷನೇ ಇಂದ್ರಿಯಾದಿಗಳನ್ನು ಜಗವನ್ನು ಪ್ರಚೋದಿಸುವನು. ಕನಸ್ಸಿನಲ್ಲಿ ತೋರಿದ ಆಯಸ್ಕಾಂತ, ಲೋಹ ಎರಡೂ ಸುಳ್ಳಾದಂತೆ ಕಲ್ಪಿತ ಪುರುಷ, ನಾಮರೂಪಾತ್ಮಕ ಜಗತ್ತು ಎರಡೂ ಸುಳ್ಳು. ಕನಸ್ಸಿನಲ್ಲಿ ಕಂಡ ಹುಲಿ ಹಾವಾದಿಗಳಿಂದ ಭಯವಾದಂತೆ, ಇಷ್ಟ ಸ್ತ್ರೀಪುರುಷಸಮಾಗಮ ಭೋಜನ ಸಂಪತ್ತಾದಿಗಳಿಂದ ಸುಖವಾದಂತೆ ಕಲ್ಪಿತ ಪುರುಷ ಹಾಗೂ ಜಗತ್ತು ಸುಳ್ಳಾದರೂ ವಿಷಯಾದಿಗಳಿಂದ ಸುಖ ದುಃಖ ಉಂಟಾಗುತ್ತವೆ. ಇಲ್ಲದ ಕಲ್ಪಿತ ಪುರುಷನಿಂದ ಇಲ್ಲದ ಜಗತ್ತು ತೋರುವುದು. ಮಾತ್ರವಲ್ಲ ತೋರಿಕೆ ನಿಜದಂತೆ ಹೊಳೆಯುವುದು ಕೃತಕ ಬಂಗಾರದಂತೆ. ತಿಳಿದು ನೋಡಲು ಚೈತನ್ಯರೂಪಿ ಪರಮಾತ್ಮನ ಹೊರತು ಬೇರೆ ಯಾವುದೂ ಇಲ್ಲ.

## ವಿದ್ಯುತ್ ಗುತ್ತಿಗೆದಾರನಿಂದ ಲಂಚ ಪಡೆಯುತ್ತಿದ್ದಾಗ ದಾಳಿ

• ಉದಯವಾಹಿನಿ,ದೇವನಹಳ್ಳಿ

ವಿದ್ಯುತ್ ಗುತ್ತಿಗೆದಾರನಿಂದ ಲಂಚ ಪಡೆಯುತ್ತಿದ್ದ ವೇಳೆ ಪಿಡಿಒ ಲೋಕಾಯುಕ್ತ ಬಲೆಗೆ ಬಿದ್ದಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯಲ್ಲಿ ನಡೆದಿದೆ. ಪದ್ಮನಾಭ ಲೋಕಾಯುಕ್ತ ಬಲೆಗೆ ಬಿದ್ದ ಪಿಡಿಒ. ಕುಂದಾಣ ಗ್ರಾಮ ಪಂಚಾಯಿತಿ ಪಿಡಿಒ ಆಗಿರುವ ಪದ್ಮನಾಭ, ಲೇಔಟ್‌ಗೆ ಕೇಬಲ್ ಹಾಕುವ ವಿಚಾರವಾಗಿ ಎನ್ ಒಸಿ ಗೆ 5 ಲಕ್ಷ ರೂಪಾಯಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ವಿದ್ಯುತ್ ಗುತ್ತಿಗೆದಾರ ಮಲ್ಲಿಕಾರ್ಜುನ ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದರು. ಅದಾಗಲೇ 3 ಲಕ್ಷ ರೂಪಾಯಿ ಹಣ ಪಡೆದಿದ್ದ ಪದ್ಮನಾಭ, ಬಾಕಿ 2 ಲಕ್ಷ ರೂಪಾಯಿ ಪಡೆಯುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಪಿಡಿಒ ಪದ್ಮನಾಭ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದು, ವಶಕ್ಕೆ ಪಡೆಯಲಾಗಿದೆ.

## ನಾರಾಯಣಸ್ವಾಮಿಗೆ ಕಾಂಗ್ರೆಸ್ ತಿರುಗೇಟು

• ಉದಯವಾಹಿನಿ, ಬೆಂಗಳೂರು

ಶಾಲೆಯ ಬದಲು ಬಿರಿಯಾನಿ ಹೋಟೆಲ್ ನಿರ್ಮಿಸಿದ್ದು ನಿಯಮ ಉಲ್ಲಂಘನೆ ಅಲ್ಲವೇ? ಎಂದು ಚಲವಾದಿ ನಾರಾಯಣಸ್ವಾಮಿಗೆ ಕಾಂಗ್ರೆಸ್ ತಿರುಗೇಟು ನೀಡಿದೆ. ಚಲವಾದಿ ನಾರಾಯಣಸ್ವಾಮಿಯವರೇ, ಸಿಎ ನಿವೇಶನವನ್ನು ಯಾರು ಬೇಕಿದ್ದರೂ ಪಡೆಯಬಹುದು, ಆ ನಿವೇಶನ ಇರುವುದು ಕೈಗಾರಿಕೆ ನಡೆಸುವುದಕ್ಕಲ್ಲ, ನಾಗರಿಕ ಸೌಲಭ್ಯ ನಿರ್ಮಿಸಲು ಸೀಮಿತ, ಸಿದ್ಧಾರ್ಥ ವಿಹಾರ ಟ್ರಸ್ಟ್ ಕೂಡ ಎಲ್ಲಾ ನಿಯಮಗಳನ್ನು ಪಾಲಿಸಿ, ಅರ್ಹತೆಯಿಂದಲೇ ಪಡೆದುಕೊಂಡಿದೆ. ಆದರೆ ನಾರಾಯಣಸ್ವಾಮಿ ಅವರು ಕರ್ನಾಟಕ ಗೃಹ ಮಂಡಳಿಯ ನಿರ್ದೇಶಕರಾಗಿದ್ದಾಗ ಶಾಲೆ ನಿರ್ಮಿಸುತ್ತೇನೆ ಎಂದು ತಮ್ಮ ಟ್ರಸ್ಟ್‌ಗೆ ನಿವೇಶನ ಮಂಜೂರು ಮಾಡಿಸಿಕೊಂಡಿದ್ದು ಅಧಿಕಾರ ದುರ್ಬಳಕೆ ಅಲ್ಲವೇ ಶಾಲೆಯ ಬದಲು ಬಿರಿಯಾನಿ ಹೋಟೆಲ್ ನಿರ್ಮಿಸಿದ್ದು ನಿಯಮ ಉಲ್ಲಂಘನೆ ಅಲ್ಲವೇ ಈ ಬಗ್ಗೆ ನಾರಾಯಣಸ್ವಾಮಿಯವರು ಮೌನಕ್ಕೆ ಜಾರಿರುವುದು ಏಕೆ ಉಂಡ ಮನೆಯ ಗಳ ಹಿರಿಯುವ ನಾರಾಯಣಸ್ವಾಮಿಯವರು ತಮ್ಮ ನಿವೇಶನ ಅಕ್ರಮದ ಬಗ್ಗೆ ಮಾತಾಡಲಿ. ರಾಜ್ಯಪಾಲರು ವಿಧಾನ ಪರಿಷತ್ ಸ್ಥಾನದಿಂದ ನಾರಾಯಣಸ್ವಾಮಿಯವರನ್ನು ವಜಾ ಮಾಡಲಿ ಎಂದು ಚಲವಾದಿ ನಾರಾಯಣಸ್ವಾಮಿಗೆ ಕಾಂಗ್ರೆಸ್ ತಿರುಗೇಟು ನೀಡಿದೆ.

## ಎಫ್‌ಐಆರ್ ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ವಾಪಾಸ್ ಪಡೆದ ಡಿವೈಎಸ್ ಪಿ ಶ್ರೀಧರ್ ಪೂಜಾರ್

• ಉದಯವಾಹಿನಿ, ಬೆಂಗಳೂರು

ಬಿಟ್ ಕಾಯಿನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್ ಐ ಆರ್ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಡಿವೈ ಎಸ್ ಪಿ ಶ್ರೀಧರ್ ಕೆ. ಪೂಜಾರ್ ಹಿಂಪಡೆದಿದ್ದಾರೆ.ಬಿಟ್ ಕಾಯಿನ್ ಪ್ರಕರಣ ಸಂಬಂಧ ದಾಖಲಾಗಿದ್ದ ಎಫ್ ಐ ಆರ್ ರದ್ದು ಕೋರಿ ಶ್ರೀಧರ್ ಪೂಜಾರ್ ಹೈಕೋರ್ಟ್ ನಲ್ಲಿ ಅರ್ಜಿ ಸಲ್ಲಿಸಿದ್ದರು. ಒಂದು ಕೇಸ್ ನಲ್ಲಿ ಜಾಮೀನು ಪಡೆದ ಬಳಿಕ ಈ ಕೇಸ್‌ಗೆ ಜೀವ ನೀಡಲಾಗಿದೆ.

ಪ್ರಕರಣ ಸಂಬಂಧ ಮಧ್ಯಂತರ ಜಾಮೀನು ಪಡೆಯಲಾಗಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ವಾದ ಮಂಡನೆಗೆ ಕಾಲಾವಕಾಶ ನೀಡುವಂತೆ ಶ್ರೀಧರ್ ಪೂಜಾರ್ ಪರ ವಕೀಲರು ಕೋರಿದ್ದರು. ಆದರೆ ಕಾಲಾವಕಾಶ ನೀಡಲು ಹೈಕೋರ್ಟ್ ನಿರಾಕರಿಸಿದೆ. ಈ ಹಿನ್ನೆಲೆಯಲ್ಲಿ ಪ್ರಕರಣ ರದ್ದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಶ್ರೀಧರ್ ಪೂಜಾರ್ ಹಿಂಪಡೆದಿದ್ದಾರೆ.

## ದೇವರಾಜೇಗೌಡ ವಿರುದ್ಧದ ಎಫ್ ಐಆರ್ ರದ್ದು ಮಾಡಿ ಹೈಕೋರ್ಟ್ ಆದೇಶ

• ಉದಯವಾಹಿನಿ, ಬೆಂಗಳೂರು

ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ವಕೀಲ ಜಿ.ದೇವರಾಜೇಗೌಡ ವಿರುದ್ಧ ದಾಖಲಾಗಿರುವ ಎಫ್ ಐ ಆರ್ ರದ್ದುಗೊಳಿಸಿ ಹೈಕೋರ್ಟ್ ಆದೇಶ ಹೊರಡಿಸಿದೆ. ಹಾಸನ ಜಿಲ್ಲಾಧಿಕಾರಿ ಸತ್ಯಭಾಮ ದಾಖಲಿಸಿರುವ ಎಫ್‌ಐಆರ್ ರದ್ದುಗೊಳಿಸಬೇಕೆಂದು ಕೋರಿ ದೇವರಾಜೇಗೌಡ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡ ಹೈಕೋರ್ಟ್ ಪೀಠ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು ಎಂದು ಹೈಕೋರ್ಟ್ ತನಿಖಾಧಿಕಾರಿಗಳಿಗೆ ಸೂಚನೆ ನೀಡಿತು.ಇದೀಗ ಎಫ್ ಐ ಆರ್ ರದ್ದುಗೊಳಿಸಿ ಹೈಕೋರ್ಟ್ ಆದೇಶ ಹೊರಡಿಸಿದೆ. ಅರ್ಜಿದಾರರ ವಿರುದ್ಧ ಪೊಲೀಸರು ನೋಟಿಸ್ ನೀಡಿ ಕಿರುಕುಳ ನೀಡಲಾಗುತ್ತಿದೆ ಎಂದು ವಕೀಲರು ಆಕ್ಷೇಪಿಸಿದರು. ಇದಕ್ಕೆ ನ್ಯಾಯಪೀಠ, ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು ಎಂದು ಆದೇಶಿಸಿ ವಿಚಾರಣೆಯನ್ನು ಮುಂದೂಡಿತು. ಇಂದು ಎಫ್ ಐ ಆರ್ ರದ್ದುಗೊಳಿಸಿ ಹೈಕೋರ್ಟ್ ಆದೇಶ ಹೊರಡಿಸಿದೆ.

## ಬಿಟ್ಟು ಬಿಡದೇ ಕಾಡುತ್ತಿರುವ ಚಿರತೆ ಕಾಟ: ಕ್ಯಾಲಸನಹಳ್ಳಿಯಲ್ಲಿ ಭಯಾನಕ ದೃಶ್ಯ

• ಉದಯವಾಹಿನಿ, ಬೆಂಗಳೂರು

ಬಿಟ್ಟು ಬಿಡದೇ ಕಾಡುತ್ತಿರುವ ಚಿರತೆ ಕಾಟದಿಂದ ಸ್ಥಳೀಯರು ಆತಂತಕ್ಕೀಡಾಗಿರುವ ಘಟನೆ ನಗರದ ಕ್ಯಾಲಸನಹಳ್ಳಿಯಲ್ಲಿ ನಡೆದಿದೆ. ಚಿರತೆಯ ಓಡಾಟವು ಕ್ಯಾಲಸನಹಳ್ಳಿ ಗ್ರಾಮದಲ್ಲಿ ಭಯದ ವಾತಾವರಣ ಸೃಷ್ಟಿ ಮಾಡಿದ್ದು, ಸಿಸಿಟಿವಿಯಲ್ಲಿ ಚಿರತೆಯ ಓಡಾಟ ದೃಶ್ಯ ಸೆರೆಯಾಗಿದೆ. ಜೊತೆಗೆ ಪ್ರಾಣಿಯನ್ನು ಹಿಡಿಯುವ ದೃಶ್ಯ ಕೂಡಾ ಸೆರೆಯಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿ ಬಳಿ ಚಿರತೆ ಹಿಡಿಯಲು ಗ್ರಾಮಸ್ಥರು ಮನವಿ ಮಾಡಿದ್ದಾರೆ. ಅಗತ್ಯ ಬಿದ್ದಲ್ಲಿ ಬೋನು ಇಡುವಂತೆ ರಿಕ್ವೆಸ್ಟ್ ಮಾಡಿದ್ದಾರೆ. ಇನ್ನೂ 2 ದಿನಗಳ ಹಿಂದಷ್ಟೇ ಚಿರತೆ ಕಾಣಿಸಿ ಕೊಂಡಿತ್ತು. ಮತ್ತೆ ಈಗ ಅದೇ ಕ್ಯಾಲಸನಹಳ್ಳಿ ಭಾಗದಲ್ಲಿ ಓಡಾಟ ಜೋರಾಗಿದೆ. ಇದ್ರಿಂದ ಜನರ ಎದೆ ಬಡಿತ ಮತ್ತಷ್ಟು ಹೆಚ್ಚಾಗಿದೆ.

# ಕಾಂಗ್ರೆಸ್‌ನಲ್ಲಿ ಎಷ್ಟು ಬಾಗಿಲಿದೆ, ಕಿತ್ತೋಗಿದೆ: ವಿಜಯೇಂದ್ರ

## ನಾರಾಯಣಸ್ವಾಮಿಯವರ ವಿರುದ್ಧ ರಾಜ್ಯಪಾಲರಿಗೆ ದೂರು, ಜಗನ್ನಾಥ ಭವನದಲ್ಲಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ


• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಪಕ್ಷದ ಕೆಲವು ಮುಖಂಡರು ನಿನ್ನೆ ಛಲವಾದಿ ನಾರಾಯಣಸ್ವಾಮಿಯವರ ವಿರುದ್ಧ ರಾಜ್ಯ ಪಾಲರಿಗೆ ದೂರು ಕೊಡಲು ಹೋಗಿದ್ದರು. ಎಲ್ಲಿದ್ದರು ನಿಮ್ಮ ಮಹಾನ್ ನಾಯಕರು ಎಂದು ಬಿಜೆಪಿ ರಾಜ್ಯಾಧ್ಯಕ್ಷ, ಶಾಸಕ ಬಿ.ವೈ.ವಿಜಯೇಂದ್ರ ಅವರು ಪ್ರಿಯಾಂಕ್ ಖರ್ಗೆಯವರನ್ನು ಪ್ರಶ್ನಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಅವರು ಮಾತನಾಡಿ, ಪ್ರಶ್ನೆಗೆ ಉತ್ತರಿಸಿದರು. ಯಾಕೆ ಡಿ.ಕೆ.ಶಿವಕುಮಾರ್ ಇರಲಿಲ್ಲ ಯಾಕೆ ಮುಖ್ಯಮಂತ್ರಿಗಳು ಬರಲಿಲ್ಲ ಯಾಕೆ ನಿಮ್ಮ ಸರಕಾರದ ಇತರ ಹಿರಿಯ ಸಚಿವರು ನಿಮ್ಮದೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಪರವಾಗಿ ಕಾಂಗ್ರೆಸ್ ಪಕ್ಷದ ಯಾವುದೇ ಹಿರಿಯ ನಾಯಕರು ರಾಜಭವನದಲ್ಲಿ ಕಾಣಲಿಲ್ಲ. ಈ ವಿಷಯಕ್ಕೆ ಪ್ರಿಯಾಂಕ್ ಖರ್ಗೆಯವರು ಉತ್ತರಿಸಲಿ ಎಂದು ಆಗ್ರಹಿಸಿದರು.

ನಮ್ಮ ಪಕ್ಷದ ಮುಖಂಡ ಛಲವಾದಿ ನಾರಾಯಣಸ್ವಾಮಿಯವರು ಈಗಾಗಲೇ ಹೇಳಿಕೆ ಕೊಟ್ಟಿದ್ದಾರೆ. ಹಗರಣಗಳಲ್ಲಿ ಮುಳುಗಿದ ಕಾಂಗ್ರೆಸ್ ಪಕ್ಷ ಮತ್ತು ಕಾಂಗ್ರೆಸ್ ಸರಕಾರವು ತನ್ನನ್ನು ತಾನು ಕಾಪಾಡಲು ಮತ್ತು ಭ್ರಷ್ಟಾಚಾರದಿಂದ ನುಣುಚಿಕೊಳ್ಳಲು ಬಿಜೆಪಿ ಮೇಲೆ ಕೆಸರು ಎರಚುವ ಕೆಲಸ ಮಾಡುತ್ತಿದೆ ಎಂದು ಟೀಕಿಸಿದರು. ಬಿಜೆಪಿ ಮುಖಂಡರ ವಿರುದ್ಧ ಕೇಸುಗಳನ್ನು ದಾಖಲಿಸುವ ಪ್ರಯತ್ನದಲ್ಲಿದ್ದಾರೆ.

ಇದ್ಯಾವುದಕ್ಕೂ ನಾವು ಅಂಜುವುದಿಲ್ಲ ಎಂದು ತಿಳಿಸಿದರು. ಕೆಪಿಎಸ್ಸಿ ಮರು ಪರೀಕ್ಷೆ ಸಂಬಂಧ ಪ್ರಶ್ನೆಗೆ ಉತ್ತರ ಕೊಟ್ಟ ಅವರು, ಇಂಥ ಬೇಜವಾಬ್ದಾರಿ ಅಧಿಕಾರಿಯನ್ನು ಯಾಕೆ ಅಲ್ಲಿ ಇಟ್ಟುಕೊಂಡಿದ್ದಾರೆ ಎಂದು ಕೇಳಿದರು. ಪರೀಕ್ಷೆ ಮುಂದೂಡಿಕೆ ಒಂದು ಭಾಗ; ಅಂಥ ಅಧಿಕಾರಿಗೆ ಶಿಕ್ಷೆ ಆಗಬೇಕಲ್ಲವೇ ಎಂದು ಪ್ರಶ್ನಿಸಿದರು. ಬೇಜವಾಬ್ದಾರಿ ಅಧಿಕಾರಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಆಗ್ರಹಿಸಿ ದರು. ಯುಪಿಎಸ್ಸಿ ಪರೀಕ್ಷೆ ದಿನದಂದೇ ಪಿಎಸ್‌ಐ ಪರೀಕ್ಷೆ ನಿರ್ಧರಿಸಿದ್ದು ಖಂಡಿತ ಸರಿಯಲ್ಲ ಎಂದು ತಿಳಿಸಿದರು. ದಿನಾಂಕ ಮರುಪರಿಶೀಲಿಸಲು ಒತ್ತಾಯಿಸಿದರು.



ಕಳೆದ ಬಾರಿ 1.04 ಕೋಟಿ ಸದಸ್ಯರ ನೋಂದಣಿ ಆಗಿತ್ತು. ಅದನ್ನು ಮೀರಿ ಸದಸ್ಯತ್ವ ನೋಂದಣಿ ಮಾಡುವ ಸಂಕಲ್ಪ ನಮ್ಮದು ಎಂದು ತಿಳಿಸಿದರು. ಅಟಲ್ ಬಿಹಾರಿ ವಾಜಪೇಯಿ ಅವರ 100ನೇ ಜನ್ಮದಿನದ ಆಚರಣೆಯ ಈ ಸಂದರ್ಭದಲ್ಲಿ ಸದಸ್ಯತ್ವ ಅಭಿಯಾನದ ಜೊತೆಜೊತೆಗೇ ಮೋದಿಜೀ ಅವರ 2047ನೇ ಇಸವಿಗೆ ಭಾರತವನ್ನು ವಿಕಸಿತ ರಾಷ್ಟ್ರವಾಗಿ, ಅಭಿವೃದ್ಧಿ ಹೊಂದಿದ ದೇಶವಾಗಿ ಪರಿವರ್ತನೆ ಮಾಡುವ ಸಂಕಲ್ಪಕ್ಕೆ ದೊಡ್ಡ ಶಕ್ತಿ ತುಂಬಲು ಸಮಾಜದ ವಿವಿಧ ಸ್ತರದ ಎಲ್ಲರನ್ನೂ ಕೂಡ, ಬೇರೆ ಬೇರೆ ಕ್ಷೇತ್ರದವರನ್ನು ಗುರುತಿಸಿ ಎಲ್ಲರನ್ನೂ ಸದಸ್ಯತ್ವದ ಅಭಿಯಾನದಲ್ಲಿ ನೋಂದಣಿ ಮಾಡುವ ಗುರಿ ಇದೆ ಎಂದರು.

**ಇವತ್ತು ರಾಜ್ಯದಲ್ಲಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಮಾನ್ಯ ಪ್ರಧಾನಿ ನರೇಂದ್ರ ಮೋದಿಜೀ ಅವರು ದೆಹಲಿಯಲ್ಲಿ ಈ ಅಭಿಯಾನಕ್ಕೆ ಚಾಲನೆ ಕೊಟ್ಟಿದ್ದಾರೆ ಎಂದು ವಿವರಿಸಿದರು. ರಾಜ್ಯದ ಎಲ್ಲ 224 ವಿಧಾನಸಭಾ ಕ್ಷೇತ್ರದಲ್ಲಿ ಅಭಿಯಾನ ನಡೆಯುತ್ತಿದೆ. ಪ್ರತಿಯೊಂದು ಬೂತ್‌ನಲ್ಲಿ ಕೂಡ ಕನಿಷ್ಠ 300 ರಿಂದ 400 ಸಂಖ್ಯೆಯಲ್ಲಿ ಸದಸ್ಯರನ್ನು ಮಾಡುವ ಗುರಿ ಇದೆ ಎಂದು ತಿಳಿಸಿದರು.**

**ಉಪ್ಪು ತಿಂದವರು ನೀರು ಕುಡಿಯಲೇ ಬೇಕಾಗುತ್ತದೆ. ವಾಲ್ಮೀಕಿ ನಿಗಮದ ಹಗರಣ ಆದಾಗ ಮತ್ತು ಅಧಿಕಾರಿ ಚಂದ್ರಶೇಖರ್ ಅವರು ಆತ್ಮಹತ್ಯೆ ಮಾಡಿಕೊಂಡಾಗ ಮುಖ್ಯಮಂತ್ರಿಗಳು ಸರಕಾರದಲ್ಲಿ ಯಾವುದೇ ಹಗರಣ ಆಗಿಲ್ಲ ಎಂದಿದ್ದರು. ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಾಲ್ಮೀಕಿ ನಿಗಮದಲ್ಲಿ 87 ಕೋಟಿ ಹಗರಣ ಆದುದನ್ನು ಸದನದಲ್ಲಿ ಒಪ್ಪಿಕೊಂಡಿದ್ದರು. ಮುಡಾದಲ್ಲಿ ಹಗರಣ ಆಗಿಲ್ಲ; ಬಿಜೆಪಿಯವರು ರಾಜಕಾರಣ ಮಾಡುತ್ತಿದ್ದಾರೆ ಎಂದು ತದನಂತರ ಆರೋಪಿಸಿದ್ದರು. ಈಗ ಪ್ರಕರಣ ಕೋರ್ಟಿನಲ್ಲಿದ್ದು, ಮುಡಾದ ಹಿಂದಿನ ಕಮೀಷನರ್ ಅನ್ನು ಅಮಾನತು ಮಾಡಿದ್ದಾರೆ ಬಿ.ವೈ.ವಿಜಯೇಂದ್ರ**

## ಮುಂಬಡ್ತಿ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಪ್ರಾಥಮಿಕ ಶಾಲಾ ಶಿಕ್ಷಕರ ಮುಂಬಡ್ತಿ ಹಾಗೂ ಇನ್ನಿತರ ಸೇವಾ ಬೇಡಿಕೆಗಳಿಗೆ ಸಂಬಂಧಿಸಿದಂತೆ ಒಂದು ತಿಂಗಳೊಳಗೆ ಸೂಕ್ತ ನಿರ್ಧಾರವನ್ನು ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗೃಹಕಚೇರಿ ಕೃಷ್ಣಾದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿಯೋಗದೊಂದಿಗೆ ಅವರ ಬೇಡಿಕೆಗಳ ಕುರಿತು ನಡೆದ ಸಭೆಯಲ್ಲಿ ಮಾತನಾಡಿದ ಸುಇಎಂ ಸಿದ್ದರಾಮಯ್ಯ, ಶಿಕ್ಷಣ ಸಚಿವರು ಹಾಗೂ ಅಧಿಕಾರಿಗಳೊಂದಿಗೆ, ಕಾನೂನು ತೊಡಕುಗಳು ಹಾಗೂ ಇನ್ನಿತರ ವಿಷಯಗಳ ಬಗ್ಗೆ ಸಮಗ್ರವಾಗಿ ಸಮಾಲೋಚನೆ ನಡೆಸಿ, ಪ್ರಾಥಮಿಕ ಶಾಲಾ ಶಿಕ್ಷಕರ ಬೇಡಿಕೆಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಈ ವೇಳೆ ಮಾತನಾಡಿದ ನಿಯೋಗದ ಪ್ರತಿನಿಧಿಗಳು 2017ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ತಿದ್ದುಪಡಿ ಮಾಡಿದ ಬಳಿಕ ಸೇವಾ ನಿಯಮಗಳನ್ನು ಪೂರ್ವಾನ್ವಯವಾಗುವಂತೆ ಅನುಷ್ಠಾನಗೊಳಿಸಬಾರದು. ಪದವೀಧರರಾಗಿರುವ 40 ಸಾವಿರಕ್ಕೂ ಹೆಚ್ಚು ಇರುವ ಪ್ರಾಥಮಿಕ ಶಾಲಾ ಶಿಕ್ಷಕ ರನ್ನು ಪದವೀಧರ ಶಿಕ್ಷಕರೆಂದು ಪರಿಗಣಿಸಿ ಆದೇಶ ಹೊರಡಿಸಬೇಕು. ನೇಮಕಾತಿ 7ನೇ ತರಗತಿವರೆಗೆ ಎಂದು ಹೇಳಿ ಈಗ 5ನೇ ತರಗತಿವರೆಗೆ ಎಂದು ಹಿಂಬಡ್ತಿ ನೀಡಲಾಗಿದೆ. ಆಯಾ ಜಿಲ್ಲಾ ನೇಮಕಾತಿ ಸಮಿತಿಯ ಮಟ್ಟದಲ್ಲಿ ಮುಖ್ಯೋಪಾಧ್ಯಾಯ ಹುದ್ದೆಗಳಿಗೆ ಈ ಮೊದಲು ಮುಂಬಡ್ತಿ ನೀಡಲಾಗುತ್ತಿತ್ತು.

ಅದನ್ನು ಕಳೆದ ಮೂರು ವರ್ಷಗಳಿಂದ ನಿಲ್ಲಿಸಲಾಗಿದ್ದು, ಇದನ್ನು ಮುಂದುವರೆಸಬೇಕು. ಪ್ರಾಥಮಿಕ ಶಾಲಾ ಶಿಕ್ಷಕರ ಮುಂಬಡ್ತಿಯಲ್ಲಿ, ಮುಂಬಡ್ತಿ ಹುದ್ದೆಗಳನ್ನು ಶೇ.50ರಷ್ಟು ನಿಗದಿಪಡಿಸಬೇಕು. ಮುಂಬಡ್ತಿ ಸಂದರ್ಭದಲ್ಲಿ ಸೇವಾ ಜೇಷ್ಟತೆಯನ್ನು ಪರಿಗಣಿ ಸಬೇಕು ಎಂದು ಮನವಿ ಮಾಡಿದರು.

## ಮಸೀದಿ ಅಭಿವೃದ್ಧಿ ಹಣದ ಬಗ್ಗೆ ಜಮೀರ್ ಅಹ್ಮದ್‌ಖಾನ್ ಹೇಳಿದ್ದೇನು?

• ಉದಯವಾಹಿನಿ, ಬೆಂಗಳೂರು

ಲಂಚ, ಭ್ರಷ್ಟಾಚಾರದ ವಿಷಯವೇ ರಾಜಕೀಯದಲ್ಲಿ ಹೆಚ್ಚು ಚರ್ಚೆಯಾಗುತ್ತಿದೆ. ಇದೀಗ ಕರ್ನಾಟಕದ ಪ್ರಮುಖ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಲಂಚ ತೆಗೆದುಕೊಂಡ್ರೆ ಜೈಲಿಗೆ ಹಾಕಿಸ್ತೀನಿ ಎಂದು ಗುಡುಗಿದ್ದಾರೆ. ಅಲ್ಲದೇ ಮಸೀದಿ ಅಭಿವೃದ್ಧಿ ಹಣದ ಬಗ್ಗೆಯೂ ಮಹತ್ವದ ಎಚ್ಚರಿಕೆ ನೀಡಿದ್ದಾರೆ.

ರಾಜ್ಯ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಖ್ಫ್ ಸಚಿವ ಜಮೀರ್ ಅಹ್ಮದ್‌ಖಾನ್ ವಖ್ಫ ಆಸ್ತಿಯ ಬಗ್ಗೆ ಕೇಂದ್ರ ಸರ್ಕಾರದ ಕಾನೂನಿನ ಬಗ್ಗೆಯೂ ಗುಡುಗಿದ್ದಾರೆ.

ಈಚೆಗಷ್ಟೇ ಜಮೀರ್ ಅಹ್ಮದ್ ಖಾನ್ ಅವರು ವಖ್ಫ್ ಆಸ್ತಿ ಸಂರಕ್ಷಣೆ ವಖ್ಫ್ ಆಸ್ತಿಯನ್ನು ಯಾವ ರೀತಿ ಸಂರಕ್ಷಣೆ ಮಾಡಿಕೊಳ್ಳಬೇಕು ಎನ್ನುವ ವಿಷಯಗಳ ಬಗ್ಗೆ ಮಾತನಾಡಿದ್ದರು. ಇದೀಗ ಮಸೀದಿ ಅಭಿವೃದ್ಧಿ ಹಣದ ಬಗ್ಗೆ ಮಹತ್ವದ ಸೂಚನೆಯನ್ನು ಜಮೀರ್ ಅಹ್ಮದ್ ಖಾನ್ ನೀಡಿದ್ದಾರೆ.



ಉದಯವಾಹಿನಿ ಚಿತ್ರ

ಅಲ್ಲದೇ, ಮಸೀದಿ ಅಭಿವೃದ್ಧಿ ಅನುದಾನ ಸೇರಿದಂತೆ ಸಮುದಾಯದ ಕಲ್ಯಾಣದ ನೀಡುವ ಹಣ ದುರ್ಬಳಕೆ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಖ್ಫ್ ಸಚಿವ ಜಮೀರ್ ಅಹಮದ್ ಖಾನ್ ಎಚ್ಚರಿಕೆ ನೀಡಿದ್ದಾರೆ.

ಗದಗ ಜಿಲ್ಲೆಗಳ ವಖ್ಫ್ ಅದಾಲತ್ ಉದ್ಘಾಟನೆ ಸಮಾರಂಭದಲ್ಲಿ ಅಧಿಕಾರಿಗಳಿಗೆ ಈ ಸೂಚನೆ ನೀಡಿದ್ದಾರೆ. ವಖ್ಫ್ ಬೋರ್ಡ್, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಿಂದ ಮಸೀದಿ ಅಭಿವೃದ್ಧಿ ಮತ್ತು ನಿರ್ವಹಣೆಗೆ ಆದ್ಯತೆ ನೀಡಲಾಗುತ್ತಿದೆ. ಅಲ್ಲದೇ ಮುಸ್ಲಿಂ ಸಮುದಾಯದ ಕಲ್ಯಾಣಕ್ಕೆ ಅನುದಾನವನ್ನು ನೀಡಲಾಗುತ್ತಿದೆ.

ಆದರೆ, ಈ ರೀತಿ ಸಮುದಾಯಕ್ಕೆ ಮೀಸಲಿಡುವ ಅನುದಾನದಲ್ಲಿ ಹಣ ದುರ್ಬಳಕೆ ಆಗುತ್ತಿರುವ ದೂರುಗಳು ಬಂದಿವೆ. ಈ ರೀತಿ ಹಣ ದುರ್ಬಳಕೆ ಮಾಡಿಕೊಳ್ಳುವವರ ವಿರುದ್ಧ ಗಂಭೀರ ಕ್ರಮ ತೆಗೆದುಕೊಳ್ಳುವುದಾಗಿ ಜಮೀರ್ ಅಹ್ಮದ್‌ಖಾನ್ ಅವರು ಎಚ್ಚರಿಸಿದ್ದಾರೆ.

## ಬಳ್ಳಾರಿ ಜೈಲಿಂದ ಬಿಡುಗಡೆ ಆಗಿದ್ದ ನಟೋರಿಯಸ್ ರೌಡಿ ಬಚ್ಚಾಖಾನ್ ಬಂಧನ

• ಉದಯವಾಹಿನಿ, ಬೆಂಗಳೂರು

**ಕೊಲೆ ಬೆದರಿಕೆ ಪ್ರಕರಣ**

ನಟ ದರ್ಶನ್ ಅವರ ಬಳ್ಳಾರಿ ಜೈಲಿಗೆ ಸ್ಥಳಾಂತರ ಆಗುವ ವೇಳೆ ಕುಖ್ಯಾತ ರೌಡಿ ಹೆಸರು ಕೇಳಿ ಬಂದಿತ್ತು. ನಟೋರಿಯಸ್ ರೌಡಿ ಬಚ್ಚಾ ಖಾನ್ ಇದ್ದ ಸೆಲ್‌ಗೆ ನಟ ದರ್ಶನ್ ಅವರನ್ನು ಸ್ಥಳಾಂತರಿಸಲಾಗುತ್ತದೆ ಎಂಬ ಮಾತು ಕೇಳಿ ಬಂದಿದೆ. ಆ ನಟೋರಿಯಸ್ ರೌಡಿ ಬಚ್ಚಾ ಖಾನ್ ಪೆರೋಲ್ ಮೇಲೆ ಹೊರಗಿದ್ದ, ಇದೀಗ ಆತನನ್ನು ಬೆಂಗಳೂರಿನಲ್ಲಿ ಹುಬ್ಬಳ್ಳಿ ಪೊಲೀಸರು ಬಂಧಿಸಿದ್ದಾರೆ.

ಹೌದು, ಬಳ್ಳಾರಿ ಜೈಲಿನಲ್ಲಿ ವಿಐಪಿ ಸೆಲ್‌ನಲ್ಲಿ ಇದ್ದ ಈತ ಇತ್ತೀಚೆಗೆ ಪೆರೋಲ್ ಪಡೆದು ಹೊರ ಬಂದಿದ್ದ. ಕೊಲೆ ಸಂಚು ಆರೋಪದಲ್ಲಿ ನಟೋರಿಯಸ್ ರೌಡಿ ಬಚ್ಚಾ ಖಾನ್ ಹಾಗೂ ಆತನ ಗ್ಯಾಂಗ್ ಅನ್ನು ರಾಜಧಾನಿಯಲ್ಲಿ ಪೊಲೀಸರು ಬಂಧಿಸಿದ ಘಟನೆ ಬುಧವಾರ ನಡೆದಿದೆ. ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಈ ಬಚ್ಚಾಖಾನ್ ಅನ್ನು ಬಳ್ಳಾರಿಯ ವಿಐಪಿ ಬ್ಯಾರೆಕ್‌ನಲ್ಲಿ ಇರಿಸಲಾಗಿತ್ತು. ಆತ ಪೆರೋಲ್ ಪಡೆದು ಹೊರ ಬಂದು ಮತ್ತೆ ಹಳೇ ಚಾಳಿ ಮುಂದುವರೆಸಿದ್ದ. ಹುಬ್ಬಳ್ಳಿಯಲ್ಲಿ ಮತ್ತೊಬ್ಬರಿಗೆ ಈ ಬಚ್ಚಾಖಾನ್ ಹಾಗೂ ಆತನ ಗ್ಯಾಂಗ್ ಹತ್ಯೆ ಬೆದರಿಕೆ ಹಾಕಿತ್ತು. ಆತನ



ಉದಯವಾಹಿನಿ ಚಿತ್ರ



ಹುಡುಕಾಟದಲ್ಲಿದ್ದ ಹುಬ್ಬಳ್ಳಿ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ. ಹುಬ್ಬಳ್ಳಿಯಲ್ಲಿ 2020ರಲ್ಲಿ ಫ್ರೂಟ್ ಇರ್ಫಾನ್ ಎಂಬುವವನನ್ನು ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ರೌಡಿಗೆ ಶಿಕ್ಷೆ ವಿಧಿಸಲಾಗಿತ್ತು. ಹೀಗಾಗಿ ಜೈಲು ಸೇರಿದ್ದ ಈತ ಪೆರೋಲ್ ಮೇಲೆ ಹೊರಗಿದ್ದ. ಇದೀಗ ಮತ್ತೆ ಕೊಲೆ ಬೆದರಿಕೆ ಪ್ರಕರಣದಲ್ಲಿ ಜೈಲುಪಾಲಾಗಿದ್ದಾನೆ.

**ಬಚ್ಚಾಖಾನ್ ಬಂಧನ ಕುರಿತು ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತ ಶಶಿಕುಮಾರ್ ಪ್ರತಿಕ್ರಿಯಿಸಿ, ಜಮೀನು ವ್ಯವಹಾರಕ್ಕೆ ಸಂಬಂಧಿಸಿದಂತೆ ಬಚ್ಚಾ ಖಾನ್ ಸಹಚರರ ತಂಡವು ನಗರದ ವ್ಯಕ್ತಿಯೋರ್ವನಿಗೆ ನಿರಂತರವಾಗಿ ಬೆದರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹು-ಧಾ ಸಿಸಿಬಿ ಪೊಲೀಸರು ನಟೋರಿಸ್ ರೌಡಿ ಬಚ್ಚಾ ಖಾನ್ ಸೇರಿದಂತೆ 8 ಜನರನ್ನು ಬಂಧಿಸಿದ್ದಾರೆ.**

## ಗುಂಡಿ ಗಂಡಾಂತರ: ಮಳೆಗೆ ಹೆದ್ದಾರಿಯಲ್ಲಿ ಕುಸಿದ ಬೃಹತ್ ಸ್ಲಾಬ್‌ಗಳು!

• ಉದಯವಾಹಿನಿ, ಬೆಂಗಳೂರು

ನಗರದ ಸರ್ವಿಸ್ ರಸ್ತೆಯಲ್ಲಿ ಗುಂಡಿ ಗಂಡಾಂತರ ಜೋರಾಗಿದ್ದು, ಹೆದ್ದಾರಿಯಲ್ಲಿ ಬೃಹತ್ ಸ್ಲಾಬ್‌ಗಳು ಕುಸಿದು ಬಿದ್ದಿದೆ. ಕೆಲ ವರ್ಷಗಳ ಹಿಂದೆ ದಾಸರಹಳ್ಳಿಯ ಎಂಟನೇ ಮೈಲಿ ಬಳಿ ಫ್ಲೈಓವರ್ ರಸ್ತೆಯ ಪಿಲ್ಲರ್‌ನಲ್ಲಿ ತಾಂತ್ರಿಕ ಸಮಸ್ಯೆಯಿಂದಾಗಿ ವಾಹನಗಳಿಗೆ ನಿಷೇಧ ಹೇರಲಾಯಿತು. ಇದರಿಂದಾಗಿ ಸಾಕಷ್ಟು ಸಮಸ್ಯೆ ಯಾಗಿ ಪ್ರತಿನಿತ್ಯ ಟ್ರಾಫಿಕ್ ಜಾಮ್‌ನಿಂದಾಗಿ ಸವಾರರು ಪರಿತಪ್ಪಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿ ಸುದ್ದಿಗೆ ಕಾರಣವಾಗಿತ್ತು. ಇತ್ತೀಚೆಗಷ್ಟೇ ನೆಲಮಂಗಲ ಹಾಗೂ ಗೊರಗುಂಟೆಪಾಳ್ಯ ನಡುವಿನ ರಾಷ್ಟ್ರೀಯ ಹೆದ್ದಾರಿಯು ಈ ಟ್ರಾಫಿಕ್ ಸಮಸ್ಯೆಗಳಿನ್ನು ತೆರವುಗೊಳಿಸಿ, ವಾಹನಗಳಿಗೆ ಸಂಚಾರಕ್ಕೆ ಅನುವು ಮಾಡಿಕೊಟ್ಟಿತ್ತು.

**ಪರಿತಪ್ಪಿಸುವಂತಹ ಪರಿಸ್ಥಿತಿ ನಿರ್ಮಾಣ**



ಉದಯವಾಹಿನಿ ಚಿತ್ರ

ಇಗೀಗ ಟೋಲ್ ಕಂಪನಿಯ ನಿರ್ಲಕ್ಷ್ಯದಿಂದ ಮತ್ತೊಂದು ಭಾರೀ ಅನಾಹುತಕ್ಕೆ ಕಾರಣವಾಗಿದೆ. ನೆಲಮಂಗಲದ ಕುಣಿಗಲ್ ಬೈಪಾಸ್, ಮಾಕಳಿ, ಮಾದನಾಯಕನಹಳ್ಳಿ, ಮಾದಾವಾರ ರಸ್ತೆಯ ಬಳಿ ಬೃಹತ್ ಗುಂಡಿಗಳಿಂದ ಸವಾರರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಕಳೆದ ಕೆಲವು ದಿನಗಳ ಹಿಂದೆ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬಂದ ಪರಿಣಾಮ ರಸ್ತೆಯ ಪಕ್ಕದ ಬೃಹತ್ ಸ್ಲಾಬ್‌ಗಳು ಕುಸಿದು ವಾಹನ ಸವಾರರ ಜೀವಕ್ಕೆ ಮೃತ್ಯು ಕೂಪವಾಗಿ ಪರಿಣಮಿಸಿವೆ.

**ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚಾರ ಮಾಡುವ ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾಗೂ ರಾಜ್ಯದ ಸುಮಾರು 17 ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಬೃಹತ್ ಗುಂಡಿಗಳ ಗಂಡಾಂತರದಿಂದ ಪರಿಸ್ಥಿತಿ ಹದಗೆಟ್ಟಿದೆ. ದ್ವಿಚಕ್ರ ವಾಹನ ಸವಾರರು ಸ್ವಲ್ಪ ಯಾಮಾರಿದರೂ ಜೀವಕ್ಕೆ ಸಂಚಕಾರ ತರಲಿದೆ. ಪ್ರತಿನಿತ್ಯ ಲಕ್ಷಾಂತರ ರೂಪಾಯಿ ಟೋಲ್ ಹಣ ಸಂಗ್ರಹಿಸುವ ಟೋಲ್ ಕಂಪನಿ ನಿರ್ವಹಣೆ ಮಾಡಬೇಕಿದ್ದು, ಸವಾರರ ಜೀವದ ಜೊತೆಗೆ ಚಲ್ಲಾಟವಾಡುತ್ತಿದ್ದಾರೆ ಎಂದು ಸವಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.**

## ಸಿದ್ದರಾಮಯ್ಯಗೆ ಹೆಚ್ಚಾಯ್ತು ಮತ್ತಷ್ಟು ಸಂಕಷ್ಟ!

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯಗೆ ಮುಡಾ ಸಂಕಷ್ಟ ಮತ್ತಷ್ಟು ಹೆಚ್ಚಾಗಿದೆ. ಹಿರಿಯ ನ್ಯಾಯವಾದಿ ರಾಘವನ್ ಅವರು ನ್ಯಾಯಾಧೀಶರ ಮುಂದೆ ಮಂಡಿಸಿದ ವಾದ ಸಿದ್ದರಾಮಯ್ಯರಿಗೆ ಮುಳುವಾಗಲಿದೆ.

ಮುಡಾದಿಂದ ಬದಲಿ ನಿವೇಶನ ಪಡೆದ ಬಹುತೇಕ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಅಧಿಕಾರದಲ್ಲಿದ್ದರು. 1997ರಲ್ಲಿ ಮುಡಾದಿಂದ ಸರ್ವೇ ನಂ 464 3.16 ಗುಂಟೆ ಜಮೀನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಬಳಿಕ 1998ರಲ್ಲಿ ಭೂಸ್ವಾಧೀನ ಕೈ ಬಿಡಲಾಗಿದೆ. ಈ ವೇಳೆ ಸಿದ್ದರಾಮಯ್ಯನವರು ಡಿಸಿಎಂ ಆಗಿದ್ದರು. 2004ರಲ್ಲಿ ಸಿದ್ದರಾಮಯ್ಯ ಪತ್ನಿ ಸಹೋದರನಿಂದ ಜಮೀನು ಖರೀದಿ ಮಾಡಿದ್ದಾರೆ. 2005ರಲ್ಲಿ ಕೃಷಿಯಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಲಾಗಿದೆ. ವೇಳೆಯೂ ಸಿದ್ದರಾಮಯ್ಯನವರು ಡಿಸಿಎಂ ಆಗಿದ್ದರು ಎಂಬುವುದು ಗಮನರ್ಹ ವಿಚಾರ. 2014ರಲ್ಲಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ಮುಡಾಗೆ ಅರ್ಜಿ ಸಲ್ಲಿಸಿದ್ದರು. ನಮ್ಮ ಜಮೀನನ್ನು ಮುಡಾ ವಶಕ್ಕೆ ಪಡೆದು ಅಭಿವೃದ್ಧಿ ಕಾರ್ಯ ಬಳಸಿಕೊಂಡಿದೆ. ರಸ್ತೆ, ಪಾರ್ಕ್, ನಿವೇಶನ ನಿರ್ಮಾಣ ಮಾಡಲಾಗಿದೆ. ಹೀಗಾಗಿ ಬದಲಿ ಭೂಮಿ ನೀಡುವಂತೆ ಪಾರ್ವತಿ ಅವರು ಮನವಿ ಪತ್ರ ಬರೆದಿದ್ದಾರೆ. ಈ ವೇಳೆ ಸಿದ್ದರಾಮಯ್ಯ ಸಿಎಂ ಆಗಿದ್ದರು. ಇನ್ನು 2017ರಲ್ಲಿ ಬದಲಿ ಜಮೀನು ನೀಡಲು ಸಭೆ ನಡೆಸಿ ನಿರ್ಣಯ ತೆಗೆದುಕೊಳ್ಳಲಾಯಿತು. ಈ ವೇಳೆಯೂ ಸಿದ್ದರಾಮಯ್ಯ ಸಿಎಂ ಆಗಿದ್ದರು. ಈ ಎಲ್ಲಾ ಕಾರಣಗಳಿಂದ ಸಿದ್ದರಾಮಯ್ಯ ಪ್ರಭಾವ ಕೆಲಸ ಮಾಡಿರುವ ಆರೋಪ ಕೇಳಿ ಬಂದಿದೆ.

**2004ರಲ್ಲಿ ಖರೀದಿ ಮಾಡಿದ್ದ ಜಮೀನು 2010ರಲ್ಲಿ ದಾನ ರೂಪವಾಗಿ ಸಿದ್ದರಾಮಯ್ಯ ಪತ್ನಿಗೆ ಸಿಕ್ಕದೆ. 2001ರಲ್ಲಿ ಮುಡಾ ಸದರಿ ಜಮೀನಿನಲ್ಲಿ ನಿವೇಶನ, ರಸ್ತೆ, ಉದ್ಯಾನವನ ನಿರ್ಮಾಣದ ಬಗ್ಗೆ ಖುದ್ದು ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರ ಮನವಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ.**

# ಯಾವುದೇ ಸಂದರ್ಭದಲ್ಲೂ ಚುನಾವಣೆ ಎದುರಿಸುವ ಸ್ಥಿತಿ ಬರಬಹುದು?

## ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸರ್ಕಾರ ಅಸ್ಥಿರಗೊಳ್ಳಲಿದೆ ವಿಪಕ್ಷಗಳ ನಾಯಕರು ಹೇಳಿಕೆ

• ಉದಯವಾಹಿನಿ, ಬೆಂಗಳೂರು

ಮುಡಾ, ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣ ರಾಜ್ಯ ಸರ್ಕಾರಕ್ಕೆ ತಲೆನೋವಾಗಿದೆ. ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸರ್ಕಾರ ಅಸ್ಥಿರಗೊಳ್ಳಲಿದೆ ಎಂದು ವಿಪಕ್ಷಗಳ ನಾಯಕರು ಹೇಳಿಕೆ ನೀಡುತ್ತಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಕುರಿತು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಮಾತನಾಡಿ, ಸದಸ್ಯತ್ವ ನೋಂದಣಿ ಕಾರ್ಯವು ಹಬ್ಬದ ಮಾದರಿಯಲ್ಲಿ ನಡೆಯಲಿ. ರಾಜ್ಯದಲ್ಲಿ ನಾವು ಯಾವುದೇ ಸಂದರ್ಭದಲ್ಲೂ ಚುನಾವಣೆ ಎದುರಿಸುವ ಸ್ಥಿತಿ ಬರಬಹುದು. ಆದ್ದರಿಂದ ಪಕ್ಷವನ್ನು ಬಲಪಡಿಸಲು ಶ್ರಮಿಸೋಣ ಎಂದು ಹೇಳಿದರು. ತಳಮುಖವಾಗಿ ಮೇಲಕ್ಕೆ ಬೆಳೆದ ಪಕ್ಷ ಬಿಜೆಪಿ. ಇದರ ಶಕ್ತಿ ನಾಯಕರಲ್ಲ, ಬಿಜೆಪಿ ಶಕ್ತಿ ಕಾರ್ಯಕರ್ತರ ರೂಪದಲ್ಲಿದೆ. ಸಮಾಜದ ಅನೇಕಾನೇಕ ಪ್ರಕೋಷ್ಠಗಳಲ್ಲಿ ಕೆಲಸ ಮಾಡುವವರೇ ಕಾರ್ಯಕರ್ತರು ಎಂದು ವಿಶ್ಲೇಷಿಸಿದರು. 1980ರಲ್ಲಿ ಶೇ1 ಮತ ಪಡೆದರೆ ಖುಷಿ ಪಡುವ ಪಕ್ಷ ನಮ್ಮದಾಗಿತ್ತು. ಇದೀಗ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೇ ಅತಿ ಹೆಚ್ಚು ಸದಸ್ಯರನ್ನು ಹೊಂದಿದ ಪಕ್ಷ ಬಿಜೆಪಿ. ಹಿಂದೆ ದೇಶದಲ್ಲಿ 18 ಕೋಟಿ ಸದಸ್ಯರಿದ್ದು, ರಾಜ್ಯದಲ್ಲಿ 1.04 ಕೋಟಿ ಸದಸ್ಯರಿದ್ದರು. ವಿಜಯೇಂದ್ರ ಅವರು ಅಧ್ಯಕ್ಷರಾದ ಬಳಿಕ ನವಚೈತನ್ಯ ನಮ್ಮ ಪಕ್ಷಕ್ಕೆ ಲಭಿಸಿದೆ ಎಂದು ವಿವರಿಸಿದರು. ನಮ್ಮ ಶಕ್ತಿ ಈಗ ಏರುಮುಖವಾಗುತ್ತಿದೆ ಎಂದರು. ಕಾಂಗ್ರೆಸ್ ಪಕ್ಷದ ಆಡಳಿತವುಳ್ಳ ರಾಜ್ಯಗಳು ಇಳಿಮುಖವಾಗುತ್ತಿದೆ ಎಂದು ತಿಳಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಮಾತನಾಡಿ, ಕೋವಿಡ್ ಅವಧಿಯಲ್ಲಿ ಜನರಿಗೆ ಸ್ಪಂದಿಸಿದ ಬಿಜೆಪಿ ಒಂದು ವಿಭಿನ್ನ ಸೇವಾಪರ ಪಕ್ಷ. ಕರ್ನಾಟಕವು ಸದಸ್ಯತ್ವದಲ್ಲಿ ಮುಂಚೂಣಿಯಲ್ಲಿ ಇರುವ ವಿಶ್ವಾಸವಿದೆ. 2047ನೇ ಇಸವಿಗೆ ಭಾರತವನ್ನು ವಿಕಸಿತ ರಾಷ್ಟ್ರವಾಗಿ, ಅಭಿವೃದ್ಧಿ ಹೊಂದಿದ ದೇಶವಾಗಿ ಮಾಡುವ ಕನಸು ಮಾನ್ಯ ಪ್ರಧಾನಿ ನರೇಂದ್ರ ಮೋದಿಜೀ ಅವರದು. ಮೋದಿಜೀ ಅವರಿಗೆ ಇನ್ನೂ ಹೆಚ್ಚು ಬಲ ಕೊಡುವ ಕೆಲಸ ನಡೆಸಬೇಕಿದೆ ಎಂದು ತಿಳಿಸಿದರು. ಅಭಿಯಾನದ ಯಶಸ್ವಿಗಾಗಿ ಪ್ರತಿ ಬೂತ್‌ಗಳಲ್ಲಿ ಕಾರ್ಯಕರ್ತರನ್ನು ಜೋಡಿಸಲಾಗಿದೆ ಎಂದರು. ಕಳೆದ ಬಾರಿ 1.04 ಕೋಟಿ ಸದಸ್ಯರ ನೋಂದಣಿ ಆಗಿತ್ತು. ಈ ಬಾರಿ ಇನ್ನೂ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಲಾಗುವುದು. ಎಲ್ಲ ಜನಪ್ರತಿನಿಧಿಗಳು, ಕಾರ್ಯಕರ್ತರು ಭಾಗವಹಿಸುತ್ತಾರೆ ಎಂದು ಹೇಳಿದರು. ಮುಂದಿನ 40-45 ದಿನಗಳ ಕಾಲ ಎರಡು ಹಂತಗಳ ಅಭಿಯಾನದಲ್ಲಿ ಭಾಗವಹಿಸೋಣ ಎಂದು ತಿಳಿಸಿದರು.

**ಕಾಂಗ್ರೆಸ್ ಸರ್ಕಾರಕ್ಕೆ ಕಂಟಕ**



ಉದಯವಾಹಿನಿ ಚಿತ್ರ

**ಕಾಂಗ್ರೆಸ್ ಪಕ್ಷವು ಸದಸ್ಯತ್ವ ಆಧಾರದಲ್ಲಿ ಪಕ್ಷ ಬೆಳೆಸುವುದಿಲ್ಲ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ- ಅವರ ಕುಟುಂಬ ಇದೆಯೇ ಎಂಬುದು ಅವರಿಗೆ ಮಹತ್ವದ್ದು. ಒಂದೊಮ್ಮೆ ರಾಹುಲ್ ಗಾಂಧಿ ಅವರಿಗೆ ಬೇಸರವಾಗಿ ಇಟಲಿಗೆ ಹೋದರೆ ಆ ಪಕ್ಷ ಇರುವುದಿಲ್ಲ. ಅದು ಲೀಡರಗಳ ಪಕ್ಷ. ನಮ್ಮದು ಕಾರ್ಯಕರ್ತರ ಪಕ್ಷ ಎಂದು ತಿಳಿಸಿದರು.**

**ವಿರೋಧ ಪಕ್ಷದ ನಾಯಕ ಆರ್. ಅಶೋಕ್**

**ಬಿಜೆಪಿ ಸದಸ್ಯತ್ವ ಅಭಿಯಾನ ಪರ್ವದ ಉದ್ಘಾಟನೆ ಇವತ್ತು ನಡೆದಿದೆ. ಇದು ಹಬ್ಬದ ವಾತಾವರಣ. ಗಣೇಶ ಹಬ್ಬದ ಹತ್ತಿರದಲ್ಲಿ ನಾವಿದ್ದು, ರಾಜ್ಯದ ಜನತೆಗೆ ಗೌರಿಗಣೇಶ ಹಬ್ಬದ ಶುಭಾಶಯಗಳು ಎಂದು ತಿಳಿಸಿದರು. ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಜೀ ಅವರು ಮೊನ್ನೆ ಈ ಅಭಿಯಾನಕ್ಕೆ ಚಾಲನೆ ಕೊಟ್ಟಿದ್ದಾರೆ. ಅರ್ಥಪೂರ್ಣ ಅಭಿಯಾನ ನಡೆಸಬೇಕೆಂದು ರಾಷ್ಟ್ರೀಯ ಅಧ್ಯಕ್ಷ ನಡ್ಡಾಜೀ ಅವರ ಅಪೇಕ್ಷೆ ಇದೆ. ಬಿಜೆಪಿ ಕೇವಲ ರಾಜಕೀಯ ಪಕ್ಷವಲ್ಲ. ಬಿಜೆಪಿ ಸರ್ವಸ್ಪರ್ಶಿ- ಸರ್ವವ್ಯಾಪಿ ಎಂದು ತಿಳಿಸಿದರು.**

**ಸದಸ್ಯತ್ವವನ್ನು ವಿಸ್ತತವಾಗಿ ಮಾಡಬೇಕಿದೆ. ಅದಕ್ಕಾಗಿ ಬೀದಿಗೆ ಇಳಿಯಬೇಕು ಎಂದು ಮನವಿ ಮಾಡಿದರು. ಕಾಂಗ್ರೆಸ್ ಪಕ್ಷವು ಹೆಸರಿಗೆ ಬೇಕಾಗಿ ಹಣ ತಾವೇ ನೀಡಿ ಸದಸ್ಯರನ್ನು ಮಾಡುತ್ತದೆ. ಇಲ್ಲಿ ಹಾಗಿಲ್ಲ. ನಾವು ಸದಸ್ಯತ್ವಕ್ಕೆ ಶುಲ್ಕ ಇಟ್ಟಿಲ್ಲ. ಸಕ್ರಿಯ ಸದಸ್ಯರು 100 ರೂ. ಕೊಡಬೇಕಿದೆ ಎಂದು ಹೇಳಿದರು. ಬಿಜೆಪಿಯ ಜೀವ ಕಾರ್ಯಕರ್ತರು ಮತ್ತು ಸದಸ್ಯರಲ್ಲಿದೆ ಎಂದು ತಿಳಿಸಿದರು.**

# ಚಿಂತಾಮಣಿಗೆ ಕೆ.ಸಿ, ಎಚ್.ಎನ್ ವ್ಯಾಲಿ ನೀರು ಯಾವಾಗ?

## ಶಾಶ್ವತ ನೀರಾವರಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ತಾಲ್ಲೂಕು ಪ್ರತಿಫಲ ಪಡೆಯುವಲ್ಲಿ ವಂಚನೆಗೆ ಒಳಗಾಗಿದೆ

• **ಉದಯವಾಹಿನಿ, ಚಿಂತಾಮಣಿ**

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆ ರೂಪಿಸಬೇಕು ಎಂದು ಎರಡು ದಶಕಗಳಿಂದ ಹೋರಾಟ ನಡೆಯುತ್ತಿದೆ. ಆದರೆ ನೀರು ಮಾತ್ರ ಹರಿದಿಲ್ಲ.

ಹೋರಾಟಗಾರರ ತೀವ್ರ ಒತ್ತಡಗಳಿಂದ ಬೆಂಗಳೂರಿನ ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಹರಿಸುವ ಕೆ.ಸಿ.ವ್ಯಾಲಿ ಮತ್ತು ಎಚ್.ಎನ್.ವ್ಯಾಲಿ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಗಳ ನೀರು ಸಹ ಚಿಂತಾಮಣಿ ತಾಲ್ಲೂಕಿಗೆ ಕನಸಾಗಿದೆ.

ಶಾಶ್ವತ ನೀರಾವರಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ತಾಲ್ಲೂಕು ಪ್ರತಿಫಲ ಪಡೆಯುವಲ್ಲಿ ವಂಚನೆಗೆ ಒಳಗಾಗಿದೆ. ಭೌತಿಕ ವಿಸ್ತಾರದಲ್ಲಿ ಹಾಗೂ ಜನಸಂಖ್ಯೆಯಲ್ಲಿ ಹೆಚ್ಚಿನ ಪಾಲನ್ನು ಹೊಂದಿರುವ ತಾಲ್ಲೂಕು ಅಭಿವೃದ್ಧಿ ಯೋಜನೆಗಳಲ್ಲಿ ವಂಚನೆಗೆ ಒಳಗಾಗಿದೆ ಎಂಬ ಕೊರಗು ಜನರಲ್ಲಿ ಮಡುಗಟ್ಟಿದೆ.

ಕೆ.ಸಿ.ವ್ಯಾಲಿ ನೀರು ಕೋಲಾರ, ಮುಳಬಾಗಿಲು, ಶ್ರೀನಿವಾಸಪುರ ತಾಲ್ಲೂಕುಗಳಿಗೆ ಹರಿಯುತ್ತಿದೆ. ಎಚ್.ಎನ್. ವ್ಯಾಲಿ ನೀರು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹರಿಯುತ್ತಿದೆ.

> ರೈತ ಸಂಘಟನೆಗಳ ಹೋರಾಟದ ನಂತರ ಎರಡನೇ ಹಂತದಲ್ಲಿ ಚಿಂತಾಮಣಿಯ ಹೆಚ್ಚು ಕೆರೆಗಳನ್ನು ಸೇರಿಸಿಕೊಳ್ಳಲಾಗುವುದು ಎಂದು ತಿಪ್ಪೆ ಸಾರಿಸಲಾಯಿತು. 2018ರಲ್ಲಿ ಯೋಜನೆ ಆರಂಭವಾಗಿದ್ದು 6 ವರ್ಷ ಕಳೆದರೂ ಒಂದನೇ ಹಂತವೇ ಸಮರ್ಪಕವಾಗಿ ಜಾರಿಯಾಗಿಲ್ಲ, ಇನ್ನು ಎರಡನೇ ಹಂತ ಜಾರಿಯಾಗಲು ಎಷ್ಟು ವರ್ಷಗಳು ಬೇಕಾಗುತ್ತೋ ಗೊತ್ತಿಲ್ಲ ಎಂದು ರೈತರು ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಚಿಂತಾಮಣಿ ತಾಲ್ಲೂಕಿನಲ್ಲಿ ಮೊದಲ ಹಂತದ ಯೋಜನೆಯಲ್ಲಿ ಕುರುಟಹಳ್ಳಿ, ಮೂಡಲಚಿಂತಲಹಳ್ಳಿ, ಹಾದಿಗೆರೆ, ಆನೂರು, ದಂಡುಪಾಳ್ಯ ಕೆರೆಗಳಿಗೆ ಸ್ವಲ್ಪದಿನ ನೀರು ಹರಿದಿತ್ತು. ಕೆಲವೇ ದಿನಗಳಲ್ಲಿ ಸ್ಥಗಿತಗೊಂಡು ವರ್ಷಗಳೇ ಕಳೆದಿವೆ. ಚಿಂತಾಮಣಿ ತಾಲ್ಲೂಕಿಗೆ ಒಂದು ಹನಿ ನೀರು ಹರಿಯುತ್ತಿಲ್ಲ.


ಉದಯವಾಹಿನಿ ಚಿತ್ರ

**ನಿರ್ವಹಣೆ ಕೊರತೆ**

**2-3 ದಶಕಗಳಿಂದ ನೀರು ಸಂಗ್ರಹವಾಗದೆ, ನಿರ್ವಹಣೆಯೂ ಇಲ್ಲದೆ ಕೆರೆಗಳು ಸಂಪೂರ್ಣ ಹಾಳಾಗಿವೆ. ಕಟ್ಟೆ, ತೂಬುಗಳು ಶಿಥಿಲಗೊಂಡಿವೆ. ಕೆರೆಗಳ ಸ್ವಚ್ಛತೆ, ಹೂಳು ತೆಗೆಯುವುದು, ತೂಬು, ಕಟ್ಟೆಗಳ ರಿಪೇರಿಯೂ ಅಗತ್ಯವಾಗಿದೆ ಎಂದು ರೈತ ಮುಖಂಡರು ಅಭಿಪ್ರಾಯಪಡುತ್ತಾರೆ.**

ಚಿಂತಾಮಣಿ ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ 546 ಹಾಗೂ ಸಣ್ಣ ನೀರಾವರಿ ಇಲಾಖೆ ಅಡಿಯಲ್ಲಿ 19 ಸೇರಿ ಒಟ್ಟು 565 ಕೆರೆಗಳಿವೆ. ನಗರಕ್ಕೆ ಕುಡಿಯುವ ನೀರನ್ನು ಪೂರೈಸುವ ಯೋಜನೆಯನ್ನು ಕೈಗೊಂಡಿರುವ ಭಕ್ತರಹಳ್ಳಿ-ಅರಸೀಕೆರೆ ಒಂದನ್ನು ಹೊರತುಪಡಿಸಿ ಉಳಿದವೆಲ್ಲವೂ ನೀರಿಲ್ಲದೆ, ಕಳೆ ಒಣಗಿಹೋಗಿವೆ. ಬಹುತೇಕ ಕೆರೆಗಳಲ್ಲಿ ಮರಗಿಡಗಳು ಬೆಳೆದಿವೆ. ಶಾಶ್ವತ ನೀರಾವರಿ ಹೋರಾಟದ ಹೆಸರಿನಲ್ಲಿ ವಿವಿಧ ಸಂಘಸಂಸ್ಥೆಗಳು ಡಾ.ಪರಮಶಿವಯ್ಯ ವರದಿ ಜಾರಿಗೊಳಿಸುವಂತೆ ಒತ್ತಾಯಿಸಿ ಹೋರಾಟ ಆರಂಭಿಸಿ, ಜಿಲ್ಲಾ ಕೇಂದ್ರದಲ್ಲಿ 160 ದಿನ ಧರಣಿ ನಡೆಸಿದ್ದು ಇತಿಹಾಸ ಸೇರಿದೆ.

ಕೆ.ಸಿ.ವ್ಯಾಲಿಯಿಂದ ಪ್ರತಿದಿನ 410 ಎಂಎಲ್‌ಡಿ ನೀರು ಹರಿಸಿ 3 ಟಿಎಂಸಿ ನೀರನ್ನು ಪಡೆಯಬಹುದು. ಚಿಂತಾಮಣಿ ತಾಲ್ಲೂಕು ಸೇರಿ ಕೋಲಾರ ಜಿಲ್ಲೆಯಲ್ಲಿ 126 ಕೆರೆಗಳನ್ನು ತುಂಬಿಸುವ ಮೊದಲ ಹಂತದ ಯೋಜನೆ ಅನುಷ್ಠಾನವಾಗಿದೆ. ಇಲ್ಲೇ ತಾರತಮ್ಯ, ಮಲತಾಯಿ ಧೋರಣೆ ಆರಂಭವಾಗಿ ಹೆಚ್ಚು ಕೆರೆಗಳನ್ನು ಹೊಂದಿರುವ ಚಿಂತಾಮಣಿ ತಾಲ್ಲೂಕಿನ ಕೇವಲ 5 ಕೆರೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಎಚ್.ಎನ್ ವ್ಯಾಲಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ 44 ಕೆರೆಗಳನ್ನು ಆಯ್ಕೆ ಮಾಡಿಕೊಂಡಿದ್ದು, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಬಾಗೇಪಲ್ಲಿ ತಾಲ್ಲೂಕುಗಳ ಕೆರೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಯೋಜನೆಗೆ ಚಿಂತಾಮಣಿಯ ಯಾವ ಕೆರೆಯೂ ಸೇರಿಲ್ಲ. ಕೆ.ಸಿ.ವ್ಯಾಲಿಯ ಎರಡನೇ ಹಂತದ ಯೋಜನೆಯಲ್ಲಿ ತಾಲ್ಲೂಕಿನ 50 ಕೆರೆಗಳನ್ನು ಸೇರಿಸಲಾಗಿದೆ. ಕೈವಾರ ಹೋಬಳಿಯ ಕೆರೆಗಳಿಗೆ ಎಚ್.ಎನ್.ವ್ಯಾಲಿಯ ಮೂರನೇ ಹಂತದಲ್ಲಿ ನೀರು ಹರಿಸಲಾಗುವುದು. ಚಿಂತಾಮಣಿ ತಾಲ್ಲೂಕಿನ 100 ಕೆರೆಗಳನ್ನು ಎಚ್.ಎನ್.ವ್ಯಾಲಿಗೆ ಸೇರಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಇತ್ತೀಚೆಗೆ ವೈಜಕೂರು ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಿಳಿಸಿದ್ದರು. ಮೊದಲ ಹಂತವೇ ಅನುಷ್ಠಾನಗೊಳ್ಳದೆ ಸ್ಥಗಿತಗೊಂಡಿದೆ, ಎರಡನೇ ಹಂತದ ನೀರು ಯಾವಾಗ ಹರಿಯುತ್ತದೋ ಎಂದು ಜನರು ಕಾದು ಕುಳಿತಿದ್ದಾರೆ.

**ಅಭಿವೃದ್ಧಿ ಯೋಜನೆಗಳಲ್ಲಿ ವಂಚನೆ**

# ಒಳಮೀಸಲಾತಿ ಜಾರಿಯಾಗಬೇಕೆಂದರೆ ಮಾದಿಗ ಸಮುದಾಯದವರ ಒಗ್ಗಟ್ಟು ಬಹಳ ಮುಖ್ಯ

• **ಉದಯವಾಹಿನಿ, ಶಿಡ್ಲಘಟ್ಟ**

ಒಳಮೀಸಲಾತಿ ಜಾರಿಯಾಗಬೇಕೆಂದರೆ ಮಾದಿಗ ಸಮುದಾಯದವರ ಒಗ್ಗಟ್ಟು ಬಹಳ ಮುಖ್ಯವಾಗಿದೆ ಎಂದು ಜಿಲ್ಲಾ ಕಾರ್ಯದರ್ಶಿ ಎಂ ಗುರುಮೂರ್ತಿ ತಿಳಿಸಿದರು.

ನಗರದ ಪೂಜಮ್ಮ ದೇವಿ ಸಮುದಾಯ ಭವನದಲ್ಲಿ ಕರ್ನಾಟಕ ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ತಾಲ್ಲೂಕು ಶಾಖೆಯ ಸಭೆಯನ್ನು ಉದ್ದೇಶಿಸಿ ಮಾತನಾಡಿ, ನಿವೃತ್ತ ನ್ಯಾಯಮೂರ್ತಿ ಎ.ಜೆ ಸದಾಶಿವ ಆಯೋಗ ವರದಿ ಸರ್ಕಾರಕ್ಕೆ ತಲುಪುವವರೆಗೆ ಒಂದು ಮಾದಿಗ ಸಂಘಟನೆ ಇತ್ತು. ಮಾದಿಗ ಜಾತಿಯಲ್ಲಿ ಒಗ್ಗಟ್ಟಿತ್ತು, ವರದಿ ಸರ್ಕಾರಕ್ಕೆ ತಲುಪಿದ ನಂತರ ಮಾದಿಗ ಸಮುದಾಯದಲ್ಲಿ ಅನೇಕ ಸಂಘಟನೆ ಹುಟ್ಟಿಕೊಂಡು ಮಾದಿಗರ ಶಕ್ತಿ ಕಡಿಮೆಯಾಗಿದೆ. ಒಳಮೀಸಲಾತಿ ಜಾರಿ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ ಎಂದು ಸುಪ್ರೀಂಕೋರ್ಟ್ ಆದೇಶ ನೀಡಿ ಒಂದು ತಿಂಗಳು ಕಳೆದಿದೆ.


ಉದಯವಾಹಿನಿ ಚಿತ್ರ

**ವೇದಿಕೆಯಲ್ಲಿ ಶಕ್ತಿ ಪ್ರದರ್ಶನ ಮಾಡಬೇಕಿದೆ**

ಇದುವರೆಗೂ ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿ ಬಗ್ಗೆ ಧ್ವನಿ ಎತ್ತಲಿಲ್ಲ ಅದಕ್ಕೆ ಕಾರಣ ಮಾದಿಗ ಸಮುದಾಯದ ಒಗ್ಗಟ್ಟಿನ ಕೊರತೆಯಿಂದ ಮುಂದಿನ ದಿನಗಳಲ್ಲಿ ಮಾದಿಗ ಸಮುದಾಯದ ಎಲ್ಲಾ ಸಂಘಟನೆಗಳು ಒಂದೇ ವೇದಿಕೆಯಲ್ಲಿ ಶಕ್ತಿ ಪ್ರದರ್ಶನ ಮಾಡಬೇಕಿದೆ ಎಂದು ಒಗ್ಗಟ್ಟಿನ ಜಪ ಪಟಿಸಿದರು. ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಎಂ ಗುರುಮೂರ್ತಿ ಮತ್ತು ತಾಲ್ಲೂಕು ಅಧ್ಯಕ್ಷ ಸಿ.ಗುರುಮೂರ್ತಿ ಸಮ್ಮುಖದಲ್ಲಿ ನಗರ ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ಈ ಸಂದರ್ಭದಲ್ಲಿ ತಾಲ್ಲೂಕು ಗೌರವಾಧ್ಯಕ್ಷ ವಿ.ದೇವಪ್ಪ, ತಾ. ಅಧ್ಯಕ್ಷ ಸಿ ಗುರುಮೂರ್ತಿ, ಉಪಾಧ್ಯಕ್ಷ ವೆಂಕಟೇಶಪ್ಪ, ತಾ. ಖಜಾಂಚಿ ನರಸಿಂಹಪ್ಪ, ತಾ.ಪ್ರಧಾನ ಕಾರ್ಯದರ್ಶಿ ನಂದೀಶ್, ತಾ. ಸಹ ಕಾರ್ಯದರ್ಶಿ ವೆಂಕಟರಮಣ, ತಾ. ಜಂಟಿ ಕಾರ್ಯದರ್ಶಿ ವೆಂಕಟರವಣಪ್ಪ, ಕಾರ್ಯದರ್ಶಿ ವಿನೋದ್ ಕುಮಾರ್ ಸೇರಿದಂತೆ ಅನೇಕ ಮಾದಿಗ ಸಮುದಾಯದ ಮುಖಂಡರು ಇದ್ದರು.

# ಮುಂಜಾನೆಯ ಕಾಯಕಯೋಗಿಗಳಿಗಿಲ್ಲ ಸೂರು

• **ಉದಯವಾಹಿನಿ, ಮಡಿಕೇರಿ**

ಮುಂಜಾನೆಯ ಕಾಯಕಯೋಗಿಗಳು ಎನಿಸಿದ ಪತ್ರಿಕಾ ವಿತರಕರು ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗಿನಲ್ಲಿ ಅತ್ಯಂತ ಹೆಚ್ಚಿನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಕುರಿತು ಹಲವು ಬಾರಿ ಮನವಿ ಮಾಡಿದರೂ ಅಧಿಕಾರಿಗಳು ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂಬುದು ಅವರ ಆರೋಪವಾಗಿದೆ.

ಇನ್ನಾದರೂ ನಮ್ಮ ಸಮಸ್ಯೆಗಳನ್ನು ಆಲಿಸಲಿ ಎಂಬುದು ಅವರು ಒತ್ತಾಯವಾಗಿದೆ.

ಮೈಸೂರು ನಗರದಲ್ಲಿರುವಂತೆ ಮಡಿಕೇರಿಯಲ್ಲೂ ಪತ್ರಿಕಾ ವಿತರಕರಿಗೆಂದೇ ನಿರ್ದಿಷ್ಟ ಜಾಗವನ್ನು ಗುರುತಿಸಬೇಕು, ಒಂದು ಸೂರು ಕಲ್ಪಿಸಬೇಕು ಎಂಬದು ಪತ್ರಿಕಾ ವಿತರಕರ ಬಲು ದಿನಗಳ ಒತ್ತಾಯ. ಈ ಕುರಿತು ಅವರು ಸಾಕಷ್ಟು ಬಾರಿ ನಗರಸಭೆಗೆ ಮನವಿ ಕೊಟ್ಟಿದ್ದರೂ ಪ್ರಯೋಜನವಾಗಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸುತ್ತಾರೆ.

ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗಿನಲ್ಲಿ ಮಳೆ ಹೆಚ್ಚು. ನಿರಂತರವಾಗಿ ಧೋ ಎಂದು ಸುರಿಯುವ ಮಳೆಯಲ್ಲಿ ಪತ್ರಿಕೆಗಳನ್ನು ವಿಂಗಡಿಸಿಕೊಳ್ಳುವುದು ನಿಜಕ್ಕೂ ಹೆಚ್ಚಿನ ಕಷ್ಟಕರವಾದ ಕೆಲಸ. ಅದರಲ್ಲೂ ಮಡಿಕೇರಿಯಲ್ಲಿ ವರ್ಷದ ಬಹುತೇಕ ತಿಂಗಳುಗಳ ಕಾಲ ಮುಂಜಾನೆ ಸುರಿಯುವ ಮಂಜಿನ ನಡುವೆ ಅವರು ಕಾರ್ಯನಿರ್ವಹಿಸಬೇಕಿದೆ. ಗಡಗಡನೆ ನಡುಗುತ್ತಾ ಸೂರ್ಯೋದಯಕ್ಕೂ ಮುನ್ನವೇ ಅವರು ತಮ್ಮ ಕಾರ್ಯಗಳಿಗೆ ಅಣಿಯಾಗಬೇಕಿದೆ. ಒಂದಿಷ್ಟು ಜಾಗ ಮತ್ತು ಸೂರು ಕೊಡಿ ಎಂಬುದು ಅವರ ಬಹುದಿನಗಳ ಮನವಿ.

# ಕೊಡಗು ಜಿಲ್ಲೆಯಲ್ಲಿ 'ಕೈಲ್ ಪೋಳ್ದ್' ಸಂಭ್ರಮ

• **ಉದಯವಾಹಿನಿ, ಮಡಿಕೇರಿ**

ಕೊಡಗು ಜಿಲ್ಲೆಯ ಪ್ರಮುಖ ಹಬ್ಬಗಳಲ್ಲಿ ಒಂದಾದ 'ಕೈಲ್ ಪೋಳ್ದ್' ಅನ್ನು ಮಂಗಳವಾರ ಜಿಲ್ಲೆಯಾದ್ಯಂತ ಶ್ರದ್ಧಾ ಭಕ್ತಿಗಳಿಂದ ಆಚರಿಸಲಾಯಿತು.

ಹಲವು ಐನ್‌ಮನೆಗಳಲ್ಲಿ ಕುಟುಂಬದ ಸದಸ್ಯರೆಲ್ಲ ಒಟ್ಟಿಗೆ ಸೇರಿ ಸಾಂಪ್ರದಾಯಿಕವಾಗಿ ಆಯುಧಗಳನ್ನು ಪೂಜಿಸಿದರು. ಭತ್ತದ ನಾಟಿ ಮುಗಿದ ನಂತರ ಕೃಷಿ ಪರಿಕರಗಳಿಗೆ ಹಾಗೂ ಆಯುಧಗಳಿಗೆ ಶ್ರದ್ಧಾ ಭಕ್ತಿಯಿಂದ ಎಲ್ಲರೂ ಸೇರಿದ ಪೂಜಿಸುವ ವಿಶಿಷ್ಟವಾದ ಈ ಹಬ್ಬದಲ್ಲಿ ಕೇವಲ ಕುಟುಂಬಸ್ಥರು ಮಾತ್ರವಲ್ಲ ಬಂಧುಗಳು, ಸ್ನೇಹಿತರೂ ಪಾಲ್ಗೊಂಡರು. ಪೂಜೆಯ ನಂತರ ಸಾಂಪ್ರದಾಯಿಕ ತಿನಿಸುಗಳಾದ ಕಡುಬಿಟ್ಟು, ಶ್ಯಾವಿಗೆ, ಪಂದಿಕರಿ ಮೊದಲಾದವುಗಳನ್ನು ಎಲ್ಲರೂ ಕಲೆತು ಸವಿದರು. ಹಲವೆಡೆ ಸಾರ್ವಜನಿಕವಾದ ಕಾರ್ಯಕ್ರಮಗಳು ನಡೆದವು. ಸಾರ್ವಜನಿಕವಾದ ಪೂಜೆಯ ಜೊತೆಗೆ ವಿವಿಧ ಬಗೆಯ ಕ್ರೀಡೆಗಳನ್ನೂ ಆಯೋಜಿಸಲಾಗಿತ್ತು. ನೂರಾರು ಮಂದಿ ಹಲವು ಆಟೋಟಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.


ಉದಯವಾಹಿನಿ ಚಿತ್ರ

ಮಕ್ಕಂದೂರು ಗ್ರಾಮದ ಕುಂಭಗೌಡನ ಕುಟುಂಬದ ಐನ್ ಮನೆಯಲ್ಲಿ ಹಬ್ಬದ ಪ್ರಯುಕ್ತ ಕೋವಿ ಮತ್ತು ಲಿಂಗರಾಜ ಅರಸರ ಕಾಲದಲ್ಲಿ ಲಿಂಗರಾಜರ ಚಿನ್ನದ ಮುದ್ರೆ ಹೊಂದಿರುವ ಒಡಿಕತ್ತಿ ಮತ್ತು ಖಡ್ಗಗಳಿಗೆ ಆಯುಧ ಪೂಜೆಯನ್ನು ಕುಟುಂಬದ ಸಮನ್ವಯ ಸಮಿತಿ ಅಧ್ಯಕ್ಷ ಕೆ.ಯು. ರಂಜಿತ್ ನೆರವೇರಿಸಿದರು. ಆಯುಧಗಳಿಗೆ ಪೂಜೆ ಸಲ್ಲಿಸಿದ ನಂತರ ತೆಂಗಿನಕಾಯಿಗಳಿಗೆ ಗುಂಡು ಹೊಡೆಯಲಾಯಿತು.

# ಮಕ್ಕಳನ್ನು ಆರೋಗ್ಯವಂತರನ್ನಾಗಿಸುವುದರಲ್ಲಿ ತಾಯಂದಿರ ಪಾತ್ರ ಅತ್ಯಂತ ಮಹತ್ವ

• **ಉದಯವಾಹಿನಿ, ಶಿಡ್ಲಘಟ್ಟ**

ಮಕ್ಕಳನ್ನು ಆರೋಗ್ಯವಂತರನ್ನಾಗಿ ಕಾಪಾಡುವುದರಲ್ಲಿ ತಾಯಂದಿರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಅದು ಅವರ ಜವಾಬ್ದಾರಿಯೂ ಆಗಿದೆ ಎಂದು ತಹಶೀಲ್ದಾರ್ ಬಿ.ಎನ್.ಸ್ವಾಮಿ ಹೇಳಿದರು.

ನಗರದ ಸ್ತ್ರೀ ಶಕ್ತಿ ಭವನದಲ್ಲಿ ಶಿಶು ಅಭಿವೃದ್ಧಿ ಯೋಜನಾ ಇಲಾಖೆಯಿಂದ ಆಯೋಜಿಸಿದ ಪೋಷಣ್ ಅಭಿಯಾನ್ 2024-25 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳೆಯರು ಗರ್ಭಿಣಿಯರಾದ ಸಂದರ್ಭದಲ್ಲಿ ಪೌಷ್ಟಿಕಾಂಶ ಆಹಾರ ಸೇವನೆ ಅಗತ್ಯವಾಗಿದ್ದು,ಪೌಷ್ಟಿಕಾಂಶ ಆಹಾರ ಸೇವನೆ ಮಾಡದೇ ನಿರ್ಲಕ್ಷ್ಯ ವಹಿಸಿದರೆ, ಹುಟ್ಟುವ ಮಕ್ಕಳ ತೂಕ ಕಡಿಮೆಯಾಗುತ್ತದೆ. ಅಪೌಷ್ಟಿಕತೆಯಿಂದ ಮಕ್ಕಳು ನಲುಗಿ ರಕ್ತಹೀನತೆಯಿಂದ ಬಳಲುವ ಸಾಧ್ಯತೆಯಿದೆ, ತಾಯಂದಿರು ಕೂಡಾ ಹೆರಿಗೆ ಸಮಯದಲ್ಲಿ ತೀವ್ರ ರಕ್ತಸ್ರಾವದಿಂದ ಬಳಲಬೇಕಾಗುತ್ತದೆ. ಎಂದು ಮಹಿಳೆಯರಿಗೆ ಅರಿವು ಮೂಡಿಸಿದರು.


ಉದಯವಾಹಿನಿ ಚಿತ್ರ

**ಪೋಷಣ್ ಅಭಿಯಾನ್ 2024-25**

ವಿವಿಧ ಪೌಷ್ಟಿಕಾಂಶವುಳ್ಳ ದವಸ - ಧಾನ್ಯಗಳು ಹಾಗೂ ಸುಂದರವಾಗಿ ಬಿಡಿಸಿದ ರಂಗೋಲಿಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶಿಶು ಅಭಿಯೋಜನಾಧಿಕಾರಿ ಲಕ್ಷ್ಮಿದೇವಮ್ಮ,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿದ್ಯಾ ವಸ್ತ್ರದ್, ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ ಹೇಮಾವತಿ ಆರ್, ಆರೋಗ್ಯ ನಿರೀಕ್ಷಣಾಧಿಕಾರಿ ದೇವರಾಜ್, ಮೇಲ್ವಿಚಾರಕಿ ಶಶಿಕಲಾ,ಶಿವಪ್ಪ, ಆರೋಗ್ಯ ಇಲಾಖೆಯ ಹಾಗೂ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಆಶಾ ಕಾರ್ಯಕರ್ತೆಯರು ಗರ್ಭಿಣಿ ಸ್ತ್ರೀಯರು ಗ್ರಾಮದ ಮಹಿಳೆಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

> **ಸಮಾಜದಲ್ಲಿರುವ ಎಲ್ಲಾ ಮಹಿಳೆಯರು ಸ್ವಾವಲಂಬಿ ಜೀವನ ನಡೆಸುವ ನಿಟ್ಟಿನಲ್ಲಿ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದೆ. ಇಲಾಖೆಯ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವ ಕೆಲಸ ಅಂಗವಾಡಿ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತೆಯರು ಮಾಡಬೇಕಾಗಿದೆ**
> **-ಡಾ.ವೆಂಕಟೇಶ್ ಮೂರ್ತಿ**
> **ತಾಲ್ಲೂಕು ಆರೋಗ್ಯ ಅಧಿಕಾರಿ**

# 10,713 ವಿದ್ಯುತ್ ಕಂಬಗಳಿಗೆ ಹಾನಿ: ಸೆಸ್ಕ್‌ಗೆ 17.88 ಕೋಟಿ ರೂ. ನಷ್ಟ

• **ಉದಯವಾಹಿನಿ, ಮಂಡ್ಯ**

ಮುಂಗಾರು ಮಳೆ ಮತ್ತು ಗಾಳಿಯ ಅಬ್ಬರದಿಂದ ವಿದ್ಯುತ್ ಜಾಲಕ್ಕೆ ತೀವ್ರ ಹಾನಿಯಾಗಿದ್ದು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ (ಸೆಸ್ಕ್) ಬರೋಬ್ಬರಿ 17.88 ಕೋಟಿ ನಷ್ಟವಾಗಿದೆ. ಸೆಸ್ಕ್ ವ್ಯಾಪ್ತಿಯ ಮೈಸೂರು- 3.80 ಕೋಟಿ, ಚಾಮರಾಜನಗರ- 1.07 ಕೋಟಿ, ಕೊಡಗು- 5.02 ಕೋಟಿ, ಮಂಡ್ಯ- 4.42 ಕೋಟಿ ಹಾಗೂ ಹಾಸನ- ?3.54 ಕೋಟಿಯಷ್ಟು ನಷ್ಟವಾಗಿದೆ.

ಒಟ್ಟು 10,713 ಕಂಬಗಳು ಹಾಳಾಗಿದ್ದು, 14.89 ಕೋಟಿ ನಷ್ಟವಾಗಿದೆ. 265 ಪರಿವರ್ತಕಗಳು ಹಾಳಾಗಿದ್ದು, ಅಂದಾಜು 2.68 ಕೋಟಿ ನಷ್ಟವಾಗಿದೆ. ಭಾರಿ ಮಳೆ-ಗಾಳಿಗೆ ಸುಮಾರು 57 ಕಿ.ಮೀ.ನಷ್ಟು ತಂತಿಗಳು ಹಾಳಾಗಿದ್ದು 29 ಲಕ್ಷ ನಷ್ಟವಾಗಿದೆ.

**ಜಿಲ್ಲಾಧಿಕಾರಿಗಳಿಗೆ ಪತ್ರ**

**ಪ್ರತಿ ವರ್ಷ ಮಳೆ-ಗಾಳಿ ಮತ್ತು ನೈಸರ್ಗಿಕ ವಿಕೋಪದಿಂದ ಹಾನಿಯಾಗುವ ವಿದ್ಯುತ್ ಜಾಲವನ್ನು ಸರಿಪಡಿಸುವ ವೆಚ್ಚವನ್ನು ಭರಿಸುವುದು ಕಷ್ಟಸಾಧ್ಯವಾಗಿದೆ. ಹೀಗಾಗಿ ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ಅಡಿ ಅನುದಾನ ಬಿಡುಗಡೆ ಮಾಡಬೇಕು ಎಂದು ಐದು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೆಸ್ಕ್ ಪ್ರಧಾನ ವ್ಯವಸ್ಥಾಪಕರು ಪತ್ರ ಬರೆದಿದ್ದಾರೆ.**

**ದುರಸ್ತಿಗೆ ಆದ್ಯತೆ:** ಸಾರ್ವಜನಿಕರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಲೆಂದೇ ಸಿಬ್ಬಂದಿಯು ಸುರಿಯುವ ಮಳೆಯನ್ನು ಲೆಕ್ಕಿಸದೆ ದುರಸ್ತಿ ಮಾಡಿದ್ದಾರೆ. ಚಾಮರಾಜನಗರ ಮತ್ತು ಕೊಡಗಿನ ಬೆಟ್ಟ-ಗುಡ್ಡಗಳಲ್ಲಿ, ಕಡಿದಾದ ಕಣಿವೆ ಪ್ರದೇಶಗಳಲ್ಲಿ ಹರಸಾಹಸಪಟ್ಟಿದ್ದಾರೆ' ಎಂದು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಶೀಲಾ ಜಿ. ತಿಳಿಸಿದರು.

**ಮಂಡ್ಯದಲ್ಲಿ 19.23 ಕೋಟಿ ನಷ್ಟ:** ಮಂಡ್ಯ ಜಿಲ್ಲೆಯಲ್ಲಿ ಐದು ವರ್ಷಗಳಲ್ಲಿ ಒಟ್ಟು 19.23 ಕೋಟಿ ನಷ್ಟವಾಗಿದೆ. 2019-20ರಲ್ಲಿ 93.75 ಲಕ್ಷ, 2020-21ರಲ್ಲಿ 2.20 ಕೋಟಿ, 2021-22ರಲ್ಲಿ 3.16 ಕೋಟಿ, 2022-23ರಲ್ಲಿ 6.08 ಕೋಟಿ ನಷ್ಟವಾಗಿದೆ. 5 ವರ್ಷಗಳಲ್ಲಿ 12,122 ಕಂಬಗಳು, 220 ಪರಿವರ್ತಕಗಳು ಹಾಗೂ 76.63 ಕಿ.ಮೀ.ನಷ್ಟು ವಿದ್ಯುತ್ ಮಾರ್ಗ ಹಾಳಾಗಿದೆ' ಎಂದು ಸೆಸ್ಕ್ ಇಲಾಖೆ ಮಾಹಿತಿ ನೀಡಿದೆ.

# ಮದ್ದೂರಿನ ಪಾಸ್‌ಪೋರ್ಟ್ ಕೇಂದ್ರ ಮಂಡ್ಯಕ್ಕೆ ಸ್ಥಳಾಂತರ?

• **ಉದಯವಾಹಿನಿ, ಮದ್ದೂರು**

ದೇಶದಲ್ಲಿಯೇ ಪ್ರಥಮ ಬಾರಿಗೆ ತಾಲ್ಲೂಕು ಕೇಂದ್ರವೊಂದರಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಹೊಂದಿರುವ ಹೆಗ್ಗಳಿಕೆ ಹೊಂದಿದ ಪಟ್ಟಣದ ಪಾಸ್‌ಪೋರ್ಟ್ ಕೇಂದ್ರವು ಮಂಡ್ಯ ಜಿಲ್ಲಾ ಕೇಂದ್ರಕ್ಕೆ ಸ್ಥಳಾಂತರಗೊಳ್ಳಲಿದೆ ಎಂಬ ವಿಷಯ ಚರ್ಚೆಗೆ ಗ್ರಾಸವಾಗಿದೆ. ಮಂಡ್ಯದಲ್ಲಿ ಈಚೆಗೆ ನಡೆದ ದಿಶಾ ಸಭೆಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿರುವುದು ಮದ್ದೂರು ತಾಲ್ಲೂಕಿನ ಜನರ ಕಳವಳಕ್ಕೆ ಕಾರಣವಾಗಿದೆ.

2019ರ ಫೆಬ್ರುವರಿ 28ರಂದು ಮದ್ದೂರಿನಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಕಚೇರಿ ಆರಂಭಗೊಂಡಿತು. ಆಗ ಜೆಡಿಎಸ್‌ನಿಂದ ಸ್ಪರ್ಧಿಸಿ ಸಂಸದರಾಗಿದ್ದ ಎಲ್. ಆರ್. ಶಿವರಾಮೇಗೌಡರವರು ಕೇಂದ್ರವನ್ನು ಉದ್ಘಾಟಿಸಿದ್ದರು. ಸಮಾರಂಭದ ವೇದಿಕೆಯಲ್ಲಿ 'ಪಾಸ್ ಪೋರ್ಟ್ ಕೇಂದ್ರವು ಮಂಡ್ಯಕ್ಕೆ ಬದಲಾಗಿ ಮದ್ದೂರಿನಲ್ಲಿ ಆರಂಭವಾಗಲು ಆಗಿನ ಕ್ಷೇತ್ರದ ಶಾಸಕ, ಸಾರಿಗೆ ಸಚಿವರಾಗಿದ್ದ ಡಿ.ಸಿ. ತಮ್ಮಣ್ಣ ಅವರು ಒತ್ತಾಸೆಯೇ ಕಾರಣಎಂದಿದ್ದರು.



ಉದಯವಾಹಿನಿ ಚಿತ್ರ

ಅಲ್ಲಿಯವರೆಗೆ ಮಂಡ್ಯ ಸೇರಿದಂತೆ ತಾಲ್ಲೂಕಿನ ಸಾವಿರಾರು ಜನರು ಪಾಸ್‌ಪೋರ್ಟ್ ಮಾಡಿಸಲು ಬೆಂಗಳೂರಿಗೆ ಹೋಗಬೇಕಾದ ಪರಿಸ್ಥಿತಿಯಿತ್ತು. ಪಟ್ಟಣ ದಲ್ಲಿ ಕೇಂದ್ರ ಆರಂಭವಾದ ನಂತರ ಜಿಲ್ಲೆಯ ಜನರಿಗೆ ಅನುಕೂಲವಾಗಿತ್ತು. 2019ರಲ್ಲಿ ಮದ್ದೂರು ಪಟ್ಟಣದಲ್ಲಿ ಆರಂಭವಾಗಿದ್ದ ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ಪಟ್ಟಣದಲ್ಲಿಯೇ ಮುಂದುವರಿಸಬೇಕು. ಅನಿವಾರ್ಯವಾದರೆ ಮಂಡ್ಯದಲ್ಲಿ ಉಪ ಕಚೇರಿಯನ್ನು ತೆರೆಯಲಿ ಎಂದು ಮದ್ದೂರು ಪಟ್ಟಣದ ಸ್ಥಳೀಯ ನಿವಾಸಿ ಸಂತೋಷ್ ಒತ್ತಾಯಿಸಿದ್ದಾರೆ.

# ಪತ್ರಿಕಾ ವಿತರಕರ ದಿನ: ಕೇಕ್ ಕತ್ತರಿಸಿ ಸಂಭ್ರಮಾಚರಣೆ

• **ಉದಯವಾಹಿನಿ, ರಾಮನಗರ**

ಬಾನಲ್ಲಿ ಸೂರ್ಯ ಉದಯಿಸುವುದಕ್ಕೆ ಮುಂಚೆಯೇ ಜಗತ್ತಿನ ಸುದ್ದಿಯನ್ನು ಹೊತ್ತ ದಿನಪತ್ರಿಕೆಯನ್ನು ಬೆಳ್ಳಂಬೆಳಿಗ್ಗೆ ಮನೆ ಬಾಗಿಲಿಗೆ ತಲುಪಿಸುವ 'ಪತ್ರಿಕಾ ವಿತರಕರ ದಿನವನ್ನು ಬುಧವಾರ ನಗರದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಏಜೆಂಟರು ಹಾಗೂ ದಿನಪತ್ರಿಕೆಗಳನ್ನು ಹಾಕುವ ಹುಡುಗರು ಕೇಕ್ ಕತ್ತರಿಸುವ ಮೂಲಕ, ವಿತರಕರ ದಿನದ ಸಡಗರವನ್ನು ಹಂಚಿಕೊಂಡರು.

ಜಿಲ್ಲಾ ಕೇಂದ್ರವಾದ ರಾಮನಗರ, ತಾಲ್ಲೂಕು ಕೇಂದ್ರಗಳಾದ ಚನ್ನಪಟ್ಟಣ, ಮಾಗಡಿ, ಕನಕಪುರ, ಹಾರೋಹಳ್ಳಿ, ಹೋಬಳಿ ಕೇಂದ್ರಗಳಾದ ಬಿಡದಿ ಹಾಗೂ ಕುದೂರಿನಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಏಜೆಂಟರ ಕಾಯಕ ಸ್ಥಳವಾದ ಬಸ್ ನಿಲ್ದಾಣ, ತಂಗುದಾಣ ಹಾಗೂ ಅಂಗಡಿಗಳ ಆವರಣದಲ್ಲಿ ನಡೆದ ಸಂಭ್ರಮಾಚರಣೆಯು ಹಿರಿಯರು ಮತ್ತು ಕಿರಿಯರ ಅನುಭವದ ಮೆಲುಕಿಗೂ ಸಾಕ್ಷಿಯಾಯಿತು.


ಉದಯವಾಹಿನಿ ಚಿತ್ರ

ದಿನಪತ್ರಿಕೆಯನ್ನು ಮನೆ ಮನೆಗೆ ಹಾಕುವ ತಮ್ಮ ಬಳಗದ ಹುಡುಗರಿಗೆ ಏಜೆಂಟರು ಸಿಹಿ ಹಂಚಿ, ಅವರ ಕಾರ್ಯೋತ್ಸಹಕ್ಕೆ ಬೆನ್ನು ತಟ್ಟಿದರು. ತಾವು ಈ ವೃತ್ತಿಗೆ ಇಳಿದ ದಿನಗಳ ಮೆಲುಕು ಹಾಕುತ್ತಲೇ, ಅಂದಿಗೂ-ಇಂದಿಗೂ ದಿನಪತ್ರಿಕೆ ವಿತರಣೆಯಲ್ಲಾಗಿರುವ ಬದಲಾವಣೆಯನ್ನು ಹಂಚಿಕೊಂಡರು. ಪತ್ರಿಕೆ ಜೊತೆಗೆ ತಾವೂ ಬೆಳೆದಿರುವುದನ್ನು ಸ್ಮರಿಸಿದರು.

ರಾಮನಗರದ ಬಸ್ ನಿಲ್ದಾಣದಲ್ಲಿ ಬೆಳಿಗ್ಗೆ 6ರ ಸುಮಾರಿಗೆ ಪತ್ರಿಕಾ ಏಜೆಂಟರು ಹಾಗೂ ಪತ್ರಿಕೆ ಹಂಚುವ ಹುಡುಗರ ನೇತೃತ್ವದಲ್ಲಿ ಕೇಕ್ ಕತ್ತರಿಸಿ, ಎಲ್ಲರಿಗೂ ವಿತರಿಸಲಾಯಿತು. 'ಪತ್ರಿಕಾ ವಿತರಕರ ದಿನ'ದ ಅಂಗವಾಗಿ ಪತ್ರಿಕೆಯಲ್ಲಿ ಬಂದಿದ್ದ ವಿಶೇಷ ಸುದ್ದಿಯನ್ನು ಕಣ್ಣಾಡಿಸಿ ತಮ್ಮ ಕೆಲಸದ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು.

# ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಲೋಕಾಯುಕ್ತ ಬದ್ಧ

## • ಸಾರ್ವಜನಿಕರಿಗೆ ಸಮರ್ಪಕ ಸೇವೆ ಒದಗಿಸದ ಅಧಿಕಾರಿ, ಸಿಬ್ಬಂದಿಗಳಿಗೆ ಲೋಕಾಯುಕ್ತದಿಂದ ಕಾನೂನು ಕ್ರಮ

• **ಉದಯವಾಹಿನಿ ತುಮಕೂರು**

ಸಮಾಜದಲ್ಲಿ ಸಾರ್ವಜನಿಕರಿಗೆ ಸಂವಿಧಾನಾತ್ಮಕವಾಗಿ ಬದುಕಲು ಅವಕಾಶ ಕಲ್ಪಿಸುವ ಹಾಗೂ ಸಾರ್ವ ಜನಿಕ ಸೇವೆಗಳನ್ನು ಸಮರ್ಪಕವಾಗಿ ತಲುಪಿಸುವಲ್ಲಿ ವಿಫಲರಾದ ಸರ್ಕಾರಿ ಅಧಿಕಾರಿ, ಸಿಬ್ಬಂದಿಗಳ ಮೇಲೆ ಕಾನೂನು ಕ್ರಮದ ಬಿಸಿ ಮುಟ್ಟಿಸಲು ಕರ್ನಾಟಕ ಲೋಕಾಯುಕ್ತ ಟೊಂಕ ಕಟ್ಟಿ ನಿಂತಿದೆ ಎಂದು ಕರ್ನಾಟಕದ ಗೌರವಾನ್ವಿತ ಲೋಕಾಯುಕ್ತ ಬಿ.ಎಸ್.ಪಾಟೀಲ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ನಗರದ ಸರ್ಕಾರಿ ಅತಿಥಿ ಗೃಹದಲ್ಲಿಂದು ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿರುವ ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಲೋಕಾಯುಕ್ತ ಬದ್ಧವಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಯ ಸರ್ಕಾರಿ ಕಚೇರಿ, ಆಸ್ಪತ್ರೆ, ವಿದ್ಯಾರ್ಥಿನಿಲಯ, ಗ್ರಾಮ ಪಂಚಾಯತಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಲಾಗುತ್ತಿದೆ. ಸರ್ಕಾರಿ ಯೋಜನೆಗಳನ್ನು ಸಕಾಲದಲ್ಲಿ ಫಲಾನುಭವಿಗಳಿಗೆ ತಲುಪಿಸುವಲ್ಲಿ ಬೇಜವಾಬ್ದಾರಿ ತೋರುವ ಅಧಿಕಾರಿ/ಸಿಬ್ಬಂದಿಗಳು ಕಂಡು ಬಂದಲ್ಲಿ ಕೂಡಲೇ ಪ್ರಕರಣ ದಾಖಲಿಸಿ ಕಾನೂನು ಕ್ರಮಕ್ಕೆ ಮುಂದಾಗಲಾಗುವುದು ಎಂದು ಸೂಚನೆ ನೀಡಿದರು.

ರೈತರ ಕೃಷಿ ಚಟುವಟಿಕೆ ಹಾಗು ಕುಡಿಯುವ ನೀರಿನ ಪ್ರಯೋಜನಕ್ಕಾಗಿ ಹಿಂದಿನವರು ನಿರ್ಮಾಣ ಮಾಡಿರುವ ಕೆರೆ-ಕಟ್ಟೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಮೂಲಕ ಮುಂದಿನ ಪೀಳಿಗೆಗೂ ಉಳಿಸುವಂತಹ ಕೆಲಸವನ್ನು ಅಧಿಕಾರಿಗಳು ಮಾಡಬೇಕು. ರಸ್ತೆ, ಶಾಲೆ, ಅಂಗನವಾಡಿ ಕಟ್ಟಡ, ಶೌಚಾಲಯ ನಿರ್ಮಾಣದಂತಹ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ಅವ್ಯವಹಾರ ನಡೆಯಬಾರದು. ಸರ್ಕಾರದ ಅನುದಾನ ದುರ್ಬಳಕೆ ಮಾಡುವ ಅಧಿಕಾರಿಗಳ ವಿರುದ್ಧ ಲೋಕಾಯುಕ್ತಕ್ಕೆ ಸಾರ್ವಜನಿಕ ದೂರುಗಳು ಬರುತ್ತಲೇ ಇರುತ್ತವೆ.


ಉದಯವಾಹಿನಿ ಚಿತ್ರ

**ಗ್ರಾಪಂಗಳಿಗೆ ಅನಿರೀಕ್ಷಿತ ಭೇಟಿ**

ದೂರಿನನ್ವಯ ಯಾವುದೇ ಅಧಿಕಾರಿ ಇರಲಿ ತನಿಖೆ ನಡೆಸಿ, ಅಕ್ರಮ ಸಾಬೀತಾದಲ್ಲಿ ಅಂತಹವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವುದು ಲೋಕಾಯುಕ್ತ ಶತಸಿದ್ಧವೆಂದು ನಿರ್ದೇಶನ ನೀಡಿದರು. ಸಾರ್ವಜನಿಕ ದೂರುಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಲೋಕಾಯುಕ್ತದಲ್ಲಿ ಪೊಲೀಸ್, ಕಾನೂನು, ತಾಂತ್ರಿಕ, ಆಡಳಿತ ಶಾಖೆ ಸೇರಿ ಪ್ರತ್ಯೇಕ ಶಾಖೆಗಳಿದ್ದು, ಸಂಬಂಧಿಸಿದ ಶಾಖೆಗಳ ಅಧಿಕಾರಿಗಳು ಸ್ವೀಕೃತ ದೂರುಗಳ ಬಗ್ಗೆ ತನಿಖೆ ನಡೆಸಿ ಲೋಕಾಯುಕ್ತಕ್ಕೆ ವಿವರಣಾತ್ಮಕ ವರದಿ ನೀಡಲಿದ್ದಾರೆ. ವರದಿಯನ್ನಾಧರಿಸಿ ಲೋಪಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಲ್ಲದೆ ಲೋಪಗಳನ್ನು ಸರಿಪಡಿಸಲು ಸೂಕ್ತ ನಿರ್ದೇಶನ, ಸಲಹೆಗಳನ್ನು ನೀಡಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು, ಲೋಕಾಯುಕ್ತ ಎಸ್‌ಪಿ ಎ.ವಿ. ಲಕ್ಷ್ಮಿನಾರಾಯಣ ಸೇರಿದಂತೆ ಮತ್ತಿತರರು ಹಾಜರಿದ್ದರು.

> **ಜನಪ್ರತಿನಿಧಿಗಳು, ಸರ್ಕಾರಿ ಇಲಾಖೆ ಅಧಿಕಾರಿ, ಸಿಬ್ಬಂದಿವರ್ಗ, ಸ್ಥಳೀಯ ಸಂಸ್ಥೆಗಳು ಪ್ರಾಮಾಣಿಕವಾಗಿ ಸಾರ್ವಜನಿಕ ಸೇವೆಗಳನ್ನು ಒದಗಿಸಬೇಕು. ಸರ್ಕಾರದಿಂದ ವಿವಿಧ ಯೋಜನೆಗಳಡಿ ಬಿಡುಗಡೆಯಾಗುವ ಹಣವನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು. ವಿವಿಧ ಅಭಿವೃದ್ಧಿ ಯೋಜನೆಗಳಡಿ ಬಿಡುಗಡೆಯಾಗುವ ಕೋಟ್ಯಾಂತರ ರೂ.ಗಳ ಅನುದಾನವನ್ನು ಉದ್ದೇಶಿತ ಕಾಮಗಾರಿಗಳಿಗೆ ವಿನಿಯೋಗಿಸುವಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ಮೇಲೆ ಸ್ವಯಂ ಪ್ರೇರಿತವಾಗಿ ಲೋಕಾಯುಕ್ತ ಪ್ರಕರಣ ದಾಖಲಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು**
> **-ಬಿ.ಎಸ್.ಪಾಟೀಲ್, ಲೋಕಾಯುಕ್ತ**

## ಮಿನಿ ನ್ಯೂಸ್

### ರಾಮನಹಳ್ಳಿಯಲ್ಲಿ ಮಳೆಗೆ ಮನೆ ಕುಸಿತ

• **ಉದಯವಾಹಿನಿ ಶನಿವಾರಸಂತೆ**

ರಾತ್ರಿ ಸುರಿದ ಭಾರಿ ಗಾಳಿ, ಮಳೆಗೆ ಗೌಡಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಮನಹಳ್ಳಿ ಗ್ರಾಮದ ಸುರೇಶ್ ಎಂಬುವವರಿಗೆ ಸೇರಿದ ವಾಸದ ಮನೆ ಬಿದ್ದು ಹೋಗಿದೆ. ಈ ವೇಳೆ ಅದೃಷ್ಟವಶಾತ್ ಮನೆಯವರು ಅಪಾಯದಿಂದ ಪಾರಾಗಿದ್ದಾರೆ. ಮನೆ ಮಾಲೀಕ ಸುರೇಶ್ ಅವರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ನೀಡುವಂತೆ ಸೋಮವಾರಪೇಟೆ ಕರವೇ ಅಧ್ಯಕ್ಷ ಫ್ರಾನ್ಸಿಸ್ ಡಿಸೋಜ ಕಂದಾಯ ಇಲಾಖೆ ಅಧಿಕಾರಿಗಳಿಗೆ ಮನವಿ ನೀಡಿದ್ದಾರೆ.

### ಎಕ್ಸ್‌ಪ್ರೆಸ್ ವೇ: ತಗ್ಗಿದ ಅಪಘಾತ ಪ್ರಮಾಣ

• **ಉದಯವಾಹಿನಿ ರಾಮನಗರ**

ಸಾವಿನ ಹೆದ್ದಾರಿ ಎಂಬ ಕಳಂಕ ಪಡೆದಿದ್ದ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ನಲ್ಲಿ ಅಪಘಾತ ಪ್ರಮಾಣ ತಗ್ಗಿದೆ. 2023ರಲ್ಲಿ ಆಗಸ್ಟ್ ತಿಂಗಳವರೆಗೆ 147 ಮಂದಿ ಹೆದ್ದಾರಿಯಲ್ಲಿ ಅಪಘಾತದಲ್ಲಿ ಸಾವಿಗೀಡಾಗಿದ್ದರು. ಈ ವರ್ಷ ಇದುವರೆಗೆ 50 ಮಂದಿ ಸಾವಿಗೀಡಾಗಿದ್ದಾರೆ. ಫೆಬ್ರವರಿ ತಿಂಗಳಿಂದ ಸಾವಿನ ಪ್ರಮಾಣ ಸಿಂಗಲ್ ಡಿಜಿಟ್‌ಗೆ ಇಳಿದಿದ್ದು, ಈ ಬಗ್ಗೆ ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಎಕ್ಸ್ ಖಾತೆಯಲ್ಲಿ ಟ್ವೀಟ್ ಮಾಡಿ ಮಾಹಿತಿ ನೀಡಿದ್ದಾರೆ. 15 ನಿಮಿಷ ಪ್ರಯಾಣದ ಸಮಯ ಹೆಚ್ಚಿಸಿ ದರೆ ಅಮೂಲ್ಯ ಜೀವ ಉಳಿಯುತ್ತದೆ. ಈ ವರ್ಷ 97 ಅಮೂಲ್ಯ ಜೀವ ಉಳಿದಿದೆ' ಎಂದು ಅಲೋಕ್ ಕುಮಾರ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

### ಮೂರು ಕರುಗಳಿಗೆ ಜನ್ಮ ನೀಡಿದ ಹಸು

• **ಉದಯವಾಹಿನಿ ಕನಕಪುರ**

ಸಾಮಾನ್ಯವಾಗಿ ಹಸುಗಳು ಒಂದು ಅಥವಾ ಎರಡು ಕರುಗಳಿಗೆ ಜನನೀಡುವುದನ್ನು ಕಂಡಿದ್ದೇವೆ ಆದರೆ ಹಾರೋಹಳ್ಳಿ ತಾಲ್ಲೂಕು ಗೊಟ್ಟಿಗೆಹಳ್ಳಿ ಗ್ರಾಮದಲ್ಲಿ ಸೀಮೆ ಹಸುವೊಂದು ಮೂರು ಕರುಗಳಿಗೆ ಜನ ನೀಡಿದ ಅಪರೂಪದ ಘಟನೆ ನಡೆದಿದೆ. ದ್ಯಾವಸಂದ್ರ ಗ್ರಾಮ ಪಂಚಾಯಿತಿ ಗೊಟ್ಟಿಗೆಹಳ್ಳಿ ಗ್ರಾಮದ ಮಂಜುನಾಥ್ ಎಂಬುವವರು ಸಾಕಿರುವ ಸೀಮೆ ಹಸು ಇದುವರೆಗೂ ಒಂದೊಂದು ಕರುವಿಗೆ ಜನ ನೀಡುತಿತ್ತು.ಇದೀಗ ಮೂರು ಕರುಗಳಿಗೆ ಒಮೆಲೆ ಜನನೀಡಿ ಅಚ್ಚರಿ ಮೂಡಿಸಿದೆ. 2 ಗಂಡು ಒಂದು ಹೆಣ್ಣು ಕರುವಿಗೆ ಜನ ನೀಡಿದೆ ಸ್ಥಳಕ್ಕೆ ಮರಳವಾಡಿ ಕಿರಿಯ ಪಶು ವೈದ್ಯಕೀಯ ಪರೀಕ್ಷಕ ಸಂತೋಷ್ ಭೇಟಿ ನೀಡಿ ತಪಾಸಣೆ ನಡೆಸಿದ್ದಾರೆ. ಬಳಿಕ ಹಸು ಮತ್ತು ಕರುಗಳು ಆರೋಗ್ಯವಾಗಿದೆ ಎಂದು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

### ಅಪ್ಪ ಎಂಬ ಪಟ್ಟಕ್ಕೇ ಮಸಿ ಬಳಿದ ಪಾಪಿ: ಮಗಳನ್ನೇ ಗರ್ಭಿಣಿ ಮಾಡಿದ

• **ಉದಯವಾಹಿನಿ ತುಮಕೂರು**

ಅಪ್ಪ ಎಂಬ ಪಟ್ಟಕ್ಕೇ ಈ ಪಾಪಿ ಮಸಿ ಬಳಿದಿದ್ದಾನೆ. ತನ್ನ ಹದಿಹರೆಯದ ಮಗಳ ಮೇಲೆಯೇ ರೇಪ್ ಮಾಡಿ ಆಕೆ ಗರ್ಭಿಣಿಯಾಗಲು ಕಾರಣವಾಗಿದ್ದಾನೆ. ಈ ಘಟನೆ ನಡೆದಿರುವುದು ತುಮಕೂರಿನಲ್ಲಿ. 14 ವರ್ಷದ ಮಗಳ ಮೇಲೆ ತಂದೆಯೇ ನಿರಂತರ ಅತ್ಯಾಚಾರವೆಸಗಿದ ಕಾರಣಕ್ಕೆ ಆಕೆ ಗರ್ಭಿಣಿಯಾಗಿದ್ದಾಳೆ. ತುಮಕೂರಿನ ಹೊನ್ನವಳ್ಳಿಯಲ್ಲಿ ಈ ಘಟನೆ ನಡೆದಿದೆ. ಕೆಲಸಕ್ಕೆಂದು ಬೇರೆ ರಾಜ್ಯದಿಂದ ಇಲ್ಲಿಗೆ ವಲಸೆ ಬಂದಿದ್ದ ವ್ಯಕ್ತಿ ಮಗಳ ಮೇಲೆಯೇ ಅತ್ಯಾಚಾರವೆಸಗಿದ್ದಾನೆ.

ಇತ್ತೀಚೆಗೆ ಬಾಲಕಿಯ ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ತಾಯಿ ಆಸ್ಪತ್ರೆಗೆ ಕರೆದೊಯ್ದಾಗ ಪ್ರಕರಣ ಬೆಳಕಿಗೆ ಬಂದಿದೆ. ಬಾಲಕಿ ಈಗ ಮೂರು ತಿಂಗಳ ಗರ್ಭಿಣಿಯಾಗಿದ್ದು, ವಿಷಯ ತಿಳಿಯುತ್ತಿದ್ದಂತೇ ಪೊಲೀಸರು ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸುಮಾರು ಎಂಟು ತಿಂಗಳ ಹಿಂದಷ್ಟೇ ಈ ಕುಟುಂಬ ಕೂಲಿ ಕೆಲಸಕ್ಕಾಗಿ ತುಮಕೂರಿಗೆ ಬಂದು ಹೊನ್ನವಳ್ಳಿಯಲ್ಲಿ ವಾಸ್ತವ್ಯ ಹೂಡಿತ್ತು. ಆದರೆ ತಂದೆಯೇ ತನ್ನ ಮೇಲೆ ನಡೆಸಿದ ಕ್ರೌರ್ಯದ ಬಗ್ಗೆ ಯಾರಿಗೂ ಹೇಳಲಾಗದೇ ಬಾಲಕಿ ಒಳಗೊಳಗೇ ಕುಗ್ಗಿಹೋಗಿದ್ದಳು. ಇದೀಗ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.

### ಮಹಿಳಾ ಪಿಎಸ್‌ಐ ಕ್ಯಾನ್ಸರ್‌ಗೆ ಬಲಿ

• **ಉದಯವಾಹಿನಿ ಕೋಲಾರ**



ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಮಹಿಳಾ ಪಿಎಸ್‌ಐ ಓರ್ವರು ಸಾವನ್ನಪ್ಪಿರುವ ಘಟನೆ ಕೋಲಾರ ಜಿಲ್ಲೆಯ ಕೆಜಿಎಫ್ ನಲ್ಲಿ ನಡೆದಿದೆ. ಕೆಜಿಎಫ್ ನಗರದ ರಾಬರ್ಟ್‌ಸನ್ ಪೇಟೆ ಪೊಲೀಸ್ ಠಾಣೆ ಪಿಎಸ್‌ಐ ಗಾಯತ್ರಿ (51) ಮೃತರು. ಕಳೆದ 30 ವರ್ಷಗಳಿಂದ ಗಾಯತ್ರಿ ಕೆಜಿಎಫ್ ವಿಭಾಗದ ಪೊಲೀಸ್ ಠಾಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಹಲವು ವರ್ಷಗಳಿಂದ ಕ್ಯಾನ್ಸರ್ ನಿಂದ ಬಳಲುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಗಾಯತ್ರಿ ಕೊನೆಯುಸಿರೆಳೆದಿದ್ದಾರೆ. ಪಿಎಸ್‌ಐ ಗಾಯತ್ರಿ ಸಾವಿಗೆ ಕೆಜಿ ಎಫ್ ಎಸ್ ಪಿ ಶಾಂತರಾಜು, ಡಿವೈ ಎಸ್ ಪಿ ಪಾಂಡುರಂಗ ಸೇರಿದಂತೆ ಪೊಲೀಸ್ ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ.

### ವೀರಭದ್ರೇಶ್ವರ ಜಯಂತ್ಯುತ್ಸವ

• **ಉದಯವಾಹಿನಿ ಮಾಗಡಿ**

ತಾಲ್ಲೂಕಿನ ಸಾವನದುರ್ಗ ಬೆಟ್ಟದ ತಪ್ಪಲಿನಲ್ಲಿ ನೆಲಸಿರುವ ಭದ್ರಕಾಳಮ್ಮ ಸಮೇತ ಸಾವಂದಿ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ವೀರಭದ್ರೇಶ್ವರ ಜಯಂತಿ ನಡೆಯಿತು. ವೀರಭದ್ರಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ಬೆಳಗ್ಗೆ ಸ್ವಾಮಿಗೆ ಗಂಗಾಪೂಜೆ, ಮಹಾಗಣಪತಿ ಪೂಜೆ, ನವಗ್ರಹ ಶಾಂತಿ, ಗಣಹೋಮ, ರುದ್ರಹೋಮ, ರುದ್ರಾಭಿಷೇಕ, ಅಷ್ಟೋತ್ತರ, ವಿಶೇಷ ಅಲಂಕಾರ, ಮಹಾಮಂಗಳಾರತಿ, ವೀರಗಾಸೆ ಸಮೇತ ಸ್ವಾಮಿಯ ಪ್ರಕಾರೋತ್ಸವ ಸೇವೆ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯ ನೆರವೇರಿದವು.

ದೇವಾಲಯದ ಆವರಣದಲ್ಲಿ ಪುಷ್ಪಾಲಂಕೃತ ಸ್ವಾಮಿಯ ಉತ್ಸವ ವೀರಭದ್ರೇಶ್ವರ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಲಾಯಿತು.

ಜಡೆದೇವರ ಮಠದ ಪೀಠಾಧ್ಯಕ್ಷರಾದ ಇಮ್ಮಡಿ ಬಸವರಾಜ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಪ್ರಧಾನ ಅರ್ಚಕರಾದ ಮೃತ್ಯುಂಜಯಾರಾಧ್ಯ, ಅರ್ಚಕರಾದ ನಿರಂಜನಾರಾಧ್ಯ, ಎಲ್.ವಿ.ಟ್ರಾವೆಲ್ ಮಾಲೀಕರಾದ ಪರಮಶಿವಯ್ಯ, ಪಂಚಾಕ್ಷರಿ, ರೇಣುಕಾಪ್ರಸಾದ್, ವಿ.ಜಿ.ದೊಡ್ಡಿ ಲೋಕೇಶ್, ಪೊಲೀಸ್ ಸಚ್ಚಿದಾನಂದ ಮೂರ್ತಿ, ರುದ್ರೇಶ್, ನೀಲಾಂಬಿಕೆ ರುದ್ರಮೂರ್ತಿ, ಅಂಬರೀಶ್, ಸಿದ್ದಲಿಂಗಸ್ವಾಮಿ, ಸಿಬ್ಬಂದಿಗಳು, ಭಕ್ತಾದಿಗಳು ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

ಅಂತರಾಳದಿಂದ.. EDITORIAL

# ಬುಲ್ಡೋಜರ್ ನ್ಯಾಯಕ್ಕೆ ಅಸಮಾಧಾನ ಶಿಕ್ಷೆ ಆಗಬೇಕಿರುವುದು ಸರ್ಕಾರಗಳಿಗೆ

ಅಕ್ರಮವಾಗಿ ನಿರ್ಮಿಸಿದ ಕಟ್ಟಡಗಳ ವಿಚಾರವಾಗಿ ಕೈಗೊಳ್ಳಬೇಕಾದ ಕ್ರಮ ಏನು ಎಂಬ ಕುರಿತಾಗಿ ಮಾರ್ಗಸೂಚಿಗಳನ್ನು ಹೊರಡಿಸುವುದಾಗಿ ಹೇಳಿದೆ. ಕೋರ್ಟ್ ಈ ಮಾತು ಇನ್ನೂ ಮೊದಲೇ ಬರಬಹುದಿತ್ತು, ಅಂದರೆ, ಬಿಜೆಪಿಯು ಅಧಿಕಾರದ ಚುಕ್ಕಾಣಿ ಹಿಡಿದಿರುವ ರಾಜ್ಯಗಳಲ್ಲಿ, ಪ್ರತೀಕಾರ ಅಥವಾ ಹಗೆ ತೀರಿಸಿಕೊಳ್ಳುವ ಉದ್ದೇಶದಿಂದ ನಡೆಯುವ ಧ್ವಂಸ ಪ್ರಕ್ರಿಯೆಯು ಸರ್ಕಾರದ ನೀತಿಯಾಗಿ ಬೇರು ಬಿಡುವ ಮೊದಲೇ ಕೋರ್ಟ್ ಈಗ ಆಡಿರುವ ಮಾತುಗಳನ್ನು ಆಡಬಹುದಿತ್ತು. ಧ್ವಂಸಕ್ಕೆ ಸಂಬಂಧಿಸಿದ ಬಿಡಿ ಪ್ರಕರಣಗಳು ಈ ಹಿಂದೆ ಕೋರ್ಟ್ ಗಮನ ಸೆಳೆದಿವೆ. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್, ಈ ಬಗೆಯ ಧ್ವಂಸ ಕಾರ್ಯವನ್ನು 'ಜನಾಂಗೀಯ ನಿರ್ಮೂಲನೆ ಎಂದು ಕೂಡ ಕಳೆದ ವರ್ಷ ಕರೆದಿತ್ತು. ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ವ್ಯಕ್ತಿಗಳ ಅಥವಾ ಅಂತಹ ವ್ಯಕ್ತಿಗಳ ಕುಟುಂಬದ ಸದಸ್ಯರ ಮನೆಗಳನ್ನು ಧ್ವಂಸಗೊಳಿಸುವುದನ್ನು ಶಿಕ್ಷೆಯ ರೂಪದಲ್ಲಿ ಎಲ್ಲೆಡೆಯೂ ಜಾರಿಗೆ ತರಬೇಕು ಎಂಬ ಒತ್ತಾಯ ಕೂಡ ಹಲವು ವ್ಯಕ್ತಿಗಳಿಂದ ಬಂದಿದೆ. ಅಲ್ಲದೆ, ಈ ಬಗೆಯ ಕ್ರಮವನ್ನು ಹಲವರು ಸರಿಯಾದ ದ್ದಾರೆ.


ಉದಯವಾಹಿನಿ ಚಿತ್ರ

**ಗಲಭೆ ಅಥವಾ ಹಿಂಸಾಚಾರ ಪ್ರಕರಣಗಳಲ್ಲಿ ಆರೋಪಿಗಳಾದ ಕೆಲವರಿಗೆ ಸೇರಿದ ಮನೆಗಳನ್ನು ಅಥವಾ ಕಟ್ಟಡಗಳನ್ನು ಬುದ್ಡೋಜರ್ ಬಳಸಿ ಧ್ವಂಸಗೊಳಿಸುವ ಕಾರ್ಯವು ದೇಶದ ಕೆಲವು ರಾಜ್ಯಗಳಲ್ಲಿ ಚಾಲ್ತಿಯಲ್ಲಿದೆ. ಇದನ್ನು ಈಗ ಬುಲ್ಡೋಜರ್ ನ್ಯಾಯ' ಎಂದು ಗುರುತಿಸಲಾಗುತ್ತಿದೆ. ಈ 'ನ್ಯಾಯ'ದ ಬಗ್ಗೆ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.**

ಇಂತಹ 'ನ್ಯಾಯ'ವನ್ನು ಐದು ವರ್ಷಗಳ ಹಿಂದೆ ಕ್ರಿಯಾರೂಪಕ್ಕೆ ತಂದವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು. ಇಂತಹ 'ನ್ಯಾಯ'ನನ್ನು ಈಗ ಮಧ್ಯಪ್ರದೇಶ, ಹರಿಯಾಣ ಮತ್ತು ಆಸ್ಸಾಂ ರಾಜ್ಯಗಳೂ ಅಳವಡಿಸಿಕೊಂಡಿವೆ. ಬುಲ್ಡೋಜರ್‌ಬಳಸಿ ಕಟ್ಟಡ ಧ್ವಂಸಗೊಳಿಸುವುದು ಕಾನೂನಿಗೆ ಅಥವಾ ರಾಜಕಾರಣಕ್ಕೆ ಸಂಬಂಧಿಸಿದ ಸಂಗತಿ ಮಾತ್ರವೇ ಅಲ್ಲ. ಇದು ಬಹುತೇಕ ಸಂದರ್ಭಗಳಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡಿ ರುತ್ತದೆ. ಬುಲ್ಡೋಜರ್ ಸಂಸ್ಕೃತಿಯಲ್ಲಿ ಇರುವಂತಹ 'ದಿಢೀರ್ ನ್ಯಾಯ'ವನ್ನು ಯಾವ ಕಾನೂನು ಕೂಡ ಒಪ್ಪಲು ಸಾಧ್ಯವಿಲ್ಲ. ಕಾನೂನಿಗೆ ಅನುಗುಣವಾದ ಆಡಳಿತ ಇರುವ ಸಮಾಜದಲ್ಲಿ, ವ್ಯವಸ್ಥೆಯಲ್ಲಿ ಸರಿಯಾದ ಪ್ರಕ್ರಿಯೆಗಳ ಪಾಲನೆಯ ಮೂಲಕ ಮಾತ್ರ ನ್ಯಾಯದಾನ ಸಾಧ್ಯ. ಆದರೆ, ದುರದೃಷ್ಟದ ಸಂಗತಿಯೆಂದರೆ 'ದಿಢೀರ್ ನ್ಯಾಯ'ವನ್ನು ವೈಭವೀಕರಿಸುವ ಹಾಗೂ ಅಂತಹ 'ನ್ಯಾಯ'ಕ್ಕೆ ಒಪ್ಪಿಗೆ ನೀಡುವ ದೊಡ್ಡ ವರ್ಗವೊಂದು ಸಮಾಜದಲ್ಲಿ ಇದೆ. ಬುಲ್ಡೋಜರ್ ಎಂಬ ಯಂತ್ರವು ಈ 'ದಿಢೀರ್ ನ್ಯಾಯ'ದ ಗುರುತಾಗಿದೆ.

'ದಿಢೀರ್ ನ್ಯಾಯ'ಕ್ಕೆ ಬೇಡಿಕೆ ಹಾಗೂ ಮುಸ್ಲಿಮರ ವಿರುದ್ಧದ ಪೂರ್ವಗ್ರಹಗಳು ಒಂದುಗೂಡಿದಾಗ, ಬುಲ್ಡೋಜರ್ ಎಂಬುದು ಶಿಕ್ಷೆಯ ಹತಾರವಾಗುತ್ತದೆ. ನಡೆದಿರುವ ಅಪರಾಧವನ್ನು ಗುರುತಿಸಿ, ಸಂತ್ರಸ್ತರಿಗೆ ನ್ಯಾಯ ಕೊಡಿಸುವ ಕೆಲಸ ಇಲ್ಲಿ ಆಗುವುದಿಲ್ಲ. ಬದಲಿಗೆ, ವ್ಯಕ್ತಿಯೊಬ್ಬನನ್ನು ಆತನ ಅಸ್ಮಿತೆಯ ಕಾರಣಕ್ಕೆ ಶಿಕ್ಷೆಗೆ ಗುರಿಪಡಿಸಲು ಇದು ಒಂದು ನೆಪವಾಗುತ್ತದೆ. ಇದು ಪ್ರಭುತ್ವವೇ ಎಸಗುವ ದ್ವೇಷದ ಕೃಷ್ಣವಾಗುತ್ತದೆ. ವಾಸ್ತವದಲ್ಲಿ, ಬುಟ್ಟೋಜರ್ ನ್ಯಾಯದ ವಿಚಾರವಾಗಿ ಮಾರ್ಗಸೂಚಿಯನ್ನು ರೂಪಿಸಬೇಕಾದ ಆಗತ್ಯವೇ ಇಲ್ಲ. ಏಕೆಂದರೆ. ಯಾವುದೋ ಪ್ರಕರಣದ ಆರೋಪಿಯೊಬ್ಬರ ಮನೆಯನ್ನು ಬುಲ್ಲೋಜರ್ ಬಳಸಿ ಧ್ವಂಸಗೊಳಿಸುವುದು ಕಾನೂನಿಗೆ ಗೌರವ ಇಲ್ಲದವರು ಮಾಡುವ ಕೆಲಸ. ಇಂತಹ ಕೃತ್ಯವನ್ನು ನಿಲ್ಲಿಸಬೇಕು. ಪ್ರಕರಣವೊಂದರಲ್ಲಿ ಆರೋಪಿ ಎಂದಮಾತ್ರಕ್ಕೆ ಯಾವುದೇ ವ್ಯಕ್ತಿಯ ಮನೆಯನ್ನು ಧ್ವಂಸಗೊಳಿಸುವುದು ಎಷ್ಟು ಸರಿ ಎಂದು ಪ್ರಶ್ನಿಸುವ ಮೂಲಕ ಸುಪ್ರೀಂ ಕೋರ್ಟ್. ದೇಶದ ಕಾನೂನು ಏನಿದೆ ಎಂಬುದನ್ನು ಸ್ಪಷ್ಟಪಡಿಸಿದೆ. ವ್ಯಕ್ತಿಯೊಬ್ಬ ಅಪರಾಧಿ ಎಂದು ಸಾಬೀತಾದರೂ ಆತನ ಮನೆಯನ್ನು ಧ್ವಂಸಗೊಳಿಸಲು ಕಾನೂನಿನ ಆಡಿ ಅವಕಾಶ ಇಲ್ಲ ಎಂಬುದನ್ನು ಕೋರ್ಟ್ ಸ್ಪಷ್ಟಪಡಿಸಿದೆ. ಅಕ್ರಮವಾಗಿ ನಿರ್ಮಿಸಿದ ಕಟ್ಟಡಗಳನ್ನು ಧ್ವಂಸಗೊಳಿಸಲು ಕೆಲವು ಕಾನೂನುಗಳಲ್ಲಿ ಇರುವ ಅವಕಾಶವನ್ನು ಕೆಲವು ವರ್ಗಗಳಿಗೆ ಸೇರಿದ ಜನರ ವಿರುದ್ಧ ಮಾತ್ರ ಬಳಸಲು ಜಾಣತನದಿಂದ ಉಪಯೋಗಿಸಿಕೊಳ್ಳಲಾಗುತ್ತಿದೆ.

ಕಟ್ಟಡ ಧ್ವಂಸ ಪ್ರಕರಣಗಳಲ್ಲಿ ಕಾನೂನಿನ ಎಲ್ಲಾ ಪ್ರಕ್ರಿಯೆಗಳನ್ನೂ ಪೂರೈಸಲಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರ ನೀಡಿರುವ ವಿವರಣೆಯಿಂದ ಇದು ಸ್ಪಷ್ಟವಾಗುತ್ತದೆ. ಆದರೆ. ಕೆಲವು ಕಟ್ಟಡಗಳನ್ನು ಮಾತ್ರ ಏಕೆ ಗುರಿಯಾಗಿಸಿಕೊಳ್ಳಲಾಗುತ್ತದೆ ಎಂಬುದು ಇಲ್ಲಿರುವ ಪ್ರಶ್ನೆ. ಈ ಧ್ವಂಸ ಸಂಸ್ಕೃತಿಯ ಮೂಲದಲ್ಲಿರುವುದು ಕಾನೂನನ್ನು ಬಳಕೆ ಮಾಡುವಲ್ಲಿ ಇರುವ ತಾರತಮ್ಯದ ನಡೆ. ಕೋರ್ಟ್ ರೂಪಿಸಲಿರುವ ಮಾರ್ಗಸೂಚಿಯು ಇದನ್ನು ಗಮನಿಸಬೇಕು. ಇಂತಹ ತಾರತಮ್ಯಕ್ಕೆ ಕಡಿವಾಣ ಹಾಕಬೇಕು. ಸಂತ್ರಸ್ತರಿಗೆ ಪರ್ಯಾಯ ವಸತಿಯನ್ನು ಕಲ್ಪಿಸದೆ, ಅಕ್ರಮ ಕಟ್ಟಡಗಳನ್ನು ಕೂಡ ಧ್ವಂಸಗೊಳಿಸಲು ಅವಕಾಶ ಇಲ್ಲ. ಮನೆಗಳನ್ನು ಧ್ವಂಸಗೊಳಿಸುವ ಬುಲ್ಲೋಜರ್‌ಗಳ ಹಿಂದೆ ಚಾಲಕಶಕ್ತಿಯಾಗಿ ಕೆಲಸ ಮಾಡುತ್ತಿರುವುದು ತಾರತಮ್ಯದ ರಾಜಕಾರಣ. ಇಂತಹ ಕೆಲಸ ಮಾಡುವ ಸರ್ಕಾರಗಳು ಅರಾಜಕತೆಗೆ ಉತ್ತೇಜನ ನೀಡುತ್ತಿವೆ. ಇಂತಹ ಸರ್ಕಾರಗಳನ್ನು ಶಿಕ್ಷೆಗೆ ಗುರಿಪಡಿಸಬೇಕು. ಮತ್ತೆ ಮತ್ತೆ ತಪ್ಪು ಮಾಡುವ ಸರ್ಕಾರಗಳನ್ನು ವಜಾಗೊಳಿಸಬೇಕು. ಮಾರ್ಗಸೂಚಿಗಳು ಅಂಥದ್ದೊಂದು ಅವಕಾಶ ಹೊಂದಿರಲಿವೆಯೇ ಎಂಬುದು ಈಗಿರುವ ಪ್ರಶ್ನೆ.



## ಮಹಾಭಾರತ
### ಮಹಾಪ್ರಸ್ಥಾನಿಕಪರ್ವ

• ಹಿಂದಿನ ಸಂಚಿಕೆಯಿಂದ

ಆದರೂ ಸಾವರಿಸಿಕೊಂಡು, ನಿರಪರಾಧಿಯಾದ ದ್ರೌಪದಿಯು ಬಿದ್ದುದೇಕೆ ಎಂದು ಯುಧಿಷ್ಠಿರನನ್ನು ಕೇಳಿದನು. ಯುಧಿಷ್ಠಿರನು, ''ಭೀಮ, ನಾವೆಲ್ಲರೂ ಪತಿಗಳಾದಾಗ್ಯೂ ಅವಳಿಗೆ ಅರ್ಜುನನ ಮೇಲೆ ವಿಶೇಷ ಪ್ರೀತಿಯಿತ್ತು. ಉಳಿದಂತೆ ಅವಳು ಪರಮಶುದ್ಧಳು; ಅದರಿಂದಾಗಿಯೇ ಅವಳಿಗೆ ಇಲ್ಲಿಯವರೆಗೆ ಬರಲು ಸಾಧ್ಯವಾಯಿತು'' ಎಂದನು. ಅವಳನ್ನು ಅಲ್ಲಿಯೇ ಬಿಟ್ಟು ಅವರು ಮುಂದುವರೆದರು. ಸ್ವಲ್ಪ ದೂರ ಹೋಗುವುದರೊಳಗೆ ಸಹದೇವನು ಬಿದ್ದುಬಿಟ್ಟನು. ಯುಧಿಷ್ಠಿರನನು, ಸಹದೇವನಿಗೆ ತಾನೇ ವಿವೇಕಿ ಎಂಬ ಭಾವನೆಯಿದ್ದಿತು, ಅದೇ ಅವನು ಬೀಳಲು ಕಾರಣ ಎಂದು ವಿವರಿಸಿದನು. ಅನಂತರ ಬಿದ್ದವನು ನಕುಲ. ಯುಧಿಷ್ಠಿರನು, ನಕುಲನಿಗೆ ತಾನೇ ಸುಂದರಾಂಗ ಎಂಬ ಹೆಮ್ಮೆಯಿದ್ದಿತು, ಅದು ಅವನು ಬೀಳುವುದಕ್ಕೆ ಕಾರಣ ಎಂದನು. ಅನಂತರ ಅರ್ಜುನನ ಸರದಿ. ಎಲ್ಲಾ ಶತ್ರುಗಳನ್ನೂ ತಾನೊಬ್ಬನೇ ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿದ್ದು, ಉಳಿದ ವೀರರನ್ನೆಲ್ಲ ಅವಮಾನಿಸಿದುದರಿಂದ ಅವನು ಬಿದ್ದನು ಎಂದನು ಯುಧಿಷ್ಠಿರ. ಸ್ವಲ್ಪ ದೂರ ಹೋಗುವುದರೊಳಗಾಗಿ ಸ್ವಯಂ ಭೀಮನೇ ಬಿದ್ದುಬಿಟ್ಟನು. ''ನಾನೂ ಬಿದ್ದುಹೋಗುತ್ತಿದ್ದೇನೆ. ಅಣ್ಣಾ, ನಾನು ಮಾಡಿದ ಅಪರಾಧವೇನು ಎಂದು ಕೂಗಿ ಕೇಳಲು, ಯುಧಿಷ್ಠಿರನನು ಪ್ರಿಯ ಭೀಮ, ನೀನು ಯಾವಾಗಲೂ ನನಗೆ ತುಂಬ ಪ್ರೀತಿಪಾತ್ರ. ನೀನು ಯಾವಾಗಲೂ ನಿನ್ನ ಬಲವನ್ನು ಕುರಿತು ಹೆಮ್ಮೆಪಡುತ್ತಿದ್ದೆ. ಅಲ್ಲದೆ ಹೆಚ್ಚಾಗಿ ಆಹಾರ ಸೇವಿಸುತ್ತಿದ್ದೆ. ಇದನ್ನು ಬಿಟ್ಟರೆ ನಿನ್ನಂಥವರು ಲೋಕದಲ್ಲಿ ಯಾರೂ ಇಲ್ಲ'' ಎಂದು ಉತ್ತರಿಸಿದ ಯುಧಿಷ್ಠಿರನು, ಶಾಂತಿಯನ್ನರಸಿಕೊಂಡು ತಾನೊಬ್ಬನೇ ಮುನ್ನಡೆದನು. ಅವರು ಹಸ್ತಿನಾವತಿಯನ್ನು ಬಿಟ್ಟಾಗಿನಿಂದ ಒಂದು ನಾಯಿಯು ಅವರನ್ನು ಅನುಸರಿಸಿಕೊಂಡೇ ಬರುತ್ತಿದ್ದಿತು. ಯುಧಿಷ್ಠಿರನನು ರಾಣಿ ದ್ರೌಪದಿಯು ಬಿದ್ದು ಹೋದಳು; ಅವನ ಸಹೋದರರೆಲ್ಲರೂ ಬಿದ್ದುಹೋದರು; ಆದರೆ ಈ ನಾಯಿ ಮಾತ್ರ ಅವನನ್ನು ಕೊನೆಯವರೆಗೂ ಅನುಸರಿಸಿಕೊಂಡೇ ನಡೆಯಿತು. ಯುಧಿಷ್ಠಿರನು ತನ್ನ ಸುತ್ತಲೂ ಒಂದು ಅಲೌಕಿಕ ಪ್ರಭೆ ಮೂಡಿರುವುದನ್ನು ಗಮನಿಸಿದನು. ನೋಡಿದರೆ ತನ್ನ ರಥದಲ್ಲಿ ಬಂದಿಳಿದ ದೇವೇಂದ್ರ. ಅವನು, ''ಯುಧಿಷ್ಠಿರ, ನಿನ್ನನ್ನು ಸ್ವರ್ಗಕ್ಕೆ ಕರೆದೊಯ್ಯಲು ಸ್ವಯಂ ನಾನೇ ಬಂದಿರುವೆ. ಬಾ ರಥವೇರಿ ಕುಳಿತುಕೋ'' ಎಂದು ಆಹ್ವಾನಿಸಿದನು. ಯುಧಿಷ್ಠಿರನನಿಗೆ ದ್ರೌಪದಿಯನ್ನೂ ತನ್ನ ತಮ್ಮಂದಿರನ್ನೂ ಬಿಟ್ಟು ಸ್ವರ್ಗಕ್ಕೆ ಹೋಗಲು ಇಷ್ಟವಿರಲಿಲ್ಲ. ದ್ರೌಪದಿಯು ನನ್ನ ತಮ್ಮಂದಿರೂ ನನ್ನ ಜೊತೆಗೇ ಇಲ್ಲಿಯವರೆಗೂ ಬಂದರು. ಅವರೆಲ್ಲ ಬಿದ್ದುಹೋಗಿರುವರು, ದೇಹ ತ್ಯಾಗ ಮಾಡಿರುವರು. ಅವರು ಎಲ್ಲಿಗೆ ಹೋಗಿರುವರೋ ತಿಳಿಯದು. ಅವರ ಜೊತೆಗಲ್ಲದೆ ನಾನು ಸ್ವರ್ಗಕ್ಕೆ ಬರುವುದಿಲ್ಲ ಎನ್ನಲು, ಇಂದ್ರನು ನಕ್ಕು ಯುಧಿಷ್ಠಿರ, ಅವರು ಈಗಾಗಲೇ ಮನುಷ್ಯಶರೀರವನ್ನು ತೊರೆದು ಸ್ವರ್ಗವನ್ನು ಸೇರಿದ್ದಾರೆ.

**ಮುಂದುವರಿಯುವುದು...**

# ಮಕ್ಕಳಲ್ಲಿ ಆದರ್ಶ ವ್ಯಕ್ತಿತ್ವ ರೂಪಿಸುವ ಏಕೈಕ ವ್ಯಕ್ತಿ ಶಿಕ್ಷಕ



ಎನ್.ಎನ್.ಕಬ್ಬೂರ
• ಉದಯವಾಹಿನಿ, ವಿಶೇಷ

ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು 5 ಸೆಪ್ಟೆಂಬರ್ 1888 ರಂದು ಜನಿಸಿದರು, ಭಾರತದಲ್ಲಿ ಶಿಕ್ಷಕರ ದಿನಾಚರಣೆಯು ಅವರ ಜನ್ಮದಿನವನ್ನು ಸ್ಮರಿಸುತ್ತದೆ. ಅವರು ಸ್ವತಂತ್ರ ಭಾರತದ ಮೊದಲ ಉಪರಾಷ್ಟ್ರಪತಿ ಮತ್ತು ಎರಡನೇ ರಾಷ್ಟ್ರಪತಿಯಾಗಿದ್ದರು. ಡಾ.ಎಸ್.ರಾಧಾಕೃಷ್ಣನ್ ಅವರು ಸಮಕಾಲೀನ ಭಾರತದ ಅತ್ಯಂತ ಪ್ರಸಿದ್ಧ ಬರಹಗಾರರಲ್ಲಿ ಒಬ್ಬರು. ಅವರು ಸೈದ್ಧಾಂತಿಕ, ದೇವತಾಶಾಸ್ತ್ರ, ನೈತಿಕ, ಬೋಧಪ್ರದ, ಸಾಮುದಾಯಿಕ ಮತ್ತು ಪ್ರಬುದ್ಧ ವಿಷಯಗಳಿಂದ ಪ್ರಾರಂಭವಾಗುವ ವಿವಿಧ ವಿಷಯಗಳಿಗೆ ಗಮನಾರ್ಹ ಕೊಡುಗೆಗಳನ್ನು ನೀಡಿದ್ದಾರೆ. ಅವರು ಅನೇಕ ಮಾನ್ಯತೆ ಪಡೆದ ನಿಯತಕಾಲಿಕೆಗಳಲ್ಲಿ ಹಲವಾರು ಲೇಖನಗಳನ್ನು ಬರೆದಿದ್ದಾರೆ, ಅವುಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿವೆ. ಭಾರತದಲ್ಲಿ ಮೊದಲ ಶಿಕ್ಷಕರ ದಿನವನ್ನು ಸೆಪ್ಟೆಂಬರ್ 5, 1962 ರಂದು ಗುರುತಿಸಲಾಯಿತು, ಅದು ಅವರ 77ನೇ ಜನ್ಮದಿನವಾಗಿತ್ತು.

ಡಾ.ರಾಧಾಕೃಷ್ಣನ್ ಅವರು ಭಾರತದ ರಾಷ್ಟ್ರಪತಿಯಾದ ಸಂದರ್ಭದಲ್ಲಿ ಅವರ ಕೆಲವು ಸ್ನೇಹಿತರು ಮತ್ತು ವಿದ್ಯಾರ್ಥಿಗಳು ಅವರನ್ನು ಸಂಪರ್ಕಿಸಿದರು ಮತ್ತು ಸೆಪ್ಟೆಂಬರ್ 5 ರಂದು ಅವರ ಜನ್ಮದಿನವನ್ನು ಆಚರಿಸಲು ಅವಕಾಶ ನೀಡುವಂತೆ ವಿನಂತಿಸಿದರು.

ಡಾ.ಎಸ್.ರಾಧಾಕೃಷ್ಣನ್ ಪ್ರತಿಕ್ರಿಯಿಸುತ್ತಾ ನನ್ನ ಜನ್ಮದಿನವನ್ನು ವಿವೇಚನೆಯಿಂದ ಆಚರಿಸುವ ಬದಲು, ಸೆಪ್ಟೆಂಬರ್ 5ನ್ನು ಶಿಕ್ಷಕರ ದಿನವನ್ನಾಗಿ ಪರಿಗಣಿಸಿದರೆ ಅದು ನನ್ನ ಆಡಂಬರದ ಸೌಭಾಗ್ಯ ಎಂದರಂತೆ.

ಭಾರತದ ರಾಷ್ಟ್ರಪತಿಗಳಿಂದ ಬಂದ ಇಂತಹ ವಿನಂತಿಯು ಡಾ.ಎಸ್.ರಾಧಾಕೃಷ್ಣನ್ ಅವರ ಶಿಕ್ಷಕರ ಮೇಲಿನ ಪ್ರೀತಿ, ಸಮರ್ಪಣೆಯನ್ನು ಸ್ಪಷ್ಟವಾಗಿ ಪ್ರದರ್ಶಿಸುತ್ತದೆ. ಅಂದಿನಿಂದ ಭಾರತದಲ್ಲಿ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನವನ್ನು ಆಚರಿಸುತ್ತದೆ. ಡಾ.ಸರ್ವಪಲ್ಲಿ ರಾಧಾಕೃಷ್ಣನರವರು ಶಿಕ್ಷಣತಜ್ಞರಾಗಿ, ಸಂಸ್ಕರಣೆಯ ಪ್ರತಿಪಾದಕರಾಗಿ ಪ್ರತಿಷ್ಠಿತ ದೂತರಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಶ್ರೇಷ್ಠ ಶಿಕ್ಷಕರಾಗಿ ಸರ್ವಮಾನ್ಯರಾಗಿದ್ದರು.

ಗುರಿ ಸಾಧನೆಗೆ ಹಿಂದೆ ಗುರು, ಮುಂದೆ ಗುರಿ ಅತೀ ಅವಶ್ಯಕ ಹಾಗೂ ಶಿಕ್ಷಕ ಎಂದರೆ ಜೀವನದಲ್ಲಿ ಬರವಸೆ ಮೂಡಿಸುವ ವ್ಯಕ್ತಿತ್ವವಾಗಿದ್ದು, ಮಕ್ಕಳಲ್ಲಿ ಆದರ್ಶ ವ್ಯಕ್ತಿತ್ವ ರೂಪಿಸುವ ಏಕೈಕ ವ್ಯಕ್ತಿ ಶಿಕ್ಷಕನಾಗಿದ್ದಾನೆ. ಶಿಕ್ಷಕರಾಗಿರುವುದು ಉದಾತ್ತ ವೃತ್ತಿಯಾಗಿದ್ದು ಅದು ಇತರ ಯಾವುದೇ ವೃತ್ತಿಯಂತೆ ಸಮಾನವಾದ ಪ್ರೀತಿ ಮತ್ತು ಗೌರವಕ್ಕೆ ಅರ್ಹವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

**ಶಿಕ್ಷಕರ ದಿನಾಚರಣೆ ಪ್ರಯುಕ್ತ ಪ್ರಸ್ತುತ**

ಶಿಕ್ಷಕರ ದಿನಾಚರಣೆಯಂದು ದೇಶದಾದ್ಯಂತ ವಿದ್ಯಾರ್ಥಿಗಳು ತಮ್ಮ ಶಿಕ್ಷಕರಿಗೆ ಗೌರವ ಮತ್ತು ಗೌರವವನ್ನು ಸಲ್ಲಿಸುತ್ತಾರೆ.

ಕೆಲವು ಶಾಲೆಗಳಲ್ಲಿ, ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲು ವಿಶೇಷ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿದೆ, ಇದು ನಮ್ಮ ದೇಶದ ಪ್ರಕಾಶಮಾನವಾದ ಮನಸ್ಸುಗಳಿಗೆ ಮಾರ್ಗದರ್ಶನ ಮತ್ತು ಶಿಕ್ಷಣ ನೀಡುವ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರು ವಹಿಸುವ ಪಾತ್ರವನ್ನು ನೆನಪಿಸುತ್ತದೆ.

**ಶಿಕ್ಷಕರಿಗೊಂದು ಮಾತು:-** ಪ್ರತಿಯೊಬ್ಬ ಶಿಕ್ಷಕರು ಶಿಕ್ಷಣವನ್ನೇ ತಮ್ಮ ಧರ್ಮವೆಂದು ಭಾವಿಸಿಕೊಂಡು, ಶಾಲೆಯನ್ನೇ ತಮ್ಮ ದೇವಾಲಯವನ್ನಾಗಿ ಮಾಡಿಕೊಂಡು, ಮಕ್ಕಳಲ್ಲೇ ದೇವರನ್ನು ಕಾಣಬೇಕು.

ತಮ್ಮ ಬೋಧನೆಯೇ ಪೂಜೆಯೆಂದು ಪರಿಗಣಿಸಿ, ವಿದ್ಯಾರ್ಥಿಗಳ ಸಾಧನೆಯನ್ನೇ ಪ್ರಸಾದವೆಂಬಂತೆ ಕಂಡಾಗ ದೇಶದ ಭವಿಷ್ಯ ಉಜ್ವಲವಾಗುವುದರಲ್ಲಿ ಸಂದೇಹವಿಲ್ಲ.

**ವಿದ್ಯಾರ್ಥಿಗಳಿಗೊಂದು ಕಿವಿಮಾತು:-** ಶಿಕ್ಷಕರು ಅಭ್ಯಾಸ ದೃಷ್ಟಿಯಿಂದ ಏನೇ ಮಾಡಿದರು ನಮ್ಮ ಒಳ್ಳೆಯದಕ್ಕೆ ಎಂಬುದನ್ನು ಮಕ್ಕಳು ಮೊದಲು ಅರಿತುಕೊಳ್ಳಬೇಕು. ಕನ್ನಡ ಶಿಕ್ಷಕರು ಕಾಗುಣಿತ ತಪ್ಪಾಯ್ತು ಅಂತ ನೂರು ಸಾರಿ ಬರೆಯಿರಿ ಅಕ್ಷರ ದುಂಡಾಗಿಸಿರುತ್ತಾರೆ. ಇಂಗ್ಲೀಷ್ ಶಿಕ್ಷಕರು ಹೊಟ್ಟೆಪಾಡಿಗೆ ಇಂಗ್ಲೀಷ್ ಇದ್ದರೂ ಸಹ ಮಾತೃಭಾಷೆ ಮುಖ್ಯವೆಂದು ಹೇಳಿಕೊಟ್ಟಿರುತ್ತಾರೆ.



ಗಣಿತ ಶಿಕ್ಷಕರು ಕಳೆದದ್ದಕ್ಕೆ ಕೊರಗಬೇಡ, ಗಳಿಸುವಾಗ ಮರೆಯಬೇಡ ಎಂದು ಹೇಳಿಕೊಟ್ಟಿರುತ್ತಾರೆ. ಸಮಾಜ ಶಿಕ್ಷಕರು ಇತಿಹಾಸ ಮರೆತವನು ಇತಿಹಾಸ ಸೃಷ್ಟಿಸಲಾರ ಎಂದು ಹೇಳಿಕೊಟ್ಟಿರುತ್ತಾರೆ. ವಿಜ್ಞಾನ ಶಿಕ್ಷಕರು ಮೇಲೆರಿದ್ದು ಕೇಳಗಿಳಿಯಲೇ ಬೇಕು ಎಂದು ಹೇಳಿಕೊಟ್ಟಿರುತ್ತಾರೆ. ಇನ್ನೂ ದೈಹಿಕ ಶಿಕ್ಷಕರು ತಪ್ಪು ಮಾಡಿದಾಗ ಬಸ್ಕಿ ಹೊಡೆಸಿ ದೇಹ ಗಟ್ಟಿ ಮಾಡಿರುತ್ತಾರೆ. ಇಂತಹ ಶಿಕ್ಷಕ ಬಳಗ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಏನೇ ಮಾಡಿದ್ದರೂ, ಅದರ ಹಿಂದೆ ಒಂದು ಒಳ್ಳೆಯ ಉದ್ದೇಶ ಇರುತ್ತದೆ. ವಿದ್ಯಾರ್ಥಿಗಳು ಅದನ್ನು ಅರಿತು ನಡೆಯಬೇಕು.

**ಕೊನೆಯ ಮಾತು:-** ಸಾಮಾನ್ಯ ಗಾದೆಯಂತೆ ದೇಶದ ಭವಿಷ್ಯವು ಮಕ್ಕಳ ಕೈಯಲ್ಲಿದೆ, ಶಿಕ್ಷಕರಾದವರು ಮಾರ್ಗದರ್ಶಕರಾಗಿ ಭಾರತದ ಭವಿಷ್ಯವನ್ನು ರೂಪಿಸುವ ಭವಿಷ್ಯದ ನಾಯಕರಾಗಿ ವಿದ್ಯಾರ್ಥಿಗಳನ್ನು ರೂಪಿಸಬಹುದು. ನಮ್ಮ ವೃತ್ತಿ ಮತ್ತು ವ್ಯವಹಾರಗಳಲ್ಲಿ ಯಶಸ್ವಿಯಾಗಲು ಸಹಾಯ ಮಾಡುವಲ್ಲಿ ಅವರು ನಮ್ಮ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅವರು ಉತ್ತಮ ಮನುಷ್ಯರಾಗಿ, ಸಮಾಜದ ಉತ್ತಮ ಸದಸ್ಯರಾಗಿ ಮತ್ತು ದೇಶದ ಆದರ್ಶ ನಾಗರಿಕರಾಗಲು ನಮಗೆ ಸಹಾಯ ಮಾಡುತ್ತಾರೆ. ನಮ್ಮ ಜೀವನದಲ್ಲಿ ಶಿಕ್ಷಕರು ವಹಿಸುವ ಸವಾಲುಗಳು, ಕಷ್ಟಗಳು ಮತ್ತು ವಿಶೇಷ ಪಾತ್ರಗಳನ್ನು ಒಪ್ಪಿಕೊಳ್ಳಲು ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ.

### ಉತ್ತಮ ಶಿಕ್ಷಕರಲ್ಲಿರಬೇಕಾದ ಗುಣಲಕ್ಷಣಗಳು

- ಆತ್ಮವಿಶ್ವಾಸದಿಂದ ಯಶಸ್ಸು ಸಾಧಿಸುವ ಗುಣವಿರಬೇಕು.
- ಎಲ್ಲಾ ಮೌಲ್ಯಗಳನ್ನು ಅರಿತುಕೊಂಡು ಪ್ರಾಮಾಣಿಕರಾಗಿ ಕೆಲಸ ಮಾಡುವವರಾಗಿಬೇಕು.
- ಆಳವಾದ ಅಧ್ಯಯನದ ಜೊತೆಗೆ ನಿರಂತರ ಪ್ರಯತ್ನಶೀಲನಾಗಿರಬೇಕು.
- ಆದರ್ಶ ವ್ಯಕ್ತಿತ್ವದ ಜೊತೆಗೆ ಬರವಸೆ ಮೂಡಿಸುವ ವ್ಯಕ್ತಿಯಾಗಬೇಕು.
- ಜ್ಞಾನದ ಹಂಬಲದ ಜೊತೆಗೆ ಕೌಶಲ್ಯ ಉಳ್ಳವನಾಗಿರಬೇಕು.
- ಉತ್ತಮ ಭಾಷೆ, ಪ್ರೀತಿ, ಸಹಬಾಳ್ವೆಯ ಕಲ್ಪನೆ, ಆರೋಗ್ಯಕರ ಚಿಂತನೆ ಮಾಡುವವರಾಗಿರಬೇಕು.
- ಶಿಸ್ತನ್ನು ಮೈಗೂಡಿಸಿಕೊಂಡು, ಬದಲಾವಣೆಗೆ ಸದಾ ಸಿದ್ಧರಾಗಿರಬೇಕು.
- ವ್ಯಸನ ಮುಕ್ತ ಜೀವನವಾಗಿದ್ದು, ಧನಾತ್ಮಕ ಚಿಂತನೆ ಉಳ್ಳವರಾಗಿರಬೇಕು.
- ಸಮರ್ಪಣಾ ಮನೋಭಾವದ ಜೊತೆಗೆ ಸಮಯ ಪ್ರಜ್ಞೆ ಮತ್ತು ಕರ್ತವ್ಯ ಪ್ರಜ್ಞರಾಗಿರಬೇಕು.
- ಸರಳ ಜೀವನದ ಜೊತೆಗೆ ನಿಸ್ವಾರ್ಥ ಸೇವಕರಾಗಿ ದೇಶಾಭಿಮಾನಿ ಆಗಿರಬೇಕು.

# ಶಿಕ್ಷಕರು ದಿಕ್ಸೂಚಿಯಂತೆ...


ಉದಯವಾಹಿನಿ ಚಿತ್ರ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ವಿಲಿಯಮ್ ಆರ್ಥರವರ್ಡ್ ಎಂಬ ಲೇಖಕ ಶಿಕ್ಷಕರು ಹೇಗಿರಬೇಕೆಂದು ವಿವರಿಸಿದ್ದಾರೆ.

**ಒಬ್ಬ ಸಾಮಾನ್ಯ ಶಿಕ್ಷಕ ಪಾಠ ಹೇಳಿಕೊಡುತ್ತಾನೆ,**
**ಒಬ್ಬ ಒಳ್ಳೆಯ ಶಿಕ್ಷಕ ವಿವರಿಸುತ್ತಾನೆ.**
**ಒಬ್ಬ ಉತ್ತಮ ಶಿಕ್ಷಕ ಪ್ರದರ್ಶಿಸುತ್ತಾನೆ.**
**ಒಬ್ಬ ಅದ್ಭುತ ಶಿಕ್ಷಕ ಉತ್ಸಾಹ ತುಂಬುತ್ತಾನೆ.**

ಪ್ರಮುಖ ಶಿಕ್ಷಣ ತಜ್ಞರು ಶಿಕ್ಷಕರು ಹೇಗಿರಬೇಕೆಂದು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ವಿವರಿಸಿದ ಕೆಲವು ಪ್ರಮುಖ ಅಭಿಪ್ರಾಯಗಳನ್ನು ವಿಶ್ಲೇಷಿಸಿ ಇಲ್ಲಿ ತಿಳಿಸಲಾಗಿದೆ.

ಪ್ರೀತಿ.. ಪ್ರೀತಿ.. ಪ್ರೀತಿ.. : ಶಿಕ್ಷಕರು ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಮಕ್ಕಳಂತೆ ಪ್ರೀತಿಯಿಂದ ನೋಡಿಕೊಳ್ಳಬೇಕು. ಮಾತಾಪಿತೃಗಳಿಗಿಂತಲೂ ಶಿಕ್ಷಕರು ಹೆಚ್ಚು ಎಂಬ ಭಾವನೆ ಮಕ್ಕಳಲ್ಲಿ ಮೂಡಿಸುವಂತಿರಬೇಕು. ಹಾಗೆ ಪ್ರೀತಿಸಿ ಅವರ ಕೈಯಲ್ಲಿ ಅದ್ಭುತಗಳನ್ನು ಮಾಡಿಸಿದ ಶಿಕ್ಷಕರು ಅಂದಿನಿಂದ ಇಂದಿನವರೆಗೂ ಇದ್ದಾರೆ. ಹೊಡೆಯುವುದು, ಶಿಕ್ಷಿಸುವುದಕ್ಕಿಂತ ಪ್ರೀತಿಯಿಂದ ಅವರನ್ನು ತಿದ್ದಬಹುದು.

**ಪಾಠ ಕಥೆಯಂತೆ ಹೇಳಬೇಕು:** ಪಾಠವನ್ನು ಪಾಠದಂತೆ ಹೇಳಿಕೊಡುವವರು ಸಾಧಾರಣ ಶಿಕ್ಷಕರಾಗಿ ಉಳಿದು ಬಿಡುತ್ತಾರೆ. ಪಾಠಕ್ಕೆ ಮೊದಲು ಕೆಲವು ಉದಾಹರಣೆಗಳು, ಒಂದು ಘಟನೆ, ಸಂದರ್ಭಕ್ಕೆ ತಕ್ಕಂತೆ ಒಂದು ಚಿಕ್ಕ ಕಥೆ ಹೇಳಿ ಪಾಠ ಬೋಧಿಸಬೇಕು. ಕಥೆ ಹೇಳದಿದ್ದರೂ ಆಸಕ್ತಿ ಮೂಡಿಸುವಂತಹ ವಿಚಾರಗಳ ಮೂಲಕ ಪಾಠ ಹೇಳಿಕೊಡಬೇಕು. ಅಂತಹ ಶಿಕ್ಷಕರು ಯಾವಾಗಲೂ ಮಕ್ಕಳ ನೆನಪಿನಲ್ಲಿ ಉಳಿಯುತ್ತಾರೆ.

**ವಿದ್ಯಾರ್ಥಿಗಳೆಲ್ಲರೂ ಒಂದೇ:** ಶಾಲೆಯಲ್ಲಿ ಶಿಕ್ಷಕರಿಗೆ ಎಲ್ಲಾ ವಿದ್ಯಾರ್ಥಿಗಳೂ ಒಂದೇ. ತನ್ನವರು, ಬೇರೆಯವರು, ಬುದ್ಧಿವಂತರು, ದಡ್ಡರು ಎಂದು ಮುದ್ರೆಹಾಕಬಾರದು. ಮೇಲ್ಜಾತಿ, ಕೀಳುಜಾತಿ ಎಂಬ ಬೇಧಭಾವ, ನಮ್ಮ ಜಾತಿ ಎಂಬ ಪ್ರತ್ಯೇಕ ಅಭಿಮಾನ ಕೂಡದು. **ಸೀನಿಯರ್ಸ್-ಜೂನಿಯರ್ಸ್:** ಯಾವುದೇ ಉದ್ಯೋಗದಲ್ಲಿ ಅನುಭವಸ್ಥರಿಗೆ ಹೆಚ್ಚು ವಿಷಯ ತಿಳಿದಿರುತ್ತದೆ. ಆ ಸತ್ಯವನ್ನು ಎಲ್ಲರೂ ಅರಿತುಕೊಳ್ಳಬೇಕು. ಮುಖ್ಯವಾಗಿ ಬೋಧನೆಯ ವಿಷಯದಲ್ಲಿ, ಶಿಕ್ಷಕರು ಓದಿದ ಪುಸ್ತಕಗಳು ಎಲ್ಲವೂ ಒಂದೇ, ಆದರೆ ಅನುಭವಗಳು ಭಿನ್ನವಾಗಿರುತ್ತವೆ. ಆದ್ದರಿಂದ ಕಿರಿಯ ಶಿಕ್ಷಕರು ತಮ್ಮ ಸೀನಿಯರ್ಸ್‌ನ್ನು ಯಾವಾಗಲೂ ಗೌರವಿಸಬೇಕು. ಅವರಿಂದ ಸಲಹೆ ಪಡೆಯಬೇಕು.**ನಿತ್ಯ ವಿದ್ಯಾರ್ಥಿ:** ಶಿಕ್ಷಕರು ದಿನವೂ ವಿದ್ಯಾರ್ಥಿ ಗಳೇ, ದಿನವೂ ಹೇಳಿಕೊಡುವ ಪಾಠಗಳೇ ಆದರೂ, ವಿದ್ಯಾರ್ಥಿಗಳ ವೈಖರಿಯನ್ನು ಆಧರಿಸಿ ದಿನಕ್ಕೊಂದು ಹೊಸ ವಿಧಾನದಲ್ಲಿ ಬೋಧಿಸಬೇಕು. ರೋಮ್ ಸಾಮ್ರಾಜ್ಯ ಪತನದ ಪಾಠ ಹತ್ತುವರ್ಷದ ಹಿಂದೆ ಏನು ಹೇಳಿದರೋ ಈಗಲೂ ಅದೇ ಇದೆ. ಆದರೆ ಪ್ರಸ್ತುತ ಪರಿಸ್ಥಿತಿಗೆ ಹೋಲಿಸಿ ಬೋಧನಾ ವಿಧಾನ ಬದಲಾಯಿಸಿ ಹೇಳಿದರೆ ಚೆನ್ನಾಗಿ ಅರ್ಥವಾಗುತ್ತದೆ. **ಪ್ರಾಮಾಣಿಕತೆ:** ಈ ದೇಶದಲ್ಲಿ ಯಾರಿಗೆ ಪ್ರಾಮಾಣಿಕತೆ ಇದ್ದರೂ, ಇಲ್ಲದಿದ್ದರೂ ಶಿಕ್ಷಕರಿಗೆ ಮುಖ್ಯವಾಗಿ ಇರಬೇಕು ಎಂಬುದು ಪ್ರಮುಖರ ಅಭಿಪ್ರಾಯ.

ಏಕೆಂದರೆ ಅವರು ಪ್ರತಿ ವರ್ಷ ನೂರಾರು ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಾರೆ. ಅವರು ಹೇಳಿಕೊಟ್ಟದ್ದನ್ನು ಆಚರಿಸುತ್ತ ಜೀವನಕ್ಕೆ ಅಗತ್ಯ ವಿಚಾರಗಳನ್ನು ಕಲಿಸಿದರೆ, ಆ ಸೇವೆ ಸಮಾಜಕ್ಕೆ ಒಳಿತುಂಟುಮಾಡುತ್ತದೆ. ದೇಶ ಅಭಿವೃದ್ಧಿಯಾಗುತ್ತದೆ.

**ಅರ್ಪಣಾ ಮನೋಭಾವ:** ಶಿಕ್ಷಕರು ತಮ್ಮ ವೃತ್ತಿಯನ್ನು ದೇವರ ಸೇವೆ ಎಂದು ಭಾವಿಸಬೇಕು. ದೇವರ ಮೇಲೆ ಭಕ್ತಿಯುಳ್ಳವರು ತಮ್ಮ ಧರ್ಮಾನುಸಾರ ಪೂಜೆಪುನಸ್ಕಾರಗಳನ್ನು ಎಷ್ಟು ಶ್ರದ್ಧೆಯಿಂದ ಮಾಡುವರೋ, ಶಿಕ್ಷಕರು ತಮ್ಮ ವೃತ್ತಿಯಲ್ಲಿ ಅಷ್ಟು ಶ್ರದ್ಧೆಯಿಂದ ತೊಡಗಿಸಿಕೊಂಡರೆ ಅವರು ಭಗವಂತನ ಸ್ವರೂಪಿಗಳೇ, ಶ್ರದ್ಧೆಭಕ್ತಿಯಿಂದ ಮಾಡಿದ ಯಾವುದೇ ಕೆಲಸದಲ್ಲಿ ತಪ್ಪುಗಳು ಸಂಭವಿಸುವುದಿಲ್ಲ.

**ದುಶ್ಚಟಗಳಿಂದ ದೂರವಿರಿ:** ಶಿಕ್ಷಕ ವೃತ್ತಿಯಲ್ಲಿರುವವರು ಕೆಟ್ಟ ಚಟಗಳಿಂದ ದೂರವಿರಬೇಕು. ಅವರನ್ನು ಕಂಡು ಮಕ್ಕಳು ಕೂಡ ಕೆಟ್ಟ ಅಭ್ಯಾಸಕ್ಕೆ ಕೈಹಾಕುತ್ತಾರೆ. ಮುಖ್ಯವಾಗಿ ಜೂಜು, ಧೂಮಪಾನ, ಕುಡಿತಗಳು ಶತೃಗಳಂತೆ ಎಂದು ಭಾವಿಸಬೇಕು. ಇದು ಆರೋಗ್ಯದ ಜೊತೆಗೆ ಶಿಕ್ಷಕ ವೃತ್ತಿಗೆ ಕಳಂಕ ತರುವಂತಹ ದುಶ್ಚಟಗಳು.

**ಅಂಗವಿಕಲರಿಗೆ ಸಹಾನುಭೂತಿ:** ಇದು ಮುಖ್ಯವಾದ ಅಂಶ ಎಂಬುದನ್ನು ಶಿಕ್ಷಕರು ಅರಿತುಕೊಳ್ಳಬೇಕು. ದುರದೃಷ್ಟವಶಾತ್ ಅಂಗವೈಕಲ್ಯಕ್ಕೆ ತುತ್ತಾದವರಿಗೆ, ಇತರ ಆರೋಗ್ಯ ಸಮಸ್ಯೆ, ತೊದಲು ಸಮಸ್ಯೆ ಇರುವವರಿಗೆ ಶಿಕ್ಷಕರು ಸಹಾನುಭೂತಿ ತೋರಿಸಬೇಕು. ಸಹ ವಿದ್ಯಾರ್ಥಿಗಳು ಅವರನ್ನು ಅವಹೇಳನ ಮಾಡದಂತೆ ಎಚ್ಚರಿಕೆ ನೀಡಬೇಕು. ದೇಹಕ್ಕೆ ಅಂಗವಿಕಲತೆಯೇ ಹೊರತು ಅವರ ಮನಸ್ಸಿಗಲ್ಲ ಎಂದು ಇತರ ವಿದ್ಯಾರ್ಥಿಗಳಿಗೆ ಹೇಳಬೇಕು. ಪ್ರೀತಿ, ಪ್ರೇಮ: ಪ್ರಾಯದಲ್ಲಿರುವ ಶಿಕ್ಷಕಿ/ಶಿಕ್ಷಕರು, ಕೆಲವೊಂದು ಸಂದರ್ಭಗಳಲ್ಲಿ ನಿಯಮಗಳನ್ನು ಮರೆತು ಪ್ರೀತಿಯಸೆಲೆಗೆ ಒಳಗಾಗಬಹುದು. ಇಂತಹವರು ಕೇವಲ ಶೇಕಡಾ ಐದರಷ್ಟಿರಬಹುದು. ಅದು ಕೂಡ ಇರಕೂಡದು. ಮುಂದೆ ಮದುವೆ ಮಾಡಿಕೊಳ್ಳಬೇಕೆಂದುಕೊಳ್ಳುವವರು ಕೂಡ ಶಾಲೆಯ ಹೊರಗೆ ಅಂತಹ ನಿರ್ಧಾರಗಳನ್ನು ತೆಗೆದುಕೊಳ್ಳಬೇಕೇ ಹೊರತು ವಿದ್ಯಾರ್ಥಿಗಳ ಮುಂದೆ ಕೀಳಾಗಿ ವರ್ತಿಸಬಾರದು.

**ನಿಧಿಯ ಸದ್ವಿನಿಯೋಗ:** ಕೆಲವು ಸಂದರ್ಭಗಳಲ್ಲಿ ಶಾಲಾಕಟ್ಟಡ ಕಟ್ಟಲು ಹಣ, ಹೊಸ ತರಗತಿಗಳ ನಿರ್ಮಾಣಕ್ಕೆ ಸರ್ಕಾರ ನಿಧಿ ಬಿಡುಗಡೆ ಮಾಡದಿರಬಹುದು. ಅಂತಹ ಸಂದರ್ಭದಲ್ಲಿ ಶಿಕ್ಷಕರು ಗ್ರಾಮದಲ್ಲಿ ಹಣ ಸಂಗ್ರಹ ಮಾಡಬೇಕಾಗಬಹುದು. ಅದರ ವಿವರಗಳನ್ನು ಎಲ್ಲರಿಗೆ ವಿವರಿಸಿ, ಸಕ್ರಮವಾಗಿ ನಿಧಿ ಉಪಯೋಗಿಸಿಕೊಂಡು, ಅಗತ್ಯ ಬಿದ್ದರೆ ತಮ್ಮ ಕೈಯಿಂದ ಸ್ವಲ್ಪ ಹಣ ಹಾಕಿ ಕೆಲಸ ಪೂರ್ಣವಾಗುವಂತೆ ನೋಡಿಕೊಂಡರೆ, ಭವಿಷ್ಯತ್ತಿನಲ್ಲಿ ವಿದ್ಯಾರ್ಥಿಗಳು ಕೂಡ ಪ್ರಾಮಾಣಿಕವಾಗಿ ಇರುತ್ತಾರೆ. ಹಣದ ದುರುಪಯೋಗಪಡಿಸಿ ಕೊಳ್ಳುವುದಿಲ್ಲ.

**ಮನೆಯ ಸಮಸ್ಯೆ ಮನೆಗೇ:** ಕೆಲವೊಮ್ಮೆ ಕೌಟುಂಬಿಕ ಸಮಸ್ಯೆಗಳ ಕಾರಣದಿಂದ ಕೆಲವು ಶಿಕ್ಷಕರು ತಮ್ಮ ಕೋಪವನ್ನು ಶಾಲೆಯಲ್ಲಿ ವಿದ್ಯಾರ್ಥಿಗಳ ಮೇಲೆ ತೋರಿಸುತ್ತಾರೆ. ಇದು ಒಂದು ರೀತಿಯ ರಕ್ಷಣಾ ತಂತ್ರ. ಇಂತಹ ಅಭ್ಯಾಸವಿದ್ದರೆ ಶಿಕ್ಷಕರಿಗೆ ಎಂದಿಗೂ ಸಮಸ್ಯೆಯೇ.

# ಡಾ:ಸರ್ವಪಲ್ಲಿ ರಾಧಾಕೃಷ್ಣನ್ ರವರ 136ನೇ ವರ್ಷದ ಜನ್ಮ ದಿನಾಚರಣೆ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

• ಉದಯವಾಹಿನಿ, ವಿಶೇಷ

ಡಾ:ಎಸ್. ರಾಧಾಕೃಷ್ಣನ್ ರವರು 1888 ಸೆಪ್ಟಂಬರ್ 5 ರಂದು ಚಿತ್ತೂರು ಜಿಲ್ಲೆಯ ತಿರುತ್ತನಿ ಎಂಬ ಪುಣ್ಯಕ್ಷೇತ್ರದಲ್ಲಿ ಜನಿಸಿದರು. ತಂದೆ ವೀರಸ್ವಾಮಯ್ಯ ತಾಯಿ ಸೀತಮ್ಮ.



ಬಾಲ್ಯದಿಂದಲೂ ರಾಧಾಕೃಷ್ಣನ್ ಅವರಿಗೆ ತತ್ವಶಾಸ್ತ್ರ,ಆಧ್ಯಾತ್ಮ ಇವುಗಳಲ್ಲಿ ಹೆಚ್ಚಿನ ಆಸಕ್ತಿ. ಗ್ರಂಥಗಳೇ ಅವರ ಬಾಲ್ಯ, ಯವ್ವನದ ಒಡನಾಡಿಗಳು. ಉತ್ತಮ ಸಂಸ್ಕಾರ ಜೊತೆಗೆ ಗುಣಮಟ್ಟದ ಶಿಕ್ಷಣ ದೊರೆತು ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಹಾಗೂ ಡಾಕ್ಟರೇಟ್ ಪದವಿ ಗಳಿಸಿದರು. ನಂತರ ಹಲವು ಕಾಲೇಜುಗಳಲ್ಲಿ ಪ್ರಾಧ್ಯಾಪಕರು ಹಾಗೂ ವಿಶ್ವವಿದ್ಯಾಲಯ ಕುಲಪತಿಗಳು ಸಹ ಆಗಿದ್ದರು.ಡಾ:ಎಸ್.ರಾಧಾಕೃಷ್ಣನ್ ಅವರ ಅಸಾಧಾರಣ ಪ್ರತಿಭಾವಂತ ವೃತ್ತಿಜೀವನ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಾರಂಭವಾಗಿ ಜಗತ್ಪ್ರಸಿದ್ಧ ಆಕ್ಸ್ಫರ್ಡ್ ವಿಶ್ವವಿದ್ಯಾಲಯದ ವರೆಗೂ ಕೊಂಡೊಯ್ಯಿತು. ಯುನೆಸ್ಕೋವಿನಿಂದ ಮಾಸ್ಕೋವಿನ ರಾಯಭಾರಿ ಕಚೇರಿ ವರೆಗೂ ವಿಸ್ತರಿಸಿತು. ಹಾಗೆಯೇ ಆಂಧ್ರಪ್ರದೇಶದ ವಿಶ್ವವಿದ್ಯಾಲಯದ ಉಪಕುಲಪತಿ ಸ್ಥಾನದಿಂದ ಭಾರತದ ಮೊದಲನೆಯ ಉಪರಾಷ್ಟ್ರಪತಿ ಮತ್ತು ಎರಡನೆಯ ರಾಷ್ಟ್ರಪತಿ ಸ್ಥಾನದವರೆಗೂ ಅನೇಕ ಉನ್ನತ ಹುದ್ದೆಗಳನ್ನು ಅಲಂಕರಿಸಿದರು. ಮೇರು ವ್ಯಕ್ತಿತ್ವ ಡಾ:ಎಸ್. ರಾಧಾಕೃಷ್ಣನ್ ಅವರದು. ಡಾ:ಎಸ್. ರಾಧಾಕೃಷ್ಣನ್ ಅವರು ಜಗತ್ಪ್ರಸಿದ್ಧ ತತ್ವಜ್ಞಾನಿ, ಘನ ವಿದ್ವಾಂಸ,ಶ್ರೇಷ್ಠ ಲೇಖಕ,ಅನನ್ಯ ವಾಗ್ಮಿ, ಅದ್ಭುತ ಭಾಷಣಕಾರರು, ಮಹಾಮಾನವತಾವಾದಿ ಮಿಗಿಲಾಗಿ ಸನಾತನ ಹಿಂದೂ ಧರ್ಮದ ವಕ್ತಾರ ಎಂದು ಭಾರತದ ಇತಿಹಾಸದಲ್ಲಿ ಪ್ರಖ್ಯಾತರಾಗಿದ್ದಾರೆ. ಹಿರಿಯರಿಂದ ಕಿರಿಯರಿಗೆ ಬರಬಹುದಾದ ಹುಟ್ಟಿನ ಹಿರಿಮೆಯನ್ನಾಗಲೀ, ಸಂಪತ್ತಿನ ಸೊಬಗನ್ನು ಆಗಲೀ ನಾನು ನನ್ನ ಎಳೆತನದಲ್ಲಿ ಕಾಣಲಿಲ್ಲ. ನಾನು ನಾನಾಗಿಯೇ ಬಾಳಿದೆ,ನಾನಾಗಿಯೇ ಬೆಳೆದೆ,ದೇವರ ದಯೆಯಿಂದ ಮಾತ್ರ ಬೆಳಕು ಕಂಡೆ ಎಂದು ರಾಧಾಕೃಷ್ಣನ್ ಅವರು ತಮ್ಮ ಬದುಕಿನ ರೀತಿಯನ್ನು ತಾವೇ ಬಣ್ಣಿಸಿಕೊಂಡಿದ್ದಾರೆ. ಡಾ:ಎಸ್. ರಾಧಾಕೃಷ್ಣನ್ ಅವರು ಶ್ರೇಷ್ಠ ಲೇಖಕರಾಗಿ ಭಾರತೀಯ ತತ್ವಜ್ಞಾನ ಎಂಬ ಹೆಸರಿನಲ್ಲಿ ಎರಡು ಸಂಪುಟಗಳನ್ನು ರಚಿಸಿದ್ದಾರೆ. ಉಪನಿಷತ್ತಿನ ತತ್ವಜ್ಞಾನ, ಆದರ್ಶವಾದಿಯ ಜೀವನದೃಷ್ಟಿ, ಪೌರಸ್ತ್ಯ ಧರ್ಮಗಳು ಮತ್ತು ಪಾಶ್ಚಾತ್ಯ ಆಲೋಚನೆ ಬದಲಾಗುತ್ತಿರುವ ವಿಶ್ವದಲ್ಲಿ ಮತಧರ್ಮ ಮೊದಲಾದವು ಅವರ ಪ್ರಮುಖ ಕೃತಿಗಳಾಗಿವೆ. 1954ರಲ್ಲಿ ಭಾರತ ರತ್ನ ಪ್ರಶಸ್ತಿ ಯನ್ನು ಪ್ರಥಮವಾಗಿ ಸ್ವೀಕರಿಸಿದ ಸಿ.ರಾಜಗೋಪಾಲಾಚಾರಿ ರವರ ನಂತರ ಎರಡನೆಯವರಾದ ಡಾ: ಎಸ್. ರಾಧಾಕೃಷ್ಣನ್ ರವರಿಗೆ 1954 ರಲ್ಲಿ ಭಾರತ ಸರ್ಕಾರಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು . ಹಾಗೂ ದೇಶ-ವಿದೇಶಗಳಿಂದ ಹಲವಾರು ಪ್ರಶಸ್ತಿಗಳೂ ಕೂಡ ಸಂದಿವೆ.

ತತ್ವಜ್ಞಾನಿ,ಆದರ್ಶ ಶಿಕ್ಷಕರೂ ಆಗಿದ್ದ ರಾಧಾಕೃಷ್ಣನ್ ಅವರ ಜನ್ಮದಿನವಾದ ಸೆಪ್ಟಂಬರ್ 5 ರಂದು ಶಿಕ್ಷಕರ ದಿನವೆಂದು ಪ್ರತಿವರ್ಷ ರಾಷ್ಟ್ರೀಯ ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಡಾ:ಎಸ್. ರಾಧಾಕೃಷ್ಣನ್ ಅವರು 1975 ಏಪ್ರಿಲ್ 17 ರಂದು ತಮ್ಮ 87ನೇ ವಯಸ್ಸಿನಲ್ಲಿ ನಿಧನರಾದರು. ಇಡೀ ಭಾರತ ಅವರ ಸಾವಿಗಾಗಿ ಸಂತಾಪ ಸೂಚಿಸಿತು.

ವಿಶ್ವದ ಅನೇಕ ರಾಷ್ಟ್ರಗಳ ನಾಯಕರುಗಳೂ ಸಹ ಮಹಾನ್ ತತ್ವಜ್ಞಾನಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಅವರ 136 ನೇ ವರ್ಷದ ಜನ್ಮದಿನಾಚರಣೆಯ ಸಂಬಂಧ ಇಂತಹ ಮಹಾನ್ ತತ್ವಜ್ಞಾನಿ ಹಾಗೂ ಮಾನವತಾವಾದಿಯವರನ್ನು ಸ್ಮರಿಸಿ, ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲೆಂದು ಭಾರತೀಯರಾದ ನಾವೆಲ್ಲರೂ ಆ ಭಗವಂತನಲ್ಲಿ ಪ್ರಾರ್ಥಿಸೋಣ.

# ಶಿಕ್ಷಕರ ದಿನಾಚರಣೆ ಸಂಭ್ರಮ



ವಿ.ಎಂ.ಎಸ್.ಗೋಪಿ
• ಉದಯವಾಹಿನಿ, ವಿಶೇಷ

ಸೆ 5 ರಂದು ಶಿಕ್ಷಕರ ದಿನಾಚರಣೆ ಎಲ್ಲಾ ಶಾಲೆ ಕಾಲೇಜುಗಳಲ್ಲಿ ಶಿಕ್ಷಕರ ದಿನಾಚರಣೆ ಆಚರಿಸುತ್ತಾರೆ. ದೇಶ ಕಂಡ ಶ್ರೇಷ್ಠ ಶಿಕ್ಷಕ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನದ ಅಂಗವಾಗಿ ಶಿಕ್ಷಕರ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತದೆ. ನಮಗೆ ವಿದ್ಯಾ ಕಲಿಸಿದ ಶಿಕ್ಷಕರು ಮತ್ತು ಕೆಲಸ ಹೇಳಿ ಕಲಿಸಿಕೊಟ್ಟ ಗುರುಗಳಿಗೆ ಪ್ರೀತಿಯ ನಮನಗಳು.

**ಗುರುಬ್ರಹ್ಮ ಗುರುವಿಷ್ಣ**
**ಗುರುದೇವೋ ಮಹೇಶ್ವರ**
**ಗುರುಸಾಕ್ಷಾತ್ ಪರಬ್ರಹ್ಮ**
**ತಸ್ಮೈಶ್ರೀ ಗುರುವೇ ನಮಃ**

ಈ ಸಾಲುಗಳೇ ಗುರುವಿನ ಮಹತ್ವವನ್ನು ಸಂಪೂರ್ಣವಾಗಿ ತಿಳಿಸಿಬಿಡುತ್ತವೆ. ಎಲ್ಲಾ ಮಕ್ಕಳಿಗೂ ತಾಯಿ ತಂದೆಯೇ ಮೊದಲ ಗುರು. ಮನೆಯ ಮೊದಲ ಪಾಠ ಶಾಲೆ ತನ್ನ ಮಕ್ಕಳಿಗೆ ಮೊದಲನೆಯ ಶಿಕ್ಷಕಿ ತಾಯಿ. ಇಲ್ಲಿ ಗುರುವೇ ಎಲ್ಲವೂ ಮತ್ತು ಅವರಿಂದಲೇ ಎಲ್ಲವೂ ಅನ್ನುವುದು ಸ್ಪಷ್ಟವಾಗುತ್ತದೆ. ಗುರುವಿನ ಸ್ಥಾನ ತುಂಬಾ ಪವಿತ್ರವಾದದ್ದು, ಜವಬ್ದಾರಿಯುತವಾದದ್ದು. ಈ ಸಮಾಜಕ್ಕೆ ಉತ್ತಮ ನಾಗರಿಕರನ್ನು ಕೊಡುವ ಸೃಷ್ಟಿಕರ್ತರು ಗುರು.



ಉದಯವಾಹಿನಿ ಚಿತ್ರ

ಮನುಷ್ಯನಾದ ಮೇಲೆ ತನ್ನ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂದುಕೊಂಡಿರುತ್ತಾರೆ. ಗುರಿ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದವರು ಗುರು. ' ಮುಂದೆ ಗುರಿ ಇರಬೇಕು ಹಿಂದೆ ಗುರು ಇರಬೇಕು' ಅನ್ನೋ ಗಾದೆ ಮಾತು ತುಂಬಾ ಅರ್ಥಪೂರ್ಣವಾಗಿದೆ. ವಿದ್ಯಾರ್ಥಿಗಳು ತಮ್ಮ ಗುರಿಯನ್ನು.. ತಲುಪಬೇಕೆಂದರೆ ಗುರುವಿನ ಸಲಹೆ, ಸಹಕಾರ ಮತ್ತು ಮಾರ್ಗದರ್ಶನ ಇರಲೇಬೇಕು. ಗುರುಗಳ ಸಹಾಯದಿಂದ ಮಾತ್ರ ನಾವು ಅಂದುಕೊಂಡ ಗುರಿ ತಲುಪಬಹುದು. ಗುರುವೇಂದರೆ ಕೇವಲ ಶಿಕ್ಷಕರಲ್ಲ ಜೀವನದಲ್ಲಿ ಸರಿಯಾದದಾರಿ ತೋರುವ ಪ್ರತಿಯೊಬ್ಬರೂ ಗುರುಗಳೇ. ನನ್ನನ್ನು ಜೀವನದಲ್ಲಿ ಉತ್ತಮ ವ್ಯಕ್ತಿಯನಾಗಿ ರೂಪಿಸಲು ನೀವು ಮಾಡಿದ ಎಲ್ಲಾ ಪ್ರಯತ್ನಗಳಿಗೆ ನಾನು ನಿಮಗೆ ಧನ್ಯವಾದ ಅರ್ಪಿಸುತ್ತೇನೆ ನನ್ನ ಎಲ್ಲಾ ಶಿಕ್ಷಕರಿಗೆ ಶಿಕ್ಷಕರ ದಿನಾಚರಣೆಯ ಶುಭಾಶಯಗಳು.

# ಇದು ಖಾನಾಪುರ ಗ್ರಾಮದ ಸರ್ಕಾರಿ ಶಾಲೆ ದುಸ್ಥಿತಿ

## ಆತಂಕದಲ್ಲಿ ಪಾಠ ಆಲಿಸುವ ಮಕ್ಕಳು ಶಿಥಿಲಗೊಂಡ ಕಟ್ಟಡದಲ್ಲಿ ವಿದ್ಯಾರ್ಜನೆ, ಕಾಂಪೌಂಡ್ ಇಲ್ಲದೆ ಬಿಡಾಡಿ ದನಗಳು ನುಗ್ಗುತ್ತವೆ

• ಇಲ್ಯಾಸ್ ಪಟೇಲ್. ಬಳಗಾನೂರ

• ಉದಯವಾಹಿನಿ, ಬಿಜಾಪುರ್

ಸೋರುವ ಶಾಲೆ ಕೋಣೆಗಳು... ಎಲ್ಲೆಡೆ ಮಳೆ ನೀರು ಸಂಗ್ರಹ.. ಕಿತ್ತು ಬೀಳುತ್ತಿರುವ ಮೆಲ್ಛಾವಣೆ ಪದರು.. ಆತಂಕದಲ್ಲಿಯೇ ವಿದ್ಯಾಭ್ಯಾಸ ಮಾಡುವ ಮಕ್ಕಳು. ಇಷ್ಟಾದರೂ ಕ್ಯಾರೆ ಎನ್ನದ ಅಧಿಕಾರಿಗಳು....!

ಇದು ಸಿಂದಗಿ ತಾಲ್ಲೂಕಿನ ಖಾನಾಪುರ ಗ್ರಾಮದ ಹೊಸ ಬಡಾವಣೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ದುಃಸ್ಥಿತಿ. ಇಲ್ಲಿ 1ನೇ ತರಗತಿಯಿಂದ 5ನೇ ತರಗತಿವರೆಗೆ 40 ವಿದ್ಯಾರ್ಥಿನಿಯರು ಸೇರಿ 80ಕ್ಕೂ ಹೆಚ್ಚು ಮಕ್ಕಳು ವಿದ್ಯಾರ್ಜನೆ ಮಾಡುತ್ತಿದ್ದಾರೆ.

ಆದರೆ ಶಾಲೆಯ ಕಟ್ಟಡ ಸಂಪೂರ್ಣ ಶಿಥಿಲಗೊಂಡಿದ್ದು, ಮಕ್ಕಳು ಆತಂಕದಲ್ಲಿಯೇ ಪಾಠ ಕೇಳುವ ಸ್ಥಿತಿ ನಿರ್ಮಾಣವಾಗಿದೆ.

**ಇರುವುದೇ ಎರಡು ಕೋಣೆ:** ಇಷ್ಟು ಮಕ್ಕಳಿಗೆ ಇರುವುದು ಕೇವಲ ಎರಡು ಕೋಣೆಗಳು. ಇದರಲ್ಲೇ ಶಿಕ್ಷಕರು ಕುಳಿತುಕೊಳ್ಳುವ ಅನಿವಾರ್ಯವಿದೆ. ಈ ಕೋಣೆಗಳ ಛಾವಣಿ ಉದುರುತ್ತಿದೆ. ಯಾವುದೇ ಸ್ಥಿತಿಯಲ್ಲೂ ಛಾವಣಿ ಬೀಳಬಹುದು ಎಂಬ ಆತಂಕ ಶಿಕ್ಷಕರನ್ನು ಕಾಡುತ್ತಿದೆ. ಏನಾದರೂ ಅನಾಹುತ ಸಂಭವಿಸಿದರೆ ಎಂಬ ಭಯದಲ್ಲೇ ನಿತ್ಯ ಪಾಠ ನಡೆಯುತ್ತಿದೆ. ಮಳೆ ಬಂದರೆ ಶಾಲೆ ಕೋಣೆಗಳು ಸೋರುವುದಲ್ಲದೆ ಅಂಗಳದಲ್ಲೂ ನೀರು ನಿಲ್ಲುತ್ತವೆ.


ಉದಯವಾಹಿನಿ ಚಿತ್ರ

> ಖಾನಾಪೂರ ಹೊಸ ಬಡಾವಣೆ ಸಕಾ೯ರಿ ಕಿರಿಯ ಪ್ರಾಥಮಿಕ ಶಾಲೆ ಕೊಠಡಿಗಳ ದುರಸ್ತಿಗೆ ಕ್ರಿಯಾ ಯೋಜನೆ ತಯಾರಿಸಿ, ಡಿಡಿಪಿಐ ಹಾಗೂ ಜಿಪಂ, ತಾಪಂ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ. ಶೀಘ್ರವೇ ಶಾಲೆಯ ದುರಸ್ತಿಗೊಳಿಸಲಾಗುವುದು.
>
> -ಆರೀಫ್ ಬಿರಾದಾರ
> ಬಿಇಒ ಸಿಂದಗಿ

**ಅಡುಗೆ ಕೋಣೆಯೂ ಬಿರುಕು:** ಇನ್ನು ಶಾಲೆಯಲ್ಲಿ ಇರುವ ಒಂದು ಅಡುಗೆ ಕೋಣೆಯ ಗೋಡೆಗಳೂ ಬಿರುಕು ಬಿಟ್ಟಿವೆ. ಈ ಕೋಣೆಯಲ್ಲಿ ಹೆಗ್ಗಣಗಳು ಓಡಾಡುತ್ತವೆ. ಇದರಿಂದ ಸ್ವಚ್ಛತೆ ಕಾಪಾಡುವುದು ಕಷ್ಟವಾಗಿ ಅಡುಗೆ ಧಾನ್ಯಗಳನ್ನು ವಿನಂತಿ ಮೇರೆಗೆ ಹತ್ತಿರದಲ್ಲೇ ಮತ್ತೊಬ್ಬರ ಕೋಣೆಯಲ್ಲಿ ಇಡಲಾಗಿದೆ.

**ಬಯಲು ಶೌಚವೇ ಗತಿ:** ಶಾಲೆಯಲ್ಲಿ ಪುರುಷರ ಶೌ



ಚಾಲಯವೇ ಇಲ್ಲ. ಗಂಡು ಮಕ್ಕಳಿಗೆ ಬಯಲೇ ಗತಿ ಎನ್ನುವ ಸ್ಥಿತಿ ಇದೆ. ಮಹಿಳೆಯರ ಶೌಚಾಲಯವಿದ್ದರೂ ಅದಕ್ಕೆ ಕಾಂಪೌಂಡ್ ಇಲ್ಲ. ಶಾಲೆಗೂ ಕಾಂಪೌಂಡ್ ಇಲ್ಲದೆ ಬಿಡಾಡಿ ದನಗಳು ನುಗ್ಗುತ್ತವೆ. ಸೂಕ್ತ ಸುರಕ್ಷತೆ ಇಲ್ಲದಿರುವುದರಿಂದ ಹಾಗೂ ಶಾಲೆ ಗ್ರಾಮದ ಹೊರ ಭಾಗದಲ್ಲಿ ಇರುವುದರಿಂದ ಅನೈತಿಕ ಚಟುವಟಿಕೆಗಳ ತಾಣವೂ ಆಗಿದೆ. ಈ ಹಿಂದೆ ಶಾಲೆಯಲ್ಲಿ ಕಳ್ಳತನ ನಡೆದ ಉದಾಹರಣೆಗಳೂ ಇವೆ.

**ಮನವಿಗೂ ಬೆಲೆಯಿಲ್ಲ:** ಈ ವಿಷಯವಾಗಿ ಗ್ರಾಮ ಪಂಚಾಯಿತಿ, ಬಿಇಒ ಕಚೇರಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದ್ದರೂ ಪ್ರಯೋಜನವಾಗಿಲ್ಲ. ಇದೇ ಶಾಲೆ ಹೆಸರಿನಲ್ಲಿ ಊರಲ್ಲಿನ ಬೇರೆ ಶಾಲೆಯಲ್ಲಿ ದುರಸ್ತಿ ಕಾರ್ಯಗಳು ನಡೆದಿವೆ ಎಂಬ ದೂರುಗಳೂ ಕೇಳಿಬಂದಿವೆ. ರಾಜಕೀಯ ಪಿತೂರಿಯಿಂದ ಶಾಲೆ ಸುಧಾರಣೆ ಕಾಣುವುದು ದೂರದ ಮಾತು ಎಂಬ ಅಪಸ್ವರವೂ ಗ್ರಾಮಸ್ಥರಿಂದ ಕೇಳಿಬಂದಿದ್ದು, ಯಾರದ್ದೋ ಪ್ರತಿಷ್ಠೆಗೆ ಮಕ್ಕಳೇಕೆ ಭಯದಲ್ಲಿ ಕಲಿಯಬೇಕು? ಎಂಬ ಪ್ರಶ್ನೆ ಪ್ರಜ್ಞಾವಂತರದ್ದಾಗಿದೆ.

### ಏನಾಗಬೇಕು?

ಖಾನಾಪೂರ ಹೊಸ ಬಡಾವಣೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಇಲಾಖೆ ಮೇಲಾಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಅಲ್ಲದೆ ಜಿಪಂ, ತಾಪಂ ಗಮನಕ್ಕೂ ತರಲಾಗಿದೆ. ಶೀಘ್ರ ಕೊಠಡಿಗಳ ನಿರ್ಮಾಣದ ಭರವಸೆ ನೀಡಿದ್ದಾರೆ. ಶಾಲೆಯಲ್ಲಿ ಪುರುಷರ ಶೌಚಾಲಯ ಹಾಗೂ ಮಹಿಳೆಯರ ಶೌಚಾಲಯಕ್ಕೆ ಕಾಂಪೌಂಡ್ ನಿರ್ಮಿಸಬೇಕು. ಶಾಲೆ ಭದ್ರತೆಗೆ ಕಾಂಪೌಂಡ್ ನಿರ್ಮಾಣ ಕಾರ್ಯವೂ ಆಗಬೇಕು ಎಂದು ಮುಖ್ಯಗುರು ಭೀಮಪ್ಪ ನೆಲ್ಲಗಿ ಹೇಳುತ್ತಾರೆ.

### ಕ್ಷೀಣಿಸುತ್ತಿರುವ ಮಕ್ಕಳ ಸಂಖ್ಯೆ

ಖಾನಾಪೂರ ಹೊಸ ಬಡಾವಣೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಟ್ಟಡ ಶಿಥಿಲಾವಸ್ಥೆ ತಲುಪಿದ್ದು, ವರ್ಷ ಕಳೆದಂತೆ ಮಕ್ಕಳ ದಾಖಲಾತಿಯೂ ಇಳಿಮುಖವಾಗುತ್ತಿದೆ. ಹಳೆಯ ಕಟ್ಟಡವಾಗಿದ್ದರಿಂದ ಮಕ್ಕಳಿಗೆ ಏನಾದರೂ ಹೆಚ್ಚು ಕಮ್ಮಿ ಆಗುತ್ತದೆ ಎಂದು ಪಾಲಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿದ್ದಾರೆ.

ಈಗಲಾದರೂ ಸಂಬಂಧಪಟ್ಟ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಶಾಲೆಗೆ ಖುದ್ದು ಭೇಟಿ ನೀಡಿ ಮಕ್ಕಳ ಶಿಕ್ಷಣಕ್ಕೆ ಅಗತ್ಯ ಸೌಕರ್ಯ ಕಲ್ಪಿಸಬೇಕು.

ಅಲ್ಲದೆ ಸುಸಜ್ಜಿತ ಕಟ್ಟಡ ವ್ಯವಸ್ಥೆ ಮಾಡಬೇಕು ಎಂದು ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ ತಳವಾರ, ಉಪಾಧ್ಯಕ್ಷ ಮಂಜುನಾಥ ಹೆಳವರ, ಅಮೋಗೆಪ್ಪ ಅಲ್ಲಾಪೂರ, ಸಂಜೀವಪ್ಪ ಅಲ್ಲಾಪೂರ, ಹೊನ್ನಪ್ಪ ಅಲ್ಲಾಪೂರ, ಮಲ್ಲಣ್ಣ ನಾಯ್ಕೋಡಿ, ಬಸವರಾಜ ಖಾಚಾಪೂರ, ಪರಶುರಾಮ ನಾಯ್ಕೋಡಿ, ಮಲ್ಲಪ್ಪ ಮರಕಲ್ಲ, ಮಡಿವಾಳಪ್ಪ ಮರಗಲ್ಲ, ಮಾನಪ್ಪ ತಳವಾರ ಇತರರು ಒತ್ತಾಯಿಸಿದ್ದಾರೆ.

# ಇಂದು ರಾಜ್ಯಪಾಲರಿಗೆ ಕಪ್ಪು ಬಾವುಟ ಪ್ರದರ್ಶನ

• ಉದಯವಾಹಿನಿ, ಬಳ್ಳಾರಿ

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮೇಲೆ ವೃಥ ಆರೋಪ ಮಾಡಿ ಖಾಸಗಿ ವ್ಯಕ್ತಿಯೊಬ್ಬರು ತಮಗೆ ದೂರು ನೀಡಿರುವುದನ್ನೇ ಪರಿಗಣಿಸಿ ವಿಚಾರಣೆ ನಡೆಸುವಂತೆ ಅನುಮತಿ ನೀಡಿರುವುದು ರಾಜ್ಯಪಾಲರ ಪಕ್ಷಪಾತಿ ಧೋರಣೆಯಾಗಿದೆ, ಇದನ್ನು ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ಒಕ್ಕೂಟ ಬಲವಾಗಿ ಖಂಡಿಸುತ್ತದೆ, ಮತ್ತು ಇಂದು ಶ್ರೀ ವಿಜಯನಗರ ಕೃಷ್ಣ ದೇವರಾಯ ವಿಶ್ವವಿದ್ಯಾಲಯದ ಘಟಿಕೋತ್ಸವ ಕಾರ್ಯಕ್ರಮಕ್ಕೆ ಬಳ್ಳಾರಿಗೆ ಆಗಮಿಸುತ್ತಿರುವ ರಾಜ್ಯಪಾಲರ ವಿರುದ್ಧ ಕಪ್ಪು ಪಟ್ಟಿ ಸದಸ್ಯರ ಮಾಡಿ ಪ್ರತಿಭಟನೆಯನ್ನು ನಡೆಸಲಾಗುವುದೆಂದು ಒಕ್ಕೂಟದ ಅಧ್ಯಕ್ಷ ಗಾದಲಿಂಗನಗೌಡ ತಿಳಿಸಿದರು.

ಅವರು ಇಂದು ನಗರದ ಪತ್ರಿಕ ಭವನದಲ್ಲಿ



ಉದಯವಾಹಿನಿ ಚಿತ್ರ

ನಡೆಸಿ ಮಾತನಾಡಿ, ರಾಜ ಭವನದಲ್ಲಿ ಹಲವಾರು ರಾಜಕಾರಣಿಗಳ ಮೇಲೆ ದೂರುಗಳಿದ್ದರೂ ಸಹ ಅವುಗಳನ್ನು ನಿರ್ಲಕ್ಷಿಸಿ ಕೇವಲ ಸಿದ್ದರಾಮಯ್ಯನವರ ಮೇಲೆ ಮಾತ್ರ ವಿಚಾರಣೆಗೆ ಆದೇಶಿಸಿರುವುದು ಸಮಂಜಸವಲ್ಲ ರಾಜಭವನದಿಂದ ಸಂವಿಧಾನ ಮತ್ತು ಕಾನೂನು ಉಲ್ಲಂಘನೆಯಾಗಿದೆ ಎಂದು ಅವರು ಆರೋಪಿಸಿದರು.

ರಾಜ್ಯಪಾಲರಾದವರು ಯಾವ ಒಂದು ಪಕ್ಷದ ಪರವಾಗಿ ಕೆಲಸ ಮಾಡಬಾರದು ಮತ್ತು ಪೂರ್ವಗ್ರಹ ಪೀಡಿತರಾಗಿರಬಾರದು ಎಲ್ಲಾ ಪಕ್ಷದ ರಾಜಕಾರಣಿಗಳನ್ನು ಒಂದೇ ಎಂದು ಪರಿಗಣಿಸಿ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕೆ ಹೊರತು ಈ ರೀತಿಯಾಗಿ ಒಂದೇ ಪಕ್ಷದ ರಾಜಕಾರಣಿಗಳನ್ನು ಗುರಿಯಾಗಿಸಿಕೊಂಡು ಕೆಲಸ ಮಾಡಬಾರದು ಇದು ಖಂಡನೀಯ ಇದನ್ನು ಶೋಷಿತ ಸಮುದಾಯಗಳ ಒಕ್ಕೂಟದಿಂದ ವಿರೋಧಿಸಿ ಇಂದುಬಳ್ಳಾರಿ ನಗರಕ್ಕೆ ಆಗಮಿಸುತ್ತಿರುವ ರಾಜ್ಯಪಾಲರ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.


ಈ ಸಂದರ್ಭದಲ್ಲಿ ಒಕ್ಕೂಟದ ಎ ಮಾನಯ್ಯ, ವಿ. ಎಸ್ ಶಿವಶಂಕರ್, ಪಿ ಗಾದೆಪ್ಪ, ಎಲ್ ಮಾರಣ್ಣ, ಕೆರಕೋ ಡಪ್ಪ, ಜಗನ್, ವಿಜಯ್ ಕುಮಾರ್, ಯಾರ್ರಿಸ್ವಾಮಿ, ರಾಮ ನಾಯಕ್, ಚಲವಾದಿ ಓಂಕಾರಪ್ಪ, ಜೋಗಿನ್ ಕುಮಾರ್, ಧನಂಜಯ ಸೇರಿದಂತೆ ಒಕ್ಕೂಟದ ಹಲವರಿದ್ದರು.

# ಒಬ್ಬ ಬಾಲಕಾರ್ಮಿಕ, 8 ಕಿಶೋರ ಕಾರ್ಮಿಕರ ರಕ್ಷಣೆ

• ಉದಯವಾಹಿನಿ, ಹಾಸನ

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕಾರ್ಮಿಕ ಆಯುಕ್ತರ ನಿರ್ದೇಶನದಂತೆ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಆಗಸ್ಟ್ 1ರಿಂದ 31ರವರೆಗೆ ಜಿಲ್ಲೆಯ ಎಲ್ಲಾ ತಾಲ್ಲೂಕಿನಾದ್ಯಂತ ಅಂಗಡಿ, ಗ್ಯಾರೇಜ್, ಬಾರ್, ರೆಸ್ಟೋರೆಂಟ್‌ಗಳಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿತ್ತು.

ಒಬ್ಬ ಬಾಲಕಾರ್ಮಿಕ, 8 ಕಿಶೋರ ಕಾರ್ಮಿಕರನ್ನು ರಕ್ಷಣೆ ಮಾಡಲಾಗಿದೆ. ಪಾಲನೆ-ಪೋಷಣೆ, ರಕ್ಷಣೆಯ ಹಿತದೃಷ್ಟಿಯಿಂದ ಈ ಮಕ್ಕಳನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ವಶಕ್ಕೆ ಒಪ್ಪಿಸಲಾಗಿದೆ. ಮಕ್ಕಳನ್ನು ಕಾನೂನು ಬಾಹಿರವಾಗಿ ಕೆಲಸಕ್ಕೆ ನೇಮಿಸಿಕೊಂಡಿದ್ದ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. 14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಉದ್ಯಮಿಯಲ್ಲಿ ಹಾಗೂ 14 ರಿಂದ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಕೆಲಸದಲ್ಲಿ ದುಡಿಸಿಕೊಳ್ಳುವುದು ಶಿಕ್ಷಾರ್ಹ


ಉದಯವಾಹಿನಿ ಚಿತ್ರ

ಅಪರಾಧವಾಗಿದೆ.

ಇಂತಹ ಮಕ್ಕಳು ಕೆಲಸದಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಕಾರ್ಮಿಕ ಸಹಾಯವಾಣಿ 155214 ಹಾಗೂ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ದೂರವಾಣಿ ಸಂಖ್ಯೆ-08172-235447 ಹಾಗೂ ಮಕ್ಕಳ ಸಹಾಯವಾಣಿ 1098ಕ್ಕೆ ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ. ಕಾರ್ಯಾಚರಣೆಯ ವೇಳೆ ಬಾಲ ಕಾರ್ಮಿಕ ಪದ್ಧತಿಯ ವಿರುದ್ಧದ ಕರಪತ್ರ, ಭಿತ್ತಿಪತ್ರ ಅಂಟಿಸುವ ಮೂಲಕ ಸಾರ್ವಜನಿಕರು, ಅಂಗಡಿ, ವಿವಿಧ ಸಂಸ್ಥೆಗಳ ಮಾಲೀಕರಲ್ಲಿ ಅರಿವು ಮೂಡಿಸಲಾಯಿತು.

# ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲು ತೀರ್ಮಾನ

• ಉದಯವಾಹಿನಿ,ಚಿಂಚೋಳಿ

ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಅಂಗವಾಗಿ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಸಂಘ ಸಂಸ್ಥೆಗಳಲ್ಲಿ ಸೆಪ್ಟೆಂಬರ್ 17ರಂದು ಕಡ್ಡಾಯವಾಗಿ ಧ್ವಜಾರೋಹಣ ನೆರವೇರಿಸಿ ಸರ್ದಾರ್ ವಲ್ಲಭ ಭಾಯಿ ಪಟೇಲ,ಮಹಾತ್ಮ ಗಾಂಧೀಜಿ, ಡಾ.ಬಿ.ಆರ್. ಅಂಬೇಡ್ಕರ್ ಪೋಟೋಗಳಿಗೆ ಪೂಜಿಸಬೇಕು,ಕ.ಕ.ವಿಮೋಚನಾ ದಿನವನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗುವುದು ಎಂದು ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ ಹೇಳಿದರು.

ಪಟ್ಟಣದ ತಹಶೀಲ್ ಸಭಾಂಗಣದಲ್ಲಿ ಸೆ.15 ರಂದು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ, ಸೆ.17ರಂದು ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ, ವಿಶ್ವಕರ್ಮ ಜಯಂತಿ ಅಂಗವಾಗಿ ಕರೆದ


ಉದಯವಾಹಿನಿ ಚಿತ್ರ

ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಈ ವರ್ಷ ಕಲ್ಯಾಣ ಕರ್ನಾಟಕ ವಿಮೋಚನಾ ದಿನವನ್ನು ಅತ್ಯಂತ ಸಡಗರ ಸಂಭ್ರಮ ಅದ್ದೂರಿಯಾಗಿ ಆಚರಣೆ ಮಾಡಲಾಗುವುದು.

8ಗಂಟೆಗೆ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಸಂಘ ಸಂಸ್ಥೆಗಳಲ್ಲಿ ಕಾಟಾಚಾರಕ್ಕೆ ಆಚರಣೆ ಮಾಡದೆ ಕಡ್ಡಾಯವಾಗಿ ಧ್ವಜಾರೋಹಣ ನೆರವೇರಿಸಬೇಕು,ತಮ್ಮ ತಮ್ಮ ಕಛೇರಿಗಳಲ್ಲಿ ಆಚರಿಸಿ 8-30ಗಂಟೆಗೆ ತಹಸೀಲ್

> 371ಜೆ ಕಲಂ,ಗಾಗಿ ಹೋರಾಟ ಮಾಡಿದ ದಿ.ವೈಜೀನಾಥ ಪಾಟೀಲರ ಸಮಾಧಿ ಚಿಂಚೋಳಿಯಲ್ಲಿ ಇರುವುದರಿಂದ ಕನಿಷ್ಠ ತಾಲ್ಲೂಕಾಡಳಿತ ವತಿಯಿಂದ ಅವರ ಸಮಾಧಿಗೆ ತೆರಳಿ ಮಾಲಾರ್ಪಣೆ ಮಾಡಿ ಗೌರವಿಸಿ ಎಂದು ಪತ್ರಕರ್ತ ಮಹೇಬೂಬಶಾ ಮನವಿ ಮಾಡಿದಾಗ ಗ್ರೇಡ್2 ತಹಶೀಲ್ದಾರ್ ಮಾತನಾಡಿ ಜಯಂತ್ಯೋತ್ಸವ ಸಮಿತಿಯಲ್ಲಿ ಚರ್ಚಿಸಿ ನಿರ್ಣಯ ಮಾಡುತ್ತೇವೆ
>
> - ಸುಬ್ಬಣ್ಣ ಜಮಖಂಡಿ, ತಹಶೀಲ್ದಾರ್

ಕಾರ್ಯಾಲಯಕ್ಕೆ ತಪ್ಪದೆ ಆಗಮಿಸಬೇಕು ತಹಸೀಲ್ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತಿದ್ದು,ಸಾಂಸ್ಕೃತಿಕ ಕಾರ್ಯಕ್ರಮ, ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಅಂದೆ ವಿಶ್ವಕರ್ಮ ಜಯಂತಿಯಿದ್ದು ತಪ್ಪದೆ ಆಚರಣೆ ಮಾಡಬೇಕು, ವಿಜಯಕುಮಾರಗಂಗನಪಳ್ಳಿ ಮಾತನಾಡಿ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆದಂದು 371ಜೆ ಕಲಂಗೆ ಹೋರಾಟ ಮಾಡಿದ ದಿ.ವೈಜೇನಾಥ ಪಾಟೀಲರ ಪೋಟೋಗೆ ಪೂಜಿಸುವಂತೆ ಮನವಿ ಮಾಡಿದರು.

ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿಯವರು ಕಲ್ಯಾಣ ಕರ್ನಾಟಕದಲ್ಲಿ ಸರ್ಕಾರಿ ಸೌಲಭ್ಯ ಮೀಸಲಾತಿ, ವಿವಿಧ ರೀತಿಯಲ್ಲಿ ಅನುಕೂಲ ಸಿಗುತ್ತಿದೆ ಆದರೆ 371ಜೆ ಗಾಗಿ ಅನೇಕ ಹೋರಾಟ ಮಾಡಿದವರು ವೈಜೇನಾಥ ಪಾಟೀಲರು ಸರ್ವರಿಗೂ ತಿಳಿದಿರುವ ವಿಷಯವಾಗಿದೆ ಆದರೆ ನಮಗೆ ತಾಲ್ಲೂಕಾಡಳಿತ ವತಿಯಿಂದ ಪೋಟೋ ಇಟ್ಟು ಪೂಜಿಸಲು ಬರುವುದಿಲ್ಲ ಸರ್ಕಾರದಿಂದ ಆದೇಶ ಹೊರಡಿಸಿದರೆ ಮಾತ್ರ ನಮಗೆ ಬರುತ್ತೆ ಇಲ್ಲಾದಿದ್ದರೆ ಬರುವುದಿಲ್ಲಾ, ಸಾರ್ವಜನಿಕರು ವಿವಿಧ ಸಂಘಟನೆಯವರು ಪತ್ರ ಚಳುವಳಿ, ಮನವಿಪತ್ರಗಳು ಸಲ್ಲಿಸಿ ಸರ್ಕಾರಕ್ಕೆ ತಾವೆಲ್ಲರೂ ಒತ್ತಾಯಿಸಬೇಕು ಎಂದರು.

ಈ ಸಂದರ್ಭದಲ್ಲಿ ತಾಪಂ.ಇಓ ಶಂಕರ ರಾಠೋಡ್, ಪಿಎಸ್‌ಐ ಗಂಗಮ್ಮಾ, ಟಿಹೆಚ್‌ಓ ಮಹ್ಮುರ್ದ್ ಗಫಾರ್, ತೋಟಗಾರಿಕೆ ಎಡಿ ರಾಜಕುಮಾರ ಗೋವಿನ್, ಕೃಷಿ ಎಡಿ ವೀರಶೆಟ್ಟಿ ರಾಠೋಡ್, ಶಿಕ್ಷಣಾಧಿಕಾರಿ ಲಕ್ಷ್ಮಯ್ಯ, ಸಿಡಿಪಿಓ ಸವಿತಾ, ಬಿಸಿಎಂ ರೇಣುಕಾ, ಅರಣ್ಯ ಇಲಾಖೆ ನಟರಾಜ್, ಅಲ್ಪಸಂಖ್ಯಾತರ ಇಲಾಖೆ ಮಸೂದ್ ನವಾಬ್, ಸೇರಿದಂತೆ ಅಧಿಕಾರಿಗಳು ಸಿಬ್ಬಂದಿಗಳು ಅನೇಕರಿದ್ದರು.

# ಅಂಗಡಿ, ವಾಣಿಜ್ಯ ಸಂಸ್ಥೆಗಳ ನೋಂದಣಿ ಕಡ್ಡಾಯ

• ಉದಯವಾಹಿನಿ ಅರಸೀಕೆರೆ

ಅರಸೀಕೆರೆ ತಾಲ್ಲೂಕಿನಲ್ಲಿ ಬರುವ ಎಲ್ಲಾ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ಕಡ್ಡಾಯವಾಗಿ ನೋಂದಣಿ ಮತ್ತು ನಿಗದಿತ ಅವಧಿಯಲ್ಲಿ ಪರವಾನಿಗೆ ನವೀಕರಣ ಮಾಡಿಸಿಕೊಳ್ಳಬೇಕು ಎಂದು ಅರಸಿಕೆರೆ ತಾಲ್ಲೂಕು ಕಾರ್ಮಿಕ ನಿರೀಕ್ಷಕರಾದ ವೈ ಎಲ್ ಶಶಿಕಲಾ ತಿಳಿಸಿದರು.

ಉದಯವಾಹಿನಿ ಪತ್ರಿಕೆಯೊಂದಿಗೆ ಮಾತನಾಡಿ ದ ಶಶಿಕಲಾ ರವರು ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ 1961ರ ಅಡಿ ಕಾರ್ಮಿಕ ಇಲಾಖೆಯಲ್ಲಿ ಕಡ್ಡಾಯವಾಗಿ ನೊಂದಣಿ ಮಾಡಿಸಿಕೊಳ್ಳಬೇಕು . ಸರ್ಕಾರ ಆದೇಶವನ್ನು ಅಂಗಡಿ ಮಾಲೀಕರು ಹಾಗೂ ಉದ್ಯಮಿದಾರರು ಪಾಲಿಸಬೇಕು ಕಾರ್ಮಿಕ ಇಲಾಖೆ ತಪಾಸಣೆ ವೇಳೆ ಇಲಾಖೆ ಕಾನೂನು ಉಲ್ಲಂಘನೆಗಳು ಕಂಡು ಬಂದಲ್ಲಿ ಸರ್ಕಾರದ ಕಾರ್ಮಿಕ ಇ



ಉದಯವಾಹಿನಿ ಚಿತ್ರ

ಲಾಖೆ ಕಾನೂನಿನನ್ವಯ ಕ್ರಮವಹಿಸಲಾಗುತ್ತದೆ ಇದರಿಂದ ಅರಸೀಕೆರೆ ತಾಲ್ಲೂಕಿನ ಎಲ್ಲಾ ವ್ಯಾಪಾರ ಉದ್ದಿಮೆದಾರರು ಮತ್ತು ವಾಣಿಜ್ಯ ಸಂಸ್ಥೆಯವರು ಅರಸೀಕೆರೆ ತಾಲ್ಲೂಕ್ ಪಂಚಾಯಿತಿ ಕಟ್ಟಡದಲ್ಲಿರುವ ಕಾರ್ಮಿಕ ಇಲಾಖೆ ಕಚೇರಿಗೆ ಭೇಟಿ ನೀಡಿ ಕಚೇರಿ ವೇಳೆಯಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ ಕಾರ್ಮಿಕ ನಿರೀಕ್ಷಕರಾದ ವೈ ಎಲ್ ಶಶಿಕಲಾ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಶಾಂತಿಯುತವಾಗಿ ಈದ್ ಮಿಲಾದ್, ಗೌರಿ ಗಣೇಶ ಹಬ್ಬ ಆಚರಣೆ ಮಾಡಿ

• ಉದಯವಾಹಿನಿ, ಜೇವರ್ಗಿ

ತಾಲ್ಲೂಕಿನ ಪೊಲೀಸ್ ಠಾಣೆಯಲ್ಲಿ ಗೌರಿ ಗಣೇಶ ಹಬ್ಬ ಹಾಗೂ ಈದ್ ಮಿಲಾದ್ ಹಬ್ಬದ ಅಂಗವಾಗಿ ಶಾಂತಿ ಸಭೆ ಜರುಗಿತು. ಶಾಂತಿ ಸಭೆಯನ್ನು ಉದ್ದೇಶಿಸಿ ಡಿವೈಎಸ್ಪಿ ಬಿಂದು ಮಣಿ ಕಲಬುರ್ಗಿಮಾತನಾಡಿದರು. ತಾಲ್ಲೂಕಿನಲ್ಲಿ ಈದ್ ಮಿಲಾದ್ ಮತ್ತು ಗೌರಿ ಗಣೇಶ ಹಬ್ಬವನ್ನು ಶಾಂತಿತವಾಗಿ ಆಚರಣೆ ಮಾಡಬೇಕು ಎಂದು ಸಾರ್ವಜನಿಕರಿಗೆ ಸೂಚನೆ ನೀಡಿದರು.

ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬರುವ 21 ವಾರ್ಡುಗಳಲ್ಲಿ ಗಣಪತಿ ಪ್ರತಿಷ್ಠಾಪನೆ ಮಾಡುತ್ತಿದ್ದರೆ ಗಡ್ಡಾಯವಾಗಿ ಸಿಂಗಲ್ ಡೋರ್ ಗಣಪತಿ ಪ್ರತಿಷ್ಠಾಪನೆ ಅನುಮತಿ ನೀಡುವ ಕೇಂದ್ರ ತೆಗೆಯಲಾಗುತ್ತದೆ. ಅದಕ್ಕಾಗಿ ಎಲ್ಲಾ ದಾಖಲೆಗಳು ತೆಗೆದುಕೊಂಡು ಪುರಸಭೆಯಲ್ಲಿ ಗಣಪತಿ ಪ್ರತಿಷ್ಠಾಪನೆ ಮಾಡಲು ಅನುಮತಿ ಪಡೆದುಕೊಳ್ಳಬೇಕು. ಕಾನೂನು ಬದ್ಧವಾಗಿ



ಉದಯವಾಹಿನಿ ಚಿತ್ರ

ಸರಿಯಾದ ಟೆಂಟ್ ಮತ್ತು ಧ್ವನಿವರ್ಧಕಗಳು ಮತ್ತು ರಕ್ಷಣೆ ಉಪಕರಣಗಳು ಬಳಸಿಕೊಂಡು ಅಹಿತಕರ ಘಟನೆ ನಡೆಯದಂತೆ ಗಣಪತಿ ಪ್ರತಿಷ್ಠಾಪನೆ ಮತ್ತು ವಿಸರ್ಜನೆ ಕಾರ್ಯಕ್ರಮ ಮಾಡಬೇಕು ಎಂದು ಗಣೇಶ್ ಮಂಡಳಿಗೆ ಸೂಚನೆ ನೀಡಿದರು.

ನಂತರ ದಂಡಾಧಿಕಾರಿ ಮಲ್ಲಣ್ಣ ಯಲಗೋಡ ಮಾತನಾಡಿ ಎಲ್ಲರೂ ಮಣ್ಣಿನ ಗಣಪತಿಯನ್ನು ಪ್ರತಿಷ್ಠಾಪನೆ ಮಾಡಬೇಕು ಜೊತೆಗೆ ಪ್ರತಿಯೊಂದು ವಾರ್ಡ್‌ಗಳಲ್ಲಿ ಗಣಪತಿ ಮಂಡಳಿಯ ಸದಸ್ಯರು ವಾಲಂಟರಿ ಆಗಿ ಗಣಪತಿ ರಕ್ಷಣೆ ಮಾಡಬೇಕು ಜೊತೆಗೆ ನಮ್ಮ ಪೊಲೀಸ್ ಸಿಬ್ಬಂದಿ ಕೂಡ ನಿಮಗೆ ಸಹಕಾರ

> ಸರ್ಕಲ್ ಇನ್ಸ್ಪೆಕ್ಟರ್ ರಾಜಸಾಬ್ ನದಾಫ್ ಈದ್ ಮಿಲಾದ್ ಮತ್ತು ಗಣೇಶ್ ಹಬ್ಬ ಒಂದೇ ತಿಂಗಳಲ್ಲಿ ಬಂದಿರುವುದರಿಂದ ಹಿಂದೂ ಮುಸ್ಲಿಂ ಭಾವೈಕತೆ ಹಬ್ಬವಾಗಿ ಆಚರಣೆ ಮಾಡಬೇಕು. ಗಣೇಶ್ ಪ್ರತಿಷ್ಠಾನ ಮಾಡುವ ಮಂಡಳಿಯವರು ಕಡ್ಡಾಯವಾಗಿ ತಾಲ್ಲೂಕ ಆಡಳಿತ ಅನುಮತಿ ಪಡೆದಿರಬೇಕು ಎಂದು ಸೂಚನೆ ನೀಡಿದರು.

ನೀಡುತ್ತದೆ. ರಾತ್ರಿ ವೇಳೆ ಪೊಲೀಸ್ ರಕ್ಷಣೆ ಮಾಡುವ ಸಂದರ್ಭದಲ್ಲಿ ಯಾವುದೇ ಹಹಿತಕರ ಘಟನೆ ಮಾಡದಂತೆ ನೋಡಿಕೊಳ್ಳಬೇಕು. ಬಡವಣೆಗಳಲ್ಲಿ ಒಳ್ಳೆ ಕಾರ್ಯಕ್ರಮ ಹಾಕಿಕೊಂಡು ಮಾದರಿ ಗಣಪತಿ ಹಬ್ಬ ಆಚರಣೆ ಮಾಡಬೇಕು ಎಂದು ಹೇಳಿದರು.

# ಮುಡಾ ಮಾದರಿಯಲ್ಲಿ ಹೌಸಿಂಗ್ ಬೋರ್ಡ್‌ನಲ್ಲಿ ಹಗರಣ

## ಶಾಸಕ ನಾಡಗೌಡರ ವಿರುದ್ಧ ಮಾಜಿ ಶಾಸಕ ನಡಹಳ್ಳಿ ಆರೋಪಗಳ ಸುರಿಮಳೆ ; ಬಹಿರಂಗ ಸವಾಲು

• ಉದಯವಾಹಿನಿ, ಮುದ್ದೇಬಿಹಾಳ

ನಿಯಮ ಉಲ್ಲಂಘಿಸಿ ಬೆಂಗಳೂರಿನ ಬಿಡಿಎ, ವಿಜಯಪುರ, ಮುದ್ದೇಬಿಹಾಳದ ಹೌಸಿಂಗ್ ಬೋರ್ಡನಲ್ಲಿ ಎಷ್ಟು ಸೈಟ್ ಪಡೆದುಕೊಂಡಿದ್ದೀರಿ? ಎಷ್ಟು ಮನೆಗಳನ್ನು ಸರ್ಕಾರಿ ಕಚೇರಿಗೆ ಬಾಡಿಗೆ ಕೊಟ್ಟಿದ್ದೀರಿ? ನಿಮ್ಮ ಸಂಬಂಧಿಕ ಕಲಕೇರಿ ಹೋಬಳಿಯ ಕಲೆಕ್ಷನ್ ಏಜಂಟ್‌ನಿಂದ ಎಷ್ಟು ಕೋಟಿ ಹಣ ಸಂಗ್ರಹಿಸಿದ್ದೀರಿ? ಅನ್ನೋದನ್ನು ಜನರೆದುರು ತೆರೆದಿಡುವಂತೆ ಮಾಜಿ ಶಾಸಕ, ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿಯವರು ಶಾಸಕ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್.ನಾಡಗೌಡರಿಗೆ ಸವಾಲೆಸೆದಿದ್ದು, ಸವಾಲು ಸ್ವೀಕರಿಸದಿದ್ದರೆ ದಾಖಲೆ ಸಮೇತ ಜನರೆದುರು ತೆರೆದಿಡುವುದಾಗಿ ತಿಳಿಸಿದರು.

ಫಾರ್ಮಹೌಸ್‌ನಲ್ಲಿ ಮಂಗಳವಾರ ಬಿಜೆಪಿ ಮುಖಂಡರೊಂದಿಗೆ ಸುದ್ದಿಗೋಷ್ಠಿ ನಡೆಸಿ, ನಿಮ್ಮ, ಪತ್ನಿಯ, ಮಗಳ ಹೆಸರಿನಲ್ಲಿ ಸೈಟ್ ಪಡೆದಿರುವುದಕ್ಕೆ 2013ರಲ್ಲೇ ದಾಖಲೆ ತೆಗೆಸಿದ್ದೆ. ಕೆಲವೊಂದನ್ನು ನೀವು ಚುನಾವಣೆಯಲ್ಲಿ ಡಿಕ್ಲೇರ್ ಮಾಡಿರಲಿಲ್ಲ. ವೈಯುಕ್ತಿಕ ಹೋಗೋದು ಬೇಡವೆಂದು ಸುಮ್ಮನಿದ್ದೆ ಎಂದರು. ಮುಡಾದ 4000 ಕೋಟಿ ಹಗರಣದ ಮಾದರಿಯಲ್ಲೇ


ಉದಯವಾಹಿನಿ ಚಿತ್ರ

**ದಾಖಲೆ ಸಮೇತ ಜನರೆದುರು ತೆರವು**

ಹೌಸಿಂಗ್ ಬೋರ್ಡನಲ್ಲೂ ನಡೆದಿವೆ. ಜನಪ್ರತಿನಿಧಿಗೆ ಬೆಂಗಳೂರು, ಜಿಲ್ಲಾಕೇಂದ್ರ ಅಥವಾ ಮತ ಕ್ಷೇತ್ರ ದಲ್ಲಿ ಒಂದು ಸೈಟ್ ಪಡೆಯಲು ಅವಕಾಶವಿದೆ.

40 ಹಳ್ಳಿಗಳ ಸರದಾರರು, ಧಣಿಗಳು, ಯರು? ಯಾರಿಗೋ ಸಾಲ ಕೊಟ್ಟಿದ್ದೇವೆಂದು ಭಾಷಣದಲ್ಲಿ ಹೇಳುವ ನೀವು ಶ್ರೀಮಂತರ ಮನೆಯಲ್ಲಿ ಹುಟ್ಟಿದ್ದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಹುಡ್ಕೋದಲ್ಲಿ ಸರ್ಕಾರಿ ಸೈಟ್ ತಗೊಳ್ಳೊವಾಗ ಹ್ಯಾಗೆ ಬಡವರಾದ್ರಿ, 50:50 ಸೈಟ್‌ಗೆ ನಿಮಗ್ಯಾರು ಅವಕಾಶ ಕೊಟ್ರು ಅನ್ನೋದನ್ನು ಜನರ ಮುಂದಿಡಿ. ಆಗಾಗ ರಾಜಕೀಯ ಆದರ್ಶದ ಬಗ್ಗೆ ನೀವು ಮಾತನಾಡುವುದರಿಂದ ಆರೋಪ ಮಾಡಬೇಕಾಗಿದೆ ಎಂದರು. ನೀವೇನು ಸತ್ಯ ಹರಿಶ್ಚಂದ್ರರಲ್ಲ. ಮುದ್ದೇಬಿಹಾಳ ಹುಡ್ಕೋದಲ್ಲಿ 4 ಮನೆ ಸರ್ಕಾರಿ ಕಚೇರಿಗಳಿಗೆ ಬಾಡಿಗೆ ಕೊಟ್ಟಿದ್ದನ್ನು ನಾನು ತಡೆಯಲಿಲ್ಲ. ನಾನು ಶಾಸಕನಾಗಿದ್ದಾಗ ರಸ್ತೆ ಗಳ ವಿಷಯದಲ್ಲಿ ಸಾಕಷ್ಟು ತೊಂದ್ರೆ ಕೊಟ್ರಿ. ಕೆಬಿಜೆಎನ್ನೆಲ್ ಭ್ರಷ್ಟಾಚಾರದ ಸಂಸ್ಥೆ ಎಂದಿದ್ರಿ. ಈಗ ಕೆಬಿಜೆಎನ್ನೆಲ್, ಪಿಡಬ್ಲ್ಯೂಡಿ, ಅಂಗನವಾಡಿ ಕಲೆಕ್ಷನ್ ಮಾಡ್ತಿರೋರು ಯಾರೆಂದು ಹೇಳಬೇಕಲ್ವೆ. ನಿಮ್ಮ ಸಂಬಂಧಿಕ ನಾಯಕನ ಹೆಸರೇಳುವಿರಾ ಕ್ಷೇತ್ರದಲ್ಲಿ ಅವರೊಬ್ಬರೇನಾ ಅಥವಾ ಇನ್ನೂ ಎಷ್ಟು ಜನ ಕಲೆಕ್ಷನ್ ಏಜಂಟರಿದ್ದಾರೆ. ನನ್ನ ಮೇಲೆ ನೀವು ಆಗ ಆರೋಪ ಮಾಡಿದ್ದೀರಲ್ವಾ. ಈಗ ನನ್ನ ಸರದಿ, ನೀವು ಉತ್ತರ ಕೊಡಬೇಕಲ್ವೆ ಎಂದರು.

ನನ್ನ ಹತ್ತಿರವಿದ್ದ ಜನರೇ ನಿಮ್ಮ ಎಲೆಕ್ಷನ್ ಮಾಡಿದ್ದರು. ನಿಮ್ಮಲ್ಲಿ ಏನೂ ಸಿಗದಾದಾಗ ನನ್ನ ಹತ್ತಿರ ನಿಮ್ಮದೆಲ್ಲ ಹೇಳ್ತಿದ್ದಾರೆ. ಯಾವ ಇಲಾಖೆಯಲ್ಲಿ ನೀವೇನು ಮಾಡ್ತಿದ್ದೀರಿ ಅನ್ನೋದನ್ನು ಹೊರಹಾಕುತ್ತಿದ್ದಾರೆ. ಯಾರು ಕಲೆಕ್ಷನ್ ಮಾಡ್ತಿದ್ದಾರೆ. ಉಸುಕು ಹೊಡೀತಿದ್ದಾರೆ. ಎಷ್ಟು ಕಲೆಕ್ಷನ್ ಮಾಡ್ತೀರಿ ಅನ್ನೋದನ್ನ ಜನಕ್ಕೆ ಲೆಕ್ಕ ಕೊಡ್ತೀರಾ ಎಂದರು. ಶಾಸಕನಾಗಿದ್ದಾಗ ಬಡವರಿಗಾಗಿ 6000, ನಾಲತವಾಡಕ್ಕೆ 800 ಮನೆಗಳನ್ನು ತಂದಿದ್ದೆ. ಭ್ರಷ್ಠಾಚಾರಕ್ಕೆ ಅವಕಾಶ ಕೊಟ್ಟಿರಲಿಲ್ಲ. ಈಗ ಆ ಮನೆಗಳ ಜಿಪಿಎಸ್ ಮಾಡಲು 20000 ರೂ., ಬಿಲ್ ಮಾಡಲು ಇಂತಿಷ್ಟು ಹಣ ಪಡೆಯುತ್ತಿದ್ದಾರೆ. ಬಡವರ ಮನೆಗೆ ಜಿಪಿಎಸ್ ಮಾಡಲು ಹಣ ಕೊಡಬೇಕೆ.

> ಮುದ್ದೇಬಿಹಾಳ ಪುರಸಭೆಯ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯೇ ಆಯ್ಕೆಯಾಗುತ್ತಾರೆ ಕಾದು ನೋಡಿ
>
> -ಎ.ಎಸ್ ಪಾಟೀಲ್ ನಡಹಳ್ಳಿ

ನಾನು ತಂದಿರುವ ಮನೆಗಳನ್ನು ನಿಮ್ಮ ಕಾರ್ಯಕರ್ತರು ಮಾರಿಕೊಳ್ಳುತ್ತಿಲ್ಲವೆ. ಉಸುಕು ದಂಧೆ ಮಾಡುವ ಕಮೀಷನ್ ಹಣ ಯಾರಿಗೆ ರತಿದೆ. ನಿಮ್ಮ ಕುಟುಂಬದ ಏಜಂಟ್ ಕಲೆಕ್ಷ್ನ್ ಮಾಡ್ತಿದ್ದಾನೆಯೇ. ನನ್ನ ಅವಧಿಯಲ್ಲಿ ಆ ರೀತಿ ಮಾಡಿದ್ದರೆ ಈಗ ನಿಮ್ಮದೆ ಸರ್ಕಾರ ಇದೆ. ಕ್ರಮ ತೆಗೆದುಕೊಳ್ಳಿ ಎಂದರು.

ನನ್ನ ಅವಧಿಯಲ್ಲಿ ಮಂಜೂರಾದ ಕಾಂಕ್ರಿಟ್ ರಸ್ತೆಗಳನ್ನು ಒಂದೂವರೆ ವರ್ಷಗಳಾದರೂ ಪ್ರಾರಂಭಿಸಿದೆ ನಿಲ್ಲಿಸಿದ್ದೀರಿ, ಬಿಲ್ ಮಾಡದಂತೆ ಹೇಳಿದ್ದೀರಿ. ಕೇಳಿದರೆ ನಾನು ನಿಲ್ಸಿಲ್ಲ, ಹೇಳಿಲ್ಲ ಅಂತೀರಿ. ನಿಮ್ಮ ಸಂಬಂಧಿಕ ಗುತ್ತಿಗೆದಾರರನ್ನು ಬೆಂಗಳೂರಿಗೆ ಬರಲು ಹೇಳ್ತಾನೆ. ಕೆಬಿಜೆಎನ್ನೆಲ್‌ನ ಯೋಜನೆಗಳನ್ನು, ಸಿಸಿ ರಸ್ತೆಗಳನ್ನು, ಕುಡಿಯುವ ನೀರಿನ ಯೋಜನೆಗಳನ್ನು ನಿಲ್ಲಿಸಿದ್ದೀರಿ. ಬಸರಕೋಡಕ್ಕೆ 220 ಕೆವಿ ಸ್ಟೇಷನ್ ಮಂಜೂರಿಸಿದ್ದರೂ ಅದನ್ನೂ ನಿಲ್ಲಿಸಲು ನಿಮ್ಮ ಸಂಬಂಧಿಕರು ಪ್ರಯತ್ನಿಸಿದರು.

ಸಿಎಂ ಸಿದ್ದರಾಮಯ್ಯ ಉದ್ಘಾಟನೆಗೆ ಬಂದಾಗ ಅದನ್ನೇಕೆ ಉದ್ಘಾಟನೆ ಪಟ್ಟಿಯಲ್ಲಿ ಹಾಕಲಿಲ್ಲ. ಇಲಾಖೆಯವರು ಹೇಳಿದರೂ ಅಂದೇಕೆ ಗುದ್ದಲಿ ಪೂಜೆ ಮಾಡಲಿಲ್ಲ. ನನ್ನ ಸಕ್ಕರೆ ಕಾರ್ಖಾನೆಗೆ ವಿದ್ಯುತ್ ಸಿಗಬಾರದೆಂದು ಮಾಡಲಿಲ್ಲವೆ ಎಂದರು.

ಅಂಬೇಡ್ಕರ್, ಬಸವಣ್ಣನ ಮೂರ್ತಿಗಳನ್ನು ಅಲ್ಲಲ್ಲಿ ನಿಲ್ಲಿಸಿದ್ದೆ. ನೀವು ಶಾಸಕರಾದ ಕೂಡಲೇ ಸರ್ಕಾರಕ್ಕೆ ಪ್ರಶ್ನೆ ಕೇಳಿ ಭ್ರಷ್ಟಾಚರ ನಡೆದಿದೆ ಅಂದ್ರಿ. ಬಿಲ್ ಕೊಟ್ಟಿಲ್ಲ ಭ್ರಷ್ಠಾಚಾರವೆಲ್ಲಿ ನಡೆಯುತ್ತದೆಂದು ನಿಮ್ಮ ಸರ್ಕಾರವೇ ಉತ್ತರ ಕೊಟ್ಟಿತ್ತು.

## ಮಿನಿ ನ್ಯೂಸ್


ಉದಯವಾಹಿನಿ ಚಿತ್ರ

ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ರುಸ್ತಾಂಪುರ ಗ್ರಾಮದಲ್ಲಿ ಸತತವಾಗಿ ಮೂರು ದಿನಗಳಿಂದ ಮಳೆ ಸುರಿಯುತ್ತಿರುವುದರಿಂದ ಗ್ರಾಮದ ರೈತ ನಾಗರೆಡ್ಡಿ ಹಸರೆಡ್ಡಿ ಅವರ 20 ಏಕರೆ ಜಮೀನಲ್ಲಿ ಹೆಸರು ಸಂಪೂರ್ಣವಾಗಿ ನಾಶವಾಗಿ ಮಳಕಿ ನಾಟಿವೆ ಇದರಿಂದ ರೈತ ತುಂಬಾ ಕಂಗಾಲಾಗಿದ್ದು ಸರ್ಕಾರ ಹಾಗೂ ತಾಲ್ಲೂಕಾಡಳಿತ ನೆರವಿಗೆ ಧಾವಿಸಬೇಕು ಎಂದು ರೈತ ಮುಖಂಡ ನಾಗರೆಡ್ಡಿ ಮನವಿ ಮಾಡಿದ್ದಾರೆ.

### ಬೆಳ್ಮಣ್ ನಿವಾಸಿಗೆ ಆನ್‌ಲೈನ್‌ನಲ್ಲಿ ವಂಚನೆ; ಆರೋಪಿಯ ಬಂಧನ

• ಉದಯವಾಹಿನಿ, ಉಡುಪಿ

ಆನ್‌ಲೈನ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉಡುಪಿ ಸೆನ್ ಠಾಣೆಯ ಪೊಲೀಸರು ಆರೋಪಿ ಒಡಿಶಾದ ವಿಶಾಲ್ ಕೋನ ಪಾಲ(30)ನನ್ನು ಬಂಧಿಸಿ, ಆತನಿಂದ 1,56,100ರೂಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ವಿದೇಶದಲ್ಲಿ ಉದ್ಯೋಗಿಯಾರುವ ಉಡುಪಿ ಜಿಲ್ಲೆಯ ಬೆಳ್ಮಣ್ ನಿವಾಸಿ ಪ್ರಶಾಂತ್ ಶೆಟ್ಟಿ ಅವರು ಬೆಳ್ಮಣ್‌ನ ಯೂನಿಯನ್ ಬ್ಯಾಂಕ್ ಶಾಖೆಯಲ್ಲಿ ಎರಡು ಖಾತೆಗಳನ್ನು ಹೊಂದಿದ್ದರು.

ಈ ಎರಡೂ ಖಾತೆಗಳಲ್ಲಿ ಪೇಟಿಎಂ ಆನ್‌ಲೈನ್ ಪೇಮೆಂಟ್ ಸಿಸ್ಟಂ ಹೊಂದಿದ್ದು, ಫೆ.10 ರಿಂದ 20ರ ನಡುವೆ ಯಾರೋ ಅಪರಿಚಿತರು ಇವರ ಗಮನಕ್ಕೆ ಬಾರದೆ ಒಟ್ಟು 1,56,100ರೂ.ಗಳನ್ನು ವರ್ಗಾಯಿಸಿಕೊಂಡು ನಷ್ಟ ಉಂಟು ಮಾಡಿದ್ದರು. ಈ ಬಗ್ಗೆ ಉಡುಪಿಯ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸೆನ್ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ರಾಮಚಂದ್ರ ನಾಯಕ್ ಅವರ ನೇತೃತ್ವದಲ್ಲಿ ಎಎಸ್‌ಐ ಉಮೇಶ್ ಜೋಗಿ ಮತ್ತು ಸಿಬಂದಿ ನಿಲೇಶ್ ಅವರ ತಂಡ ಒರಿಸ್ಸಾ ರಾಜ್ಯದ ಬೈರಂಪುರಕ್ಕೆ ತೆರಳಿ ಅಲ್ಲಿ ಆರೋಪಿಯ ಬಗ್ಗೆ ಮಾಹಿತಿ ಕಲೆ ಹಾಕಿ ಆರೋಪಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

### ಹೃದಯಾಘಾತದಿಂದ ಕಾನ್‌ಸ್ಟೇಬಲ್ ಸಾವು



• ಉದಯವಾಹಿನಿ, ಅರಸೀಕೆರೆ

ಇಲ್ಲಿನ ಪೊಲೀಸ್ ಠಾಣೆಯಲ್ಲಿ ಕರ್ತವ್ಯನಿರತರಾಗಿದ್ದ ಕಾನ್‌ಸ್ಟೆಬಲ್ ಕೆ.ಕೋಟೆಪ್ಪ (36) ಬುಧವಾರ ಮುಂಜಾನೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ರಾತ್ರಿ ಕರ್ತವ್ಯದಲ್ಲಿದ್ದ ಕೋಟೆಪ್ಪ ಅವರಿಗೆ ಬೆಳಿಗ್ಗೆ 5 ಗಂಟೆ ಸುಮಾರಿಗೆ ಎದೆನೋವು ಕಾಣಿಸಿಕೊಂಡಿದೆ. ತಕ್ಷಣ ಸಿಬ್ಬಂದಿ ನೆರವಿನೊಂದಿಗೆ ಕುಟುಂಬಸ್ಥರು ಆಸ್ಪತ್ರೆಗೆ ಸಾಗಿಸಿದ್ದಾರೆ. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

### ಸಹಾಯಧನ ಫಲಾನುಭವಿ ಬದಲಿಗೆ ಬೇರೆಯವರ ಖಾತೆಗೆ ಜಮಾ

• ಉದಯವಾಹಿನಿ ಅರಸೀಕೆರೆ

ಅರಸೀಕೆರೆ ತಾಲ್ಲೂಕಿನ ಕಸಬಾ ಹೋಬಳಿ ಮಲ್ಲದೇವಿಹಳ್ಳಿ ಗ್ರಾಮದ ಪುಟ್ಟಾ ಬೋವಿ ರ ವರ ಮಗನಾದ ಉಮೇಶ್ ಕಟ್ಟಡ ಕಾರ್ಮಿಕನಾಗಿದ್ದು ಇವರ ವಿವಾಹ ಸಹಾಯದನಕ್ಕಾಗಿ ಕಾರ್ಮಿಕ ಇಲಾಖೆಗೆ ಅರ್ಜಿ ಸಲ್ಲಿಸಲಾಗಿದ್ದು ಪುಟ್ಟಾ ಭೋವಿಯವರ ಸೊಸೆಯಾದ ದಿವ್ಯ ರವರ ಖಾತೆಗೆ ಜಮಾ ಆಗಬೇಕಾಗಿತ್ತು ಬಿಆರ್ ಅವರು ನೀಡಿದ ಖಾತೆ ಸಂಖ್ಯೆ ತಪ್ಪಾಗಿದ್ದರಿಂದ ಈ ಹಣ 50,000 ರೂಪಾಯಿಗಳು ಕಾ ರ್ಮಿಕ ಇಲಾಖೆ ವತಿಯಿಂದ ಮುಬಾರಕ್ ಎಂಬುವರ ಹೆಸರಿಗೆ ಹಣವರ್ಗಾವಣೆಯಾಗಿದ್ದು ಈ ಹಣವನ್ನು ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಆದೇಶದ ಮೇರೆಗೆ ಮುಬಾರಕ್ ಬಿನ್ ಮುಕ್ತಿಯ ರಹಮದ್ ಇವರ ಖಾತೆಯಿಂದ ಪಲಾನುಭವಿ ದಿವ್ಯ ಕೋಂ ಉಮೇಶ್ ಇವರ ಖಾತೆಗೆ ಹಣ ವರ್ಗಾವಣೆ ಮಾಡಿಸಲು ಅರಸೀಕೆರೆ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗುವುದು ಎಂದು ಅರಸೀಕೆರೆ ತಾಲ್ಲೂಕ್, ಕಾರ್ಮಿಕ ನಿರೀಕ್ಷಕರಾದ ವೈ ಎಲ್ ಶಶಿಕಲಾ ತಿಳಿಸಿದ್ದಾರೆ.

### ಮಾಂಜ್ರಾ, ಹರಿವು ಹೆಚ್ಚಳ ಹೊಲಗಳಿಗೆ ನುಗ್ಗಿದ ನೀರು

• ಉದಯವಾಹಿನಿ, ಔರಾದ್

ಮೂರು ದಿನಗಳಿಂದ ಸುರಿಯುತ್ತಿರುವ ಸತತ ಮಳೆಗೆ ಹಳ್ಳಗಳು ಮೈದುಂಬಿ ಹರಿಯುತ್ತಿದ್ದು, ಕೆರೆಗಳು ತುಂಬಿವೆ. ಮಾಂಜ್ರಾ ನದಿ ಒಳಹರಿವು ಹೆಚ್ಚಿದ್ದು ನದಿಪಾತ್ರದ ಗ್ರಾಮಗಳಲ್ಲಿ ಆತಂಕ ವ್ಯಕ್ತವಾಗಿದೆ. ನದಿ ದಂಡೆ ಮೇಲಿರುವ ಕೌಠಾ (ಬಿ), ಕೌಠಾ (ಕೆ), ಗಡಿಕುಶನೂರ, ಇಲ್ಲಾಂಪುರ, ಬಂಪಳ್ಳಿ, ಬಾಚೆಪಳ್ಳಿ, ಹೆಡಗಾಪುರ, ಮಣಿಗೆಂಪುರ ಸೇರಿದಂತೆ ಅನೇಕ ಗ್ರಾಮಗಳ ರೈತರಿಗೆ ಹಾನಿಯಾಗಿದೆ.

ನದಿ ದಂಡೆ ಮೇಲಿನ ಹೊಲಗಳಲ್ಲಿನ ಉದ್ದು, ಹೆಸರು, ಸೋಯಾ ಹಾಗೂ ಕಬ್ಬು ನೀರಿನಲ್ಲಿ ಕೊಚ್ಚಿ ಹೋಗಿದೆ. ಹೀಗೆ ಮಳೆಯಾದರೆ ಮತ್ತಷ್ಟು ಸಮಸ್ಯೆಯಾಗಲಿದೆ ಎಂದು ರೈತರು ಕಳವಳ ವ್ಯಕ್ತಪಡಿಸಿದರು.

**10 ಮನೆಗೆ ಹಾನಿ:** ನಿರಂತರ ಮಳೆಯಿಂದ ಗ್ರಾಮೀಣ ಪ್ರದೇಶದ ಮಣ್ಣಿನ ಮನೆಗಳಿಗೆ ಸಮಸ್ಯೆಯಾಗಿದೆ. ಮಂಗಳವಾರ ರಾತ್ರಿಯಿಂದ 10 ಮನೆಗಳ ಗೋಡೆ ಕುಸಿದಿದ್ದು, ಮೂರು ದಿನಗಳಲ್ಲಿ ಒಟ್ಟು 35 ಮನೆ ಗೋಡೆ ಬಿದ್ದಿವೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

### ನೇತ್ರಾವತಿ ನದಿ ದಡದಲ್ಲಿ ಮೊಸಳೆ

• ಉದಯವಾಹಿನಿ, ಉಪ್ಪಿನಂಗಡಿ

ಇಲ್ಲಿನ ಹೊಸ ಬಸ್ ನಿಲ್ದಾಣದ ಬಳಿಯ ನೇತ್ರಾವತಿ ನದಿ ಸೇತುವೆ ಬದಿಯಲ್ಲಿ ಸಂಜೆ ದೊಡ್ಡ ಗಾತ್ರದ ಮೊಸಳೆಯೊಂದು ಕಂಡು ಬಂದಿದೆ. ನೇತ್ರಾವತಿ ಸೇತುವೆಯ ಇನ್ನೊಂದು ದಡ, ಇಳಂತಿಲ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ನದಿಯ ಬದಿಯ ಮರಳ ದಿಬ್ಬದಲ್ಲಿ ಮೊಸಳೆ ವಿರಮಿಸುತ್ತಿರುವುದನ್ನು ಇಳಂತಿಲ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ, ಸಾಮಾಜಿಕ ಕಾರ್ಯಕರ್ತ ಫಯಾಜ್ ಯು.ಟಿ.ಗಮನಿಸಿದ್ದು, ಅದರ ಫೋಟೊ ಕ್ಲಿಕ್ಕಿಸಿದ್ದಾರೆ.

ಮೊಸಳೆ ಕಂಡು ಬಂದ ಸುಮಾರು 500 ಮೀ. ದೂರದಲ್ಲಿ ನೇತ್ರಾವತಿ-ಕುಮಾರಧಾರ ನದಿಗಳು ಸಂಗಮವಾಗುತ್ತಿದ್ದು, ಅಲ್ಲೇ ಇರುವ ಸಹಲಿಂಗೇಶ್ವರ ದೇವಾಲಯದ ಬಳಿಯ ಸ್ನಾನಘಟ್ಟದಲ್ಲಿ ಪಿಂಡ ಪ್ರದಾನ ಕಾರ್ಯ, ತೀರ್ಥ ಸ್ನಾನಗಳು ನಿರಂತರವಾಗಿ ನಡೆಯುತ್ತಿವೆ. ಈ ಭಾಗದಲ್ಲಿ ನದಿಗೆ ಇಳಿದು ಮೀನು ಹಿಡಿಯಲು ಬಲೆ, ಗಾಳ ಹಾಕುವುದು ಸಾಮಾನ್ಯವಾಗಿದ್ದು, ಮೊಸಳೆ ಕಂಡು ಬಂದಿರುವುದು ಹಲವರ ಆತಂಕಕ್ಕೆ ಕಾರಣವಾಗಿದೆ.

# ಅಮೆರಿಕ ಅಧ್ಯಕ್ಷನಾಗಿ ಆಯ್ಕೆಯಾದರೆ ಯುಎಫ್‌ಒ ವಿಡಿಯೋ ರಿಲೀಸ್

## ಅಮೆರಿಕದ ರಕ್ಷಣಾ ಇಲಾಖೆಯ ಕೇಂದ್ರ ಕಚೇರಿ ಪೆಂಟಗಾನ್, ಯುಎಫ್‌ಒ ಕುರಿತಾದ ಸಾಕಷ್ಟು ವಿಡಿಯೋ, ದಾಖಲೆ ಇವೆ



ಡೊನಾಲ್ಡ್ ಟ್ರಂಪ್ ಭರವಸೆ

**ವಾಷಿಂಗ್ಟನ್:** 2024ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಈ ಬಾರಿ ತಾವು ಗೆಲುವು ದಾಖಲಿಸಿ ಅಮೆರಿಕ ಅಧ್ಯಕ್ಷರಾದರೆ ಅನ್ಯಗ್ರಹ ಜೀವಿಗಳ ವಾಹನ ಎಂದು ನಂಬಲಾದ ಗುರುತಿಸಲಾಗದ ಹಾರುವ ವಸ್ತು ಕುರಿತಾದ ವಿಡಿಯೋಗಳನ್ನು ಬಹಿರಂಗ ಮಾಡೋದಾಗಿ ಅಮೆರಿಕದ ಮಾಜಿ ಅಧ್ಯಕ್ಷ ಹಾಗೂ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊ ನಾಲ್ಡ್ ಟ್ರಂಪ್ ಹೇಳಿದ್ದಾರೆ. ಇದೇ ವೇಳೆ ವೇಶ್ಯಾವಾಟಿಕೆಗೆ ಮಾನವ ಕಳ್ಳಸಾಗಣೆ ಮಾಡಿದ ಆರೋಪ ಹೊತ್ತಿರುವ ನ್ಯೂಯಾರ್ಕ್, ಫ್ಲೋರಿಡಾ ಮೂಲದ ಉದ್ಯಮಿ ಜೆಫ್ರಿ ಎಪ್ಸ್ಟೀನ್ ಕುರಿತಾದ ದಾಖಲೆಯನ್ನೂ ಬಿಡುಗಡೆ ಮಾಡೋದಾಗಿ ಟ್ರಂಪ್ ಹೇಳಿದ್ದಾರೆ.

**ಪೆಂಟಗಾನ್ ಬಳಿ ಇದೆ ಯುಎಫ್‌ಒ ಕುರಿತ ರಹಸ್ಯ ದಾಖಲೆ:** ಅಮೆರಿಕದ ರಕ್ಷಣಾ ಇಲಾಖೆಯ ಕೇಂದ್ರ ಕಚೇರಿ ಪೆಂಟಗಾನ್ ಬಳಿ ಯುಎಫ್‌ಒ ಕುರಿತಾದ ಸಾಕಷ್ಟು ವಿಡಿಯೋಗಳು ಹಾಗೂ ದಾಖಲೆ ಗಳು ಇವೆ ಎಂದು ನಂಬಲಾಗಿದೆ. ಈ ವಿಡಿಯೋಗಳ ಪೈಕಿ ಕೆಲವೇ ಕೆಲವು ವಿಡಿಯೋಗಳನ್ನ ಪೆಂಟಗಾನ್ ಬಿಡುಗಡೆ ಮಾಡಿತ್ತು. ಅಮೆರಿಕ ವಾಯು ಪಡೆಯ ಫೈಟರ್ ಜೆಟ್‌ಗಳಲ್ಲಿ ಅಳವಡಿಕೆ ಮಾಡಲಾಗಿದ್ದ ಕ್ಯಾಮರಾ ವಿಡಿಯೋಗಳು ಹಾಗೂ ಇನ್‌ಫ್ರಾರೆಡ್ ವಿಡಿ ಯೋಗಳು ಅವಾಗಿದ್ದವು. ಆದರೆ, ಪೆಂಟಗಾನ್ ಬಳಿ ಇನ್ನಷ್ಟು ಪೂರಕ ಸಾಕ್ಷ್ಯಾಧಾರಗಳು, ವಿಡಿಯೋಗಳು ಹಾಗೂ ದಾಖಲೆಗಳು ಇವೆ ಎನ್ನಲಾಗಿದೆ.

### ಭರವಸೆ ನೀಡೋದ್ರಲ್ಲಿ ಎತ್ತಿದ ಕೈ

**ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿವಾದಾತ್ಮಕ ಹಾಗೂ ಜನಪ್ರಿಯ ಹೇಳಿಕೆಗಳನ್ನ, ಭರವಸೆಗಳನ್ನ ನೀಡೋದ್ರಲ್ಲಿ ಎತ್ತಿದ ಕೈ. ಇದೀಗ ಅಂಥದ್ದೇ ಒಂದು ಭರವಸೆ ನೀಡಿರುವ ಟ್ರಂಪ್, ತಾವು ಮತ್ತೊಂದು ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾದರೆ ಯುಎಫ್‌ಒ ಕುರಿತಾದ ಎಲ್ಲಾ ರಹಸ್ಯ ವಿಡಿಯೋ ದಾಖಲೆ ಬಿಡುಗಡೆ ಮಾಡೋದಾಗಿ ಹೇಳಿದ್ದಾರೆ. ಅಮೆರಿಕದಲ್ಲಿ ಜನಜನಿತವಾಗಿರುವ ಈ ವಿಚಾರ, ಟ್ರಂಪ್ ಚುನಾವಣಾ ಅಸ್ತ್ರವಾಗಿ ಬದಲಾಗಿದೆ.**

ಅಮೆರಿಕದ ಜನರೂ ಕೂಡಾ ಯುಎಫ್‌ಒ ಹಾಗೂ ಅನ್ಯಗ್ರಹ ಜೀವಿಗಳ ಕುರಿತಾಗಿ ಸಾಕಷ್ಟು ಆಸಕ್ತಿ ಹೊಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಇದೇ ವಿಚಾರವನ್ನ ಡೊನಾಲ್ಡ್ ಟ್ರಂಪ್ ಚುನಾವಣಾ ವಿಷಯ ವಸ್ತುವನ್ನಾಗಿ ಮಾಡಿಕೊಂಡು ದಾಳ ಉರುಳಿಸಿದರಾ ಅನ್ನೋ ಅನುಮಾನಗಳೂ ವ್ಯಕ್ತ ವಾಗಿವೆ. ಈ ಕುರಿತಾಗಿ ಅಮೆರಿಕದ ಪಾಡ್‌ಕಾಸ್ಟರ್ ಲೆಕ್ಸ್ ಫ್ರಿಡ್‌ಮನ್ ಅವರ ಜೊತೆ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿದ ಡೊನಾಲ್ಡ್ ಟ್ರಂಪ್, ಏಲಿಯನ್ಸ್‌ಗಳ ಮುಖಾಮುಖಿ, ಜನರಿಗೆ ಯುಎಫ್‌ಒ ಕಂಡ ವಿಡಿಯೋಗಳನ್ನು ಬಿಡುಗಡೆ ಮಾಡೋದಾಗಿ ಹೇಳಿ ದ್ದಾರೆ.

ನೀವು ಮತ್ತೆ ಅಮೆರಿಕ ಅಧ್ಯಕ್ಷರಾದರೆ ಯುಎಫ್‌ಒ ಕುರಿತಾದ ವಿಡಿಯೋ ಬಿಡುಗಡೆ ಮಾಡೋದು ಖಚಿತವೇ ಎಂದು ಸಂದರ್ಶಕ ಕೇಳಿದಾಗ ಉತ್ತರಿಸುವ ಡೊನಾಲ್ಡ್ ಟ್ರಂಪ್, ನಾನು ಖಂಡಿತವಾಗಿಯೂ ಯುಎಫ್‌ಒ ವಿಡಿಯೋ ಹಾಗೂ ಫೋಟೋ ಬಿಡುಗಡೆ ಮಾಡುತ್ತೇನೆ ಎಂದು ಟ್ರಂಪ್ ಉತ್ತರಿಸಿದರು.

ಅಮೆರಿಕದ ಮಾಜಿ ಅಧ್ಯಕ್ಷ ಜಾನ್ ಎಫ್ ಕೆನಡಿ ಹತ್ಯೆ ಪ್ರಕರಣದ ಬಗ್ಗೆಯೂ ಈ ಪಾಡ್‌ಕಾಸ್ಟ್‌ನಲ್ಲಿ ಪ್ರಸ್ತಾಪ ಮಾಡಿದ ಡೊನಾಲ್ಡ್ ಟ್ರಂಪ್, ತಮ್ಮ ಮೇಲೆ ನಡೆದ ಹತ್ಯೆ ಯತ್ನ ಸೇರಿದಂತೆ ಹಲವು ಪ್ರಕರಣಗಳ ಕುರಿತಾದ ತನಿಖೆಗೆ ಸ್ವತಂತ್ರ್ಯ ಅಧ್ಯಕ್ಷೀಯ ಆಯೋಗ ರಚನೆ ಮಾಡೋದಾಗಿ ಹೇಳಿದರು.

ಅಷ್ಟೇ ಅಲ್ಲ, ಅಮೆರಿಕದ ಮಾಜಿ ಅಧ್ಯಕ್ಷ ಜಾನ್ ಎಫ್ ಕೆನಡಿ ಹತ್ಯೆ ಪ್ರಕರಣ ಕುರಿತಾದ ಎಲ್ಲಾ ದಾಖಲೆಗಳನ್ನೂ ಬಿಡುಗಡೆ ಮಾಡೋದಾಗಿ ಟ್ರಂಪ್ ಭರವಸೆ ನೀಡಿದ್ದಾರೆ.

ಇನ್ನು ಅಮೆರಿಕದಲ್ಲಿ ಭಾರೀ ಸದ್ದು ಮಾಡಿರುವ ಉದ್ಯಮಿ ಜೆಫ್ರಿ ಎಪ್ಸ್ಟೀನ್ ಪ್ರಕರಣದ ಕುರಿತಾಗಿಯೂ ತಮ್ಮ ಪಾಡ್‌ಕಾಸ್ಟ್‌ನಲ್ಲಿ ಪ್ರಸ್ತಾಪಿಸಿದ ಟ್ರಂಪ್, ಆತ ಒಳ್ಳೆಯ ಮಾರಾಟಗಾರ. ಆತನ ಬಳಿ ಹಲವು ದ್ವೀಪಗಳೇ ಇದ್ದವು. ಬಹಳಷ್ಟು ಶ್ರೀಮಂತರು ಕೆಲವು ದ್ವೀಪಗಳ ಒಡೆತನ ಬಯಸಿದ್ದರು, ಆದರೆ ನನಗೆ ಬೇಕಿರಲಿಲ್ಲ ಎಂದು ಹೇಳಿದರು.

# ಮೊಬೈಲ್ ಬಳಕೆಯಿಂದ ಬ್ರೈನ್ ಕ್ಯಾನ್ಸರ್ ಬರಲ್ಲ



**ವಿಶ್ವಸಂಸ್ಥೆ:** ಅತಿಯಾದ ಮೊಬೈಲ್ ಬಳಕೆ ಮಾಡುವುದರಿಂದ ಮೆದುಳಿನ ಕ್ಯಾನ್ಸರ್ ಬರುತ್ತದೆ ಎಂದು ಯುವ ಜನತೆಯಲ್ಲಿ ಉಂಟಾಗಿದ್ದ ಭಯವನ್ನು ಹೊಸ ಅಧ್ಯಯನದ ಸಂಶೋಧನಾ ವರದಿ ದೂರ ಮಾಡಿದೆ. ಮೊ ಬೈಲ್ ಫೋನ್‌ಗಳನ್ನು ಬಳಸುವುದರಿಂದ ಮೆದುಳಿನ ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುತ್ತದೆ ಎಂಬುದಕ್ಕೆ ಇಲ್ಲಿ ಯಾವುದೇ ಪುರಾವೆಗಳಿಲ್ಲ. ಪಂಚದಾದ್ಯಂತ ಅಧ್ಯಯನಗಳನ್ನು ನಡೆಸಿರುವ ವಿಶ್ವ ಆರೋಗ್ಯ ಸಂಸ್ಥೆಯೂ ವೈರ್ಲೆಸ್ ತಂತ್ರಜ್ಞಾನದ ವ್ಯಾಪಕ ಬಳಕೆಯ ಹೊರತಾಗಿಯೂ, ಮೆದುಳಿನ ಕ್ಯಾನ್ಸರ್ ಪ್ರಕರಣಗಳಲ್ಲಿ ಏರಿಕೆ ಕಂಡುಬಂದಿಲ್ಲ ಎಂದು ಸ್ಪಷ್ಟಪಡಿಸಿದೆ. ಎನ್ವಿರಾನೆಂಟ್ ಇಂಟರ್ನ್ಯಾಷನಲ್ ಜನರ ಲ್‌ನಲ್ಲಿ ಪ್ರಕಟವಾದ ಈ ಸಂಶೋಧನೆಯು ಆಗಾಗ್ಗೆ ದೀರ್ಘ ಫೋನ್ ಕರೆಗಳನ್ನು ಮಾಡುವ ಅಥವಾ ಒಂದು ದಶಕದಿಂದ ಮೊಬೈಲ್ ಫೋನ್‌ಗಳನ್ನು ಬಳ ಸುತ್ತಿರುವ ಜನರ ಬಗ್ಗೆ ಅಧ್ಯಯನ ನಡೆಸಿ ವರದಿ ಬಿಡುಗಡೆ ಮಾಡಿದೆ. ಇದರ ಪ್ರಕಾರ, 1994 ಮತ್ತು 2022 ರ ನಡುವೆ ನಡೆಸಿದ 63 ಅಧ್ಯಯನಗಳನ್ನು ವಿಶ್ಲೇಷಿಸಿದೆ. ಸಂಶೋಧನಾ ತಂಡವು ಆಸ್ಟ್ರೇಲಿಯಾದ ವಿಕಿರಣ ಸಂರಕ್ಷಣಾ ಪ್ರಾಧಿಕಾರದ ಪ್ರತಿನಿಧಿಗಳು ಸೇರಿದಂತೆ 10 ವಿವಿಧ ದೇಶಗಳ 11 ತಜ್ಞರನ್ನು ಒಳಗೊಂಡಿದೆ. ರೇಡಿಯೊಫ್ರೀಕ್ವೆನ್ಸಿಯ ಪರಿಣಾಮಗಳ ಮೇಲೆ ಅಧ್ಯಯನವು ಕೇಂದ್ರೀಕರಿಸಿದೆ.

ಇದನ್ನು ಮೊಬೈಲ್ ಫೋನ್‌ಗಳಲ್ಲಿ ಮಾತ್ರವಲ್ಲದೆ ಟೆಲಿವಿಷನ್‌ಗಳು, ಬೇಬಿ ಮಾನಿಟರ್ಗಳು ಮತ್ತು ರಾಡಾರ್ನಂತಹ ಸಾಧನಗಳಲ್ಲಿಯೂ ಬಳಸಲಾಗುತ್ತದೆ. ನ್ಯೂಜಿಲೆಂಡ್ನ ಆಕ್ಲೆಂಡ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನದ ಸಹ-ಲೇಖಕ ಮತ್ತು ಕ್ಯಾನ್ಸರ್ ಸಾಂಕ್ರಾಮಿಕ ರೋಗಶಾಸದ ಪ್ರಾಧ್ಯಾಪಕ ಮಾರ್ಕ್ ಎಲ್ವುಡ್ ಪ್ರಕಾರ, ಅಧ್ಯಯನ ಮಾಡಿದ ಯಾವುದೇ ಪ್ರಮುಖ ಕ್ಷೇತ್ರಗಳು ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸಲಿಲ್ಲ ಎಂಬ ಆತಂಕವನ್ನು ದೂರ ಮಾಡಿದೆ. ಸಂಶೋಧನೆಯಲ್ಲಿ ವಯಸ್ಕರು ಮತ್ತು ಮಕ್ಕಳಲ್ಲಿ ಮೆದುಳಿನ ಮೇಲೆ ಪರಿಣಾಮ ಬೀರುವ ವಿವಿಧ ರೀತಿಯ ಕ್ಯಾನ್ಸರ್ಗಳನ್ನು ಪರೀಕ್ಷಿಸಿದೆ, ಜೊತೆಗೆ ಪಿಟ್ಯುಟರಿ ಗ್ರಂಥಿ, ಲಾಲಾರಸ ಗ್ರಂಥಿಗಳು ಮತ್ತು ಲ್ಯುಕೇಮಿಯಾ ಕ್ಯಾನ್ಸರ್ಗಳನ್ನು ಒಳಗೊಂಡಿದೆ. ಇದು ಮೊಬೈಲ್ ಬಳಕೆ, ಬೇಸ್ ಸ್ಟೇಷನ್‌ಗಳು, ಟ್ರಾನ್ಸಿಟರ್‌ಗಳು ಮತ್ತು ಕೆಲಸದ ಪರಿಸರದಲ್ಲಿ ಒಡ್ಡಿಕೊಳ್ಳುವಿಕೆಗೆ ಸಂಬಂಧಿಸಿದ ಸಂಭಾವ್ಯ ಅಪಾಯಗಳನ್ನು ಸಹ ನೋಡಿದೆ. ಇತರ ರೀತಿಯ ಕ್ಯಾನ್ಸರ್‌ಗೆ ಸಂಬಂಧಿಸಿದ ಸಂಶೋಧನೆಗಳನ್ನು ಪ್ರತ್ಯೇಕವಾಗಿ ವರದಿ ಮಾಡಲಾಗುತ್ತದೆ. ಸಂವಾದದಲ್ಲಿ ಬರೆದಿರುವ ಅಧ್ಯಯನದ ಸಂಶೋಧಕರಾದ ಸಾರಾ ಲೌಗ್ರನ್ ಮತ್ತು ಕೆನ್ ಕರಿಪಿಡಿಸ್ ಪ್ರಕಾರ, ಒಟ್ಟಾರೆಯಾಗಿ, ಫಲಿತಾಂಶಗಳು ತುಂಬಾ ಭರವಸೆ ನೀಡುತ್ತವೆ.

**ನಮ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸುರಕ್ಷತಾ ಮಿತಿಗಳು ರಕ್ಷಣಾತಕವಾಗಿವೆ. ಮೊಬೈಲ್‌ಗಳು ಈ ಸುರಕ್ಷತಾ ಮಿತಿಗಳಿಗಿಂತ ಕಡಿಮೆ ಮಟ್ಟದ ರೇಡಿಯೊ ತರಂಗಗಳನ್ನು ಹೊರಸೂಸುತ್ತವೆ ಮತ್ತು ಇವುಗಳಿಗೆ ಒಡ್ಡಿಕೊಳ್ಳುವುದರಿಂದ ಮಾನವನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂದು ಹೇಳಿದ್ದಾರೆ. ಹಿಂದಿನ ಸಂಶೋಧನೆ ಪ್ರಕಾರ, ಇತರ ಅಂತರಾಷ್ಟ್ರೀಯ ಆರೋಗ್ಯ ಸಂಸ್ಥೆಗಳು ಆರೋಗ್ಯ ಸಮಸ್ಯೆಗಳಿಗೆ ಮೊಬೈ ಲ್‌ನ ವಿಕಿರಣವನ್ನು ಸಂಪರ್ಕಿಸುವ ಯಾವುದೇ ನಿರ್ಣಾಯಕ ಪುರಾವೆಗಳಿಲ್ಲ ಎಂದು ಹಿಂದೆ ಹೇಳಿವೆ, ಆದರೂ ಅವರು ಹೆಚ್ಚಿನ ಸಂಶೋಧನೆಗೆ ಶಿಫಾರಸು ಮಾಡಿದ್ದಾರೆ.**

# ಅಸ್ಸಾಂನಲ್ಲಿ 22 ಸಾವಿರ ಕೋಟಿ ರೂ. ಆನ್‌ಲೈನ್ ಸ್ಟಾಕ್ ಮಾರುಕಟ್ಟೆ ವಂಚನೆ ಪತ್ತೆ

**ಗುವಾಹಟಿ:** ಬರೊಬ್ಬರಿ 22 ಸಾವಿರ ಕೋಟಿ ರೂ.ಗಳ ಆನ್‌ಲೈನ್ ಸ್ಟಾಕ್ ಮಾರುಕಟ್ಟೆ ವಂಚನೆ ಪ್ರಕರಣವನ್ನು ಅಸ್ಸಾಂ ಪೊಲೀಸರು ಬಯಲಿಗೆಳೆದಿದ್ದಾರೆ. ನರ ಹಣವನ್ನು ದ್ವಿಗುಣಗೊಳಿಸುವುದಾಗಿ ಹೇಳಿಕೊಂಡು ಆನ್‌ಲೈನ್ ಸ್ಟಾಕ್ ಮಾರುಕಟ್ಟೆ ಹೂಡಿಕೆಯನ್ನು ವಂಚಿಸಿದ ದಲ್ಲಾಳಿಗಳು ಒಳಗೊಂಡ 22,000 ಕೋಟಿಯ ಬಹತ್ ಹಣಕಾಸು ಹಗರಣವನ್ನು ಅಸ್ಸಾಂ ಪೊಲೀಸರು ಬಯಲಿಗೆಳೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಪ್ರಕರಣದಲ್ಲಿ ದಿಬ್ರುಗಢ್‌ನ 22 ವರ್ಷದ ಆನ್‌ಲೈನ್ ವ್ಯಾಪಾರಿ ವಿಶಾಲ್ ಫುಕನ್ ಮತ್ತು ಗುವಾಹಟಿಯ ಸ್ವಪ್ನಿಲ್ ದಾಸ್ ಎಂಬ ಇಬ್ಬರು ವ್ಯಕ್ತಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಆದಾಗ್ಯೂ, ರಾಜ್ಯದಲ್ಲಿ ವ್ಯಾಪಿಸಿರುವ ಹಗರಣದಲ್ಲಿ ಇನ್ನೂ ಹಲವಾರು ಬಂಧನಗಳನ್ನು ನಿರೀಕ್ಷಿಸಲಾಗಿದೆ.

ತನ್ನ ಶ್ರೀಮಂತ ಜೀವನಶೈಲಿಯನ್ನು ಬಳಸಿಕೊಂಡು ಜನರಿಗೆ ಆಮಿಷವೊಡ್ಡಿದ ಫುಕನ್, ತನ್ನ ಹೂಡಿಕೆದಾರರಿಗೆ 60 ದಿನಗಳಲ್ಲಿ ತಮ ಹೂಡಿಕೆಯ ಮೇಲೆ ಶೇ.30 ಲಾಭವನ್ನು ನೀಡುವುದಾಗಿ ಭರವಸೆ ನೀಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ನಾಲ್ಕು ನಕಲಿ ಕಂಪನಿಗಳನ್ನು ಸ್ಥಾಪಿಸಿ, ಅಸ್ಸಾಮಿ ಚಲನಚಿತ್ರೋದ್ಯಮದಲ್ಲಿ ಹೂಡಿಕೆ ಮಾಡಿ ಹಲವು ಆಸ್ತಿಗಳನ್ನು ಸಂಪಾದಿಸಿದ್ದ ಎಂದು ತಿಳಿದುಬಂದಿದೆ. ದಿಬ್ರುಗಢ್‌ನಲ್ಲಿರುವ ಅವರ ಮನೆ ನಿವಾಸದ ಮೇಲೆ ಪೊಲೀಸರು ದಾಳಿ ನಡೆಸಿದ್ದು, ಮುಟ್ಲಿ-ಕೋಟಿ ಹಗರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಪೊಲೀಸರು ಇದೀಗ ಅಸ್ಸಾಮಿ ನತ್ಯ ಸಂಯೋಜಕಿ ಸುಮಿ ಬೋರಾ ಅವರನ್ನು ಹುಡುಕುತ್ತಿದ್ದಾರೆ, ಅವರು ಫುಕಾನ್‌ನ ನೆಟ್‌ವರ್ಕ್‌ಗೆ ಸಂಪರ್ಕ ಹೊಂದಿದ್ದಾರೆಂದು ವರದಿಯಾಗಿದೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಮೋಸದ ಆನ್‌ಲೈನ್ ಸ್ಟಾಕ್ ಮಾರುಕಟ್ಟೆ ಹೂಡಿಕೆಗಳನ್ನು ತಪ್ಪಿಸಲು ಜನರನ್ನು ಒತ್ತಾಯಿಸಿದರು, ಕನಿಷ್ಠ ಪ್ರಯತ್ನದಿಂದ ಹಣವನ್ನು ದ್ವಿಗುಣಗೊಳಿಸುವ ಹಕ್ಕುಗಳು ಸಾಮಾನ್ಯವಾಗಿ ಮೋಸದಿಂದ ಕೂಡಿರುತ್ತವೆ ಎಂದು ಹೇಳಿದ್ದರು. ಈ ಆನ್‌ಲೈನ್ ವ್ಯಾಪಾರ ಸಂಸ್ಥೆಗಳ ಮೂಲಕ ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿಕೆ ಮಾಡುವ ಯಾವುದೇ ವ್ಯವಸ್ಥೆ ಇಲ್ಲ ಎಂದು ನಾನು ಜನರಿಗೆ ಹೇಳಲು ಬಯಸುತ್ತೇನೆ. ವಂಚಕರು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ವಂಚಕರಿಂದ ದೂರವಿರಿ ಎಂದು ನಾನು ಜನರಿಗೆ ಮನವಿ ಮಾಡುತ್ತೇನೆ.

ಇದೀಗ ಅಕ್ರಮ ದಲ್ಲಾಳಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ರಾಜ್ಯದಲ್ಲಿನ ಸಂಪೂರ್ಣ ದಂಧೆಯನ್ನು ಭೇದಿಸಲು ನಾವು ಪ್ರಯತ್ನಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ.

ಸೆಬಿ, ಆರ್‌ಬಿಐ ಮಾರ್ಗಸೂಚಿಗಳನ್ನು ಅನುಸರಿಸದೆ ಹಲವಾರು ಆನ್‌ಲೈನ್ ಟ್ರೇಡಿಂಗ್ ಸಂಸ್ಥೆಗಳು ರಾಜ್ಯದಲ್ಲಿ ವ್ಯವಹಾರ ನಡೆಸುತ್ತಿವೆ ಎಂಬ ವರದಿಗಳ ನಂತರ ಮುಖ್ಯಮಂತ್ರಿಯವರ ಈ ಹೇಳಿಕೆ ಬಂದಿದೆ.

# ಸರ್ಕಾರಿ ವೈದ್ಯೆಗೆ ಲೈಂಗಿಕ ಕಿರುಕುಳ ಆರೋಪ; ಪ್ರಕರಣ ದಾಖಲು

**ಅಮೃತಸರ:** ಇಲ್ಲಿನ ಸರ್ಕಾರಿ ಗುರುನಾನಕ್ ದೇವ್ ವೈದ್ಯಕೀಯ ಕಾಲೇಜು, ಆಸ್ಪತ್ರೆಯ ವೈದ್ಯೆಯೊಬ್ಬರು ಕರ್ತವ್ಯ ಮುಗಿಸಿ ಹಾಸ್ಟೆಲ್ ಕಡೆಗೆ ಹೋಗುತ್ತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಮಂಗಳವಾರ ತಡರಾತ್ರಿ ಘಟನೆ ನಡೆದಿದೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾನು ಕೆಲಸ ಮುಗಿಸಿಕೊಂಡು ಹಾಸ್ಟೆಲ್ ಕಡೆಗೆ ಹೋಗುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಅಪರಿ ಚಿತ ವ್ಯಕ್ತಿಯೊಬ್ಬ ನನ್ನನ್ನು ಅಡ್ಡಗಟ್ಟಿ ನನ್ನ ಬಳಿಯಿಂದ ಪರ್ಸ್ ಕಸಿದುಕೊಂಡನು. ಬಳಿಕ ಹತ್ಯೆ ಮಾಡುವುದಾಗಿ ಬೆದರಿಸಿ, ನನ್ನ ಅಂಗಾಂಗಗಳನ್ನು ಮುಟ್ಟಿ ಅನುಚಿತವಾಗಿ ವರ್ತಿಸಿದನು' ಎಂದು ದೆಹಲಿ ಮೂಲದ ಸಂತ್ರಸ್ತೆ ಆರೋಪಿಸಿದ್ದಾರೆ. ಸಿನಿಮಾ ಘಟನಾ ಸ್ಥಳದಲ್ಲಿರುವ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದ್ದು, ಆರೋಪಿ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಅಮೃತಸರ ಸಹಾಯಕ ಪೊಲೀಸ್ ಕಮಿಷನರ್ ಮಣಿಂದರ್‌ಪಾಲ್ ಸಿಂಗ್ ಹೇಳಿದ್ದಾರೆ.

ಆಗಸ್ಟ್ 9ರಂದು ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು, ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ, ಹತ್ಯೆ ಮಾಡಲಾಗಿತ್ತು. ಘಟನೆ ಖಂಡಿಸಿ ಪಶ್ಚಿಮ ಬಂಗಾಳದಲ್ಲಿ ಆಕ್ರೋಶ ಭುಗಿಲೆದ್ದಿತ್ತು. ಇದೀಗ ಪಂಜಾಬ್‌ನ ಅಮೃತಸರದಲ್ಲಿ ಲೈಂಗಿಕ ಕಿರುಕುಳ ಪ್ರಕರಣ ದಾಖಲಾಗಿರುವುದು ರಾಷ್ಟ್ರವ್ಯಾಪಿ ಆಕ್ರೋಶಕ್ಕೆ ಕಾರಣವಾಗಿದೆ.

# ಎಲೆಕ್ಟ್ರಿಕಲ್ ವಾಹನಗಳ ತಾಣವಾಗಿ ಭಾರತ: ಕೇಂದ್ರ ಸಚಿವ ಕುಮಾರಸ್ವಾಮಿ

**ನವದೆಹಲಿ:** ಮುಂದಿನ 2070ರ ವೇಳೆಗೆ ಶೂನ್ಯ ಹೊಗೆ ಹೊರಸೂಸುವಿಕೆಯನ್ನು ಸಾಧಿಸುವ ಉದ್ದೇಶವನ್ನು ಭಾರತ ಹೊಂದಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ಅಸೋಚಾಮ್ ಆಯೋಜಿಸಿದ್ದ ವಿಕಸಿತ ಭಾರತಕ್ಕಾಗಿ ಎಲೆಕ್ಟ್ರಿಕ್ ಮೊಬಿಲಿಟಿ ಹಬಾಗಿ ಭಾರತವನ್ನು ನಿರ್ಮಿಸುವ ಕುರಿತ ರಾಷ್ಟ್ರೀಯ ಸಮೇಳನದಲ್ಲಿ ಮಾತನಾಡಿದ ಅವರು, ಎಲೆಕ್ಟ್ರಿಕ್ ಚಲನಶೀಲತೆಯನ್ನು ಅಳವಡಿಸಿಕೊಳ್ಳುವುದು, ಭಾರತದ ಸಾರಿಗೆ ವಲಯವನ್ನು ಆಧುನೀಕರಿಸುವ ನಿಟ್ಟಿನಲ್ಲಿ ಪರಿವರ್ತನೆಯ ಹೆಜ್ಜೆಯಾಗಿದೆ ಎಂದಿದ್ದಾರೆ.



ಇದರಿಂದ ಪರಿಸರ ಪ್ರಯೋಜನಗಳನ್ನು ಮಾತ್ರ ವಲ್ಲದೆ, ಈ ಬದಲಾವಣೆಯು ಗಮನಾರ್ಹ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ಸಾಂಪ್ರದಾಯಿಕ ಇಂಧನಗಳ ಮೇಲೆ ದೇಶದ ಅವಲಂಬನೆಯನ್ನು ಕಡಿಮೆ ಮಾಡುತ್ತದೆ. ಸ್ವಚ್ಛವಾದ, ಹಸಿರು ಪರಿಸರ ಭವಿಷ್ಯಕ್ಕೆ ಕೊಡುಗೆ ನೀಡುತ್ತದೆ. ಈ ಉಪಕ್ರಮಗಳು ಸುಸ್ಥಿರ ಅಭಿವೃದ್ಧಿ ಮತ್ತು ತಾಂತ್ರಿಕ ಆವಿಷ್ಕಾರದಲ್ಲಿ ಜಾಗತಿಕ ನಾಯಕನಾಗಿ ಭಾರತದ ಸ್ಥಾನವನ್ನು ಬಲಪಡಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಭಾರೀ ಕೈಗಾರಿಕೆಗಳ ಸಚಿವಾಲಯವು ಭಾರತವನ್ನು ವಿದ್ಯುತ್ ಚಲನಶೀಲತೆಯ ಜಾಗತಿಕ ಕೇಂದ್ರವನ್ನಾಗಿ ಮಾಡಲು ದಣಿವರಿಯದೆ ಕೆಲಸ ಮಾಡುತ್ತಿದೆ. ವಿದ್ಯುತ್ ಚಾಲಿತ ವಾಹನಗಳ (ಇವಿ) ಪರಿಸರ ವ್ಯವಸ್ಥೆಯನ್ನು ಮುಂದುವರಿಸಲು ಕೈಗಾರಿಕಾ ಸಚಿವಾಲಯ ಅಚಲ ಬದ್ಧತೆಯನ್ನು ಹೊಂದಿದೆ ಎಂದು ಒತ್ತಿ ಹೇಳಿದರು. ಸ್ಥಳೀಯ ಉತ್ಪಾದನೆಯನ್ನು ಉತ್ತೇಜಿಸುವುದು ಮಾತ್ರವಲ್ಲದೆ, ರಾಷ್ಟ್ರದಾದ್ಯಂತ ಸುಸ್ಥಿರ ಬೆಳವಣಿಗೆಯನ್ನು ಚಾಲನೆ ಮಾಡುವತ್ತ ಗಮನಹರಿಸಲಾಗಿದೆ.

ಈ ಪ್ರಯತ್ನಗಳು ಪ್ರಧಾನಿ ನರೇಂದ್ರ ಮೋದಿ ಅ ವರ ಆತನಿರ್ಭರ ಭಾರತ ಮತ್ತು ವಿಕ್ಷಿತ ಭಾರತ 20 47 ಉಪಕ್ರಮಗಳ ದೂರದೃಷ್ಟಿಯ ಗುರಿಗಳೊಂದಿಗೆ ಪರಿಪೂರ್ಣ ಹೊಂದಾಣಿಕೆಯಲ್ಲಿವೆ ಎಂದು ಅವರು ತಿಳಿಸಿದರು. ಅಸೋಚಾಮ್ನ ಪ್ರಧಾನ ಕಾರ್ಯದರ್ಶಿ ದೀಪಕ್ ಸೂದ್ ಮತ್ತು ಗ್ರೀನ್ ಮೊಬಿಲಿಟಿಯ ರಾಷ್ಟ್ರೀಯ ಮಂಡಳಿಯ ಅಧ್ಯಕ್ಷ ನಿಶಾಂತ್ ಆರ್ಯ ಸೇರಿದಂತೆ ಪ್ರಮುಖ ಉದ್ಯಮದ ಪ್ರತನಿಧಿಗಳು ಸಮೇಳನದಲ್ಲಿ ಭಾಗವಹಿಸಿದ್ದರು.

> **ಸುಸ್ಥಿರ ಸಾರಿಗೆ ಮತ್ತು ಆರ್ಥಿಕ ಬೆಳವಣಿಗೆಯತ್ತ ದೇಶದ ಪ್ರಯಾಣವನ್ನು ಮತ್ತಷ್ಟು ವೇಗಗೊಳಿಸುವ ಕಾರ್ಯತಂತ್ರಗಳ ಕುರಿತು ಚರ್ಚಿಸಲು ಮತ್ತು ಸಹಯೋಗಿಸಲು ಪಾಲುದಾರರಿಗೆ ಈ ಸಮ್ಮೇಳನವು ನಿರ್ಣಾಯಕ ವೇದಿಕೆಯಾಗಿದೆ**
> – ಕುಮಾರಸ್ವಾಮಿ, ಕೇಂದ್ರ ಸಚಿವ

# ತಮಿಳರ ಕ್ಷಮೆ ಕೋರಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ



**ಚೆನ್ನೈ:** ರಾಮೇಶ್ವರಂ ಕಫ ಸ್ಫೋಟ ಪ್ರಕರಣಕ್ಕೂ ತಮಿಳರಿಗೂ ಸಂಬಂಧವಿದೆ ಎಂಬ ಹೇಳಿಕೆ ನೀಡಿ ದ್ದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ತಮಿಳರ ಕ್ಷಮೆ ಯಾಚಿಸಿದ್ದಾರೆ.ಈ ಪ್ರಕರಣ ರದ್ದುಗೊಳಿಸುವಂತೆ ಶೋಭಾ ಪರವಾಗಿ ಮದ್ರಾಸ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಈ ಪ್ರಕರಣ ನಿನ್ನೆ ಮತ್ತೆ ವಿಚಾರಣೆಗೆ ಬಂದಿತ್ತು. ಕೋರ್ಟ್‌ನಲ್ಲಿ ಶೋಭಾ ಪರವಾದ ಮಂಡಿಸಿದ ವಕೀಲರು, ಬೆಂಗಳೂರು ರಾಮೇಶ್ವರಂ ಕೆ ಬಾಂ ಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಷಮೆ ಯಾಚಿಸುವುದಾಗಿ ಅಫಿಡವಿಟ್ ಸಲ್ಲಿಸಲಾಗಿದೆ ಎಂದರು.

ಬಾಂಬ್ ಸ್ಫೋಟ ಟದಲ್ಲಿ ತಮಿಳರು ಭಾಗಿಯಾಗಿದ್ದಾರೆ ಎಂಬ ಹೇಳಿಕೆಯನ್ನು ತಮಿಳರ ಭಾವನೆಗಳಿಗೆ ಧಕ್ಕೆ ತರುವ ಉದ್ದೇಶದಿಂದ ಮಾಡ ಲಾಗಿಲ್ಲ ಎಂದು ಹೇಳಿದ್ದಾರೆ.

ಇದಲ್ಲದೆ, ಅವರ ಹೇಳಿಕೆಯು ತಮಿಳರನ್ನು ನೋಯಿಸಿದೆ ಎಂದು ಅವರು ಅರ್ಥ ಮಾಡಿಕೊಂಡಿದ್ದಾರೆ ಮತ್ತು ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಕ್ಷಮೆ ಯಾಚಿಸಿದ್ದಾರೆ. ಹಾಗೂ ತಮಿಳರ ಇತಿಹಾಸ, ಸಂಸ್ಕೃತಿ ಮತ್ತು ಸಂಪ್ರದಾಯದ ಬಗ್ಗೆ ಅವರಿಗೆ ಹೆಚ್ಚಿನ ಗೌರವವಿದೆ ಎಂದು ಅಫಿಡವಿಟ್‌ನಲ್ಲಿ ತಿಳಿಸ ಲಾಗಿದೆ. ಇದೇ ವೇಳೆ ಸಚಿವೆ ಶೋಭಾ ಅವರ ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಯಾಚಿಸುವುದಾಗಿ ಅವರ ಪರವಾಗಿ ಸಲ್ಲಿಸಿರುವ ಅಫಿಡವಿಟ್ನಲ್ಲಿ ತಿಳಿಸಲಾಗಿದೆ. ಇದಾದ ಬಳಿಕ ತಮಿಳುನಾಡಿನ ಮುಖ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು, ಸರ್ಕಾರದಿಂದ ಸೂಕ್ತ ಸೂಚನೆ ಪಡೆದು ತಿಳಿಸುವುದಾಗಿ ಹೇಳಿದರು.

ನಂತರ ನ್ಯಾಯಾಧೀಶರು ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸೆ.5 ರಂದು ನಡೆಸುವುದಾಗಿ ಹೇಳಿ ಪ್ರಕರಣವನ್ನು ಮುಂದೂಡಿದರು. ಕರ್ನಾಟಕದ ಬೆಂಗಳೂರಿನ ರಾಮೇಶ್ವರಂ ಕೆಯ ಬಾಂಬ್ ಸ್ಫೋಟಕ್ಕೂ, ತಮಿಳುನಾಡಿನ ವ್ಯಕ್ತಿಗೂ ಸಂಬಂಧವಿದೆ ಎಂದು ಕೇಂದ್ರ ರಾಜ್ಯ ಸಚಿವೆ ಶೋ ಭಾ ಕರಂದ್ಲಾಜೆ ಹೇಳಿದ್ದರು. ನಂತರ ಈ ಸಂಬಂಧ ಡಿಎಂಕೆಯಿಂದ ತ್ಯಾಗರಾಜನ್ ನೀಡಿದ ದೂರಿನ ಆಧಾರದ ಮೇಲೆ ಶೋಭಾ ಕರಂದ್ಲಾಜೆ ವಿರುದ್ಧ ಮಧುರೈನಲ್ಲಿ ಕೋಮುಗಲಭೆ ಪ್ರಚೋದನೆ, ಸಾರ್ವಜನಿಕ ಶಾಂತಿ ಕದಡುವುದು ಸೇರಿದಂತೆ 4 ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

# ಮಾನಸಿಕವಾಗಿ ಮೋದಿ ಸೋತಿದ್ದಾರೆ, ಸರ್ಕಾರ ಪತನ

**ಜಮ್ಮು:** ಲೋಕಸಭಾ ಚುನಾವಣೆ ಬಳಿಕ ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ಕಳೆದುಕೊಂಡಿದ್ದಾರೆ. ಅವರ ಸರ್ಕಾರ ಉರುಳುವ ಸಮಯ ದೂರವಿಲ್ಲ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಬನ್ನಿಹಾಳ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಂಗಾಲ್ದಾನ್‌ನಲ್ಲಿ ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಅವರ ಕಾರ್ಪೊರೇಟ್ ಗೆಳೆಯರು ಕೇಂದ್ರ ಸರ್ಕಾರವನ್ನು ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.


ನಿರುದ್ಯೋಗ ಹೆಚ್ಚಳ ಕುರಿತಂತೆ ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ರಾಹುಲ್, ಇಬ್ಬರು ಬಿಲಿಯನೇರ್‌ಗಳಿಗಾಗಿ ಕೆಲಸ ಮಾಡುತ್ತಿರುವ ಕೇಂದ್ರ ಸರ್ಕಾರವು ಜಿಎಸ್‌ಟಿ ಜಾರಿ ಮತ್ತು ನೋಟು ಅಮಾನೀಕರಣ ಮಾಡಿದ್ದರಿಂದ ಸಣ್ಣ ಉದ್ದಿಮೆಗಳಿಗೆ ಮಾರಕವಾಯಿತು ಎಂದು ದೂರಿದ್ದಾರೆ. ಮೋದಿಯವರ ಕಾರ್ಪೊರೇಟ್ ಗೆಳೆಯರಾದ ಅಂಬಾನಿ ಮತ್ತು ಅದಾನಿ ಹೆಸರು ಹೇಳಬಾರದು ಎಂದು ನನ್ನನ್ನು ಒತ್ತಾಯಿಸಲಾಗಿದೆ. ಹಾಗಾಗಿ, ಎ1, ಎ2 ಎಂದು ಅವರನ್ನು ಸಂಬೋಧಿಸುತ್ತಿದ್ದೇನೆ. ಈ ಸರ್ಕಾರವು 'ನಾವಿಬ್ಬರು ನಮ್ಮವರಿಬ್ಬರು' ಎಂಬಂತಾಗಿದೆ. ಈ ನಾಲ್ವರು ಸರ್ಕಾರ ನಡೆಸುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಇಬ್ಬರು ಬಿಲಿಯನೇರ್‌ಗಳ ಅನುಕೂಲಕ್ಕಾಗಿ ರದ್ದು ಮಾಡಿ, ರಾಜ್ಯದ ಸ್ಥಾನಮಾನವನ್ನು ಕಸಿಯಲಾಯಿತು' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ದೇಶದಲ್ಲೇ ಜಮ್ಮು ಮತ್ತು ಕಾಶ್ಮೀರವು ಅತ್ಯಧಿಕ ನಿರುದ್ಯೋಗ ದರವನ್ನು ಹೊಂದಿದೆ. ಇಲ್ಲಿನ ಯುವಕರಿಗಾಗಿ ಉದ್ಯೋಗ ಸೃಷ್ಟಿಗೆ ಮೋದಿ ಸರ್ಕಾರ ಏನನ್ನೂ ಮಾಡಿಲ್ಲ ಎಂದು ಹೇಳಿದ್ದಾರೆ.

# 30 ಅಧಿಕಾರಿಗಳಿಗೆ ಕಿಮ್ ಜಾಂಗ್ ಉನ್ ಮರಣ ದಂಡನೆ

## ಉತ್ತರ ಕೊರಿಯಾದಲ್ಲಿ ಜುಲೈ ತಿಂಗಳಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ ಸಾವಿರಾರು ಸಾವು

**ಸೋಲ್:** ಅನಾಹುತಕಾರಿ ಪ್ರವಾಹ ಮತ್ತು ಭೂಕುಸಿತ ತಡೆಯಲು ವಿಫಲರಾಗಿ 'ಕರ್ತವ್ಯ ಲೋಪ' ಎಸಗಿದ್ದಕ್ಕಾಗಿ ಸುಮಾರು 30 ಅಧಿಕಾರಿಗಳಿಗೆ ಮರಣದಂಡನೆ ವಿಧಿಸಲು ಉತ್ತರ ಕೊರಿಯಾ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಆದೇಶಿಸಿದ್ದಾರೆ ಎಂದು ದಕ್ಷಿಣ ಕೊರಿಯಾದ ವಿವಿಧ ಮಾಧ್ಯಮಗಳು ವರದಿ ಮಾಡಿವೆ. ಉತ್ತರ ಕೊರಿಯಾದ ಹಲವೆಡೆ ಉಂಟಾದ ಪ್ರವಾಹ ಮತ್ತು ಭೂಕುಸಿತದಿಂದ ಅಂದಾಜು ಸಾವಿರ ಮಂದಿ ಜೀವ ಕಳೆದುಕೊಂಡಿದ್ದಾರೆ.

ಇತ್ತೀಚಿನ ಪ್ರವಾಹದಿಂದ ಉಂಟಾದ ಜೀವ ಹಾನಿ ಗಳ 'ಒಪ್ಪಿಕೊಳ್ಳಲಾಗದ ನಷ್ಟಕ್ಕೆ ಹೊಣೆಗಾರರಾದವರ ಮೇಲೆ ಕಠಿಣ ಶಿಕ್ಷೆ ವಿಧಿಸಲು ಕಿಮ್ ಜಾಂಗ್ ಉನ್ ಸೂಚನೆ ನೀಡಿದ್ದಾರೆ ಎಂದು ಉತ್ತರ ಕೊರಿಯಾದ ಅಧಿಕಾರಿಯೊಬ್ಬರ ಹೇಳಿಕೆ ಉಲ್ಲೇಖಿಸಿ ದಕ್ಷಿಣ ಕೊರಿಯಾದ ಚೊಸುನ್ ಟಿವಿ ವರದಿ ಮಾಡಿದೆ.



ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ, ಕರ್ತವ್ಯ ಲೋಪ ಆರೋಪಗಳನ್ನು ಹೊರಿಸಲಾಗಿದ್ದು, ಕಳೆದ ತಿಂಗಳೇ ಮರಣ ದಂಡನೆ ಜಾರಿಯಾಗಿದೆ ಎಂದು ಹೇಳಲಾಗಿದೆ. ಪ್ರವಾಹಪೀಡಿತ ಪ್ರದೇಶದಲ್ಲಿನ 20-30 ಅಧಿಕಾರಿಗಳನ್ನು ಕಳೆದ ತಿಂಗಳು ಏಕಕಾಲದಲ್ಲಿ ಮರಣದಂಡನೆಗೆ ಗುರಿಪಡಿಸಲಾಗಿದೆ ಎಂದು ಅಧಿಕಾರಿ ಹೇಳಿರುವುದಾಗಿ ವರದಿ ತಿಳಿಸಿದೆ. ಮರಣ ದಂಡನೆಗೆ ಗುರಿಯಾದ ಅಧಿಕಾರಿಗಳ ಗುರುತು ಬಹಿರಂಗವಾಗಿಲ್ಲ. ಆದರೆ, 2019ರಿಂದ ಚಗಾಂಗ್ ಪ್ರಾಂತೀಯ ಪಕ್ಷ ಸಮಿತಿಯ ಕಾರ್ಯದರ್ಶಿಯಾಗಿದ್ದ ಕಾಂಗ್ ಬೊಂಗ್ ಹೂನ್ ಸೇರಿದಂತೆ ಹಲವರು ನಾಯಕರನ್ನು ಕಿಮ್ ಜಾಂಗ್ ಉನ್ ಅವರು ಆ ಹುದ್ದೆಗಳಿಂದ ಕಿತ್ತುಹಾಕಿದ್ದಾರೆ ಎಂದು ಉತ್ತರ ಕೊರಿಯಾದ ಸೆಂಟ್ರಲ್ ನ್ಯೂಸ್ ಏಜೆನ್ಸಿ (ಕೆಸಿಎನ್‌ಎ) ವರದಿ ತಿಳಿಸಿದೆ.

**ದಕ್ಷಿಣ ಕೊರಿಯಾದಿಂದ ಕುತಂತ್ರ:** ಉತ್ತರ ಕೊರಿಯಾದಲ್ಲಿ ಜುಲೈ ತಿಂಗಳಲ್ಲಿ ವ್ಯಾಪಕ ಮಳೆ ಯಿಂದಾಗಿ ಪ್ರವಾಹ ಮತ್ತು ಭೂಕುಸಿತ ದುರಂತಗಳು ಸಂಭವಿಸಿದ್ದವು. 4 ಸಾವಿರಕ್ಕೂ ಅಧಿಕ ಮನೆಗಳು ಮುಳುಗಿದ್ದು, ಸುಮಾರು 15 ಸಾವಿರ ಮಂದಿ ನಿರ್ವಸಿತರಾಗಿದ್ದರು. ಪ್ರವಾಹದಿಂದ ಹಾನಿಗೊಳಗಾದ ಸ್ಥಳಗಳಿಗೆ ಖುದ್ದು ಕಿಮ್ ಜಾಂಗ್ ಉನ್ ಭೇಟಿ ನೀಡಿದ್ದರು. ಪ್ರವಾಹದಲ್ಲಿ ಸಂಪೂರ್ಣ ಮುಳುಗಿರುವ ಪ್ರದೇಶಗಳನ್ನು ಮರು ನಿರ್ಮಿಸುವ ಹಾಗೂ ಮರುಸ್ಥಾಪಿಸುವ ಕಾರ್ಯಕ್ಕೆ ಹಲವಾರು ತಿಂಗಳು ಬೇಕಾಗುತ್ತದೆ ಎಂದು ಹೇಳಿದ್ದರು.

ಆದರೆ ಪ್ರವಾಹದಿಂದ ಭಾರಿ ಸಂಖ್ಯೆಯಲ್ಲಿ ಜನರು ಸತ್ತಿದ್ದಾರೆ ಎಂಬ ವರದಿಗಳನ್ನು ಕಿಮ್ ಜಾಂಗ್ ಉನ್ ಅಲ್ಲಗಳೆದಿದ್ದರು. ಇವು ಸುಳ್ಳು ವದಂತಿ ಎಂದು ಹೇಳಿದ್ದರು. ಉತ್ತರ ಕೊರಿಯಾದ ಅಂತಾರಾಷ್ಟ್ರೀಯ ವರ್ಚಸ್ಸಿಗೆ ಹಾನಿ ಮಾಡುವ ಉದ್ದೇಶದಿಂದ ದಕ್ಷಿಣ ಕೊರಿಯಾವು ಉದ್ದೇಶಪೂರ್ವಕವಾಗಿ ನಡೆಸುತ್ತಿರುವ ಕೆಟ್ಟ ಅಪಪ್ರಚಾರದ ಭಾಗವಾಗಿ ಈ ವದಂತಿಗಳನ್ನು ಹರಡುತ್ತಿದೆ ಎಂದು ಆರೋಪಿಸಿದ್ದರು. ಇತ್ತೀಚೆಗೆ ಪ್ರವಾಹ ಹಾನಿ ಉಂಟಾಗಿದ್ದರೂ, ಅವರು ಸಾಮಾಜಿಕ ಭದ್ರತಾ ಕಾರಣಗಳನ್ನು ತಿರಸ್ಕರಿಸಿದ್ದಾರೆ. ತಮ್ಮ ಕತ್ತು ಯಾವಾಗ ಉರುಳುತ್ತದೆ ಎಂಬುದು ತಿಳಿದಿಲ್ಲದೆ ಅಧಿಕಾರಿಗಳು ಆತಂಕದಲ್ಲಿದ್ದಾರೆ ಎಂದು ಅಂತಾರಾಷ್ಟ್ರೀಯ ಕೊರಿಯಾನ್ ಪರ್ಯಾಯ ದ್ವೀಪ ವೇದಿಕೆಯ ಉತ್ತರ ಕೊರಿಯಾದ ಮಾಜಿ ರಾಯಭಾರಿ ಲೀ ಇಲ್ ಗ್ಯು ಹೇಳಿದ್ದಾರೆ.

**ಮರಣದಂಡನೆ ಪ್ರಮಾಣ ಹೆಚ್ಚಳ:** ಕೋವಿಡ್ 19 ಸಾಂಕ್ರಾಮಿಕದ ಬಳಿಕ ಉತ್ತರ ಕೊರಿಯಾದಲ್ಲಿ ಸಾರ್ವಜನಿಕ ಮರಣದಂಡನೆ ಸಂಖ್ಯೆ ಭಾರಿ ಪ್ರಮಾ ಣದಲ್ಲಿ ಏರಿಕೆಯಾಗಿದೆ ಎಂದು ಕೊರಿಯಾ ಟೈಮ್ಸ್ ಹೇಳಿದೆ. ಸಾಂಕ್ರಾಮಿಕಕ್ಕೂ ಮುನ್ನ ವರ್ಷಕ್ಕೆ ಸಾಮಾನ್ಯ ವಾಗಿ ಅಂದಾಜು 10 ಮರಣದಂಡನೆಗಳು ನಡೆಯುತ್ತಿದ್ದವು. ಆದರೆ ಈಗ ಮೂರು ನಾಲ್ಕು ವರ್ಷಗಳಿಂದ ಅದು ಸುಮಾರು 100 ವಾರ್ಷಿಕ ಸಾರ್ವಜನಿಕ ಮರಣದಂಡನೆಗಳಿಗೆ ಏರಿಕೆಯಾಗಿದೆ. ಅಂದರೆ ಹತ್ತು ಪಟ್ಟು ಹೆಚ್ಚಳವಾಗಿದೆ.

### ಇದಕ್ಕೆ ಅಧಿಕಾರಿಗಳೇ ಹೊಣೆ

**ಉತ್ತರ ಕೊರಿಯಾದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕ ಮರಣದಂಡನೆ ಶಿಕ್ಷೆಗಳು ಹೆಚ್ಚುತ್ತಿವೆ. ಜುಲೈ ತಿಂಗಳಲ್ಲಿ ಭಾರಿ ಮಳೆಯಿಂದಾಗಿ ದೇಶದಲ್ಲಿ ಅನಾಹುತಕಾರಿ ಪ್ರವಾಹ ಉಂಟಾಗಿತ್ತು. ಇದರ ಜತೆ ಭೂಕುಸಿತಗಳಿಂದಾಗಿ ಸಾವಿರಾರು ಜನರು ಸತ್ತಿದ್ದರು. ಇದಕ್ಕೆ ಅಧಿಕಾರಿಗಳೇ ಹೊಣೆ ಎಂದಿರುವ ಕಿಮ್ ಜಾಂಗ್ ಉನ್, ಸುಮಾರು 30 ಅಧಿಕಾರಿಗಳನ್ನು ಮರಣದಂಡನೆಗೆ ಗುರಿಪಡಿಸಿದ್ದಾರೆ.**

- **ಜನರ ಜೀವ ನಷ್ಟ ತಡೆಯಲು ವಿಫಲರಾದ ಕಾರಣಕ್ಕೆ 20-30 ಅಧಿಕಾರಿಗಳಿಗೆ ಮರಣದಂಡನೆ**
- **ಪ್ರವಾಹದಲ್ಲಿ ಜನರು ಸತ್ತಿದ್ದಾರೆ ಎಂಬ ವರದಿಗಳನ್ನು ಅಲ್ಲಗಳೆದಿರುವ ಕಿಮ್ ಜಾಂಗ್ ಉನ್**

ಪ್ರವಾಹ ಮತ್ತು ಭೂಕುಸಿತ ತಡೆಯಲು ವಿಫಲ

# ಮಿನಿ ನ್ಯೂಸ್

## ಮದರಸಾದಲ್ಲಿ ಆರ್‌ಎಸ್‌ಎಸ್ ವಿರೋಧಿ ಪುಸ್ತಕ ಪತ್ತೆ

**ಲಖ್ನೋ:** ಮದರಸಾದಲ್ಲಿ ಆರ್‌ಎಸ್‌ಎಸ್ ಕುರಿತ ವಿವಾದಾತಕ ಪುಸ್ತಕ ದೊರೆತಿರುವ ಘಟನೆ ಉತ್ತರಪ್ರದೇಶದ ಪ್ರಯಾಗ್ರಾಜ್‌ನಲ್ಲಿ ನಡೆದಿದೆ. ನಕಲಿ ನೋಟು ಮುದ್ರಣಕ್ಕೆ ಸಂಬಂಧಿಸಿದಂತೆ ಬಂದ ಮಾಹಿತಿ ಮೇರೆಗೆ ಮದರಸಾಗೆ ಶೋಧಕ್ಕೆಂದು ಹೋಗಿದ್ದ ಅಧಿಕಾರಿಗಳಿಗೆ ಈ ವಿವಾದಾತಕ ಪುಸ್ತಕ ಸಿಕ್ಕಿದೆ. ಪ್ರಯಾಗ್ರಾಜ್ನ ಅತರ್ಸ್ಯ ಪ್ರದೇಶದ ಜಾಮಿಯಾ ಹಬೀಬಿಯಾ ಮಸೀದಿ ಅಜಮ್ ಮದರಸಾದಲ್ಲಿ ನಡೆದ ದಾಳಿಯಲ್ಲಿ ನಕಲಿ ನೋಟುಗಳ ಜೊತೆಗೆ, ಪೊಲೀಸರು ಪುಸ್ತಕವನ್ನು ವಶಪಡಿಸಿಕೊಂಡಿದ್ದಾರೆ.

ಆರ್‌ಎಸ್‌ಎಸ್ ದಿ ಬಿಗ್ಗೆಸ್ಟ್ ಟೆರರಿಸ್ಟ್ ಆರ್ಗನೈಸೇಷನ್ ಇನ್ ದಿ ಕಂಟ್ರಿ ಎನ್ನುವ ಪುಸ್ತಕವನ್ನು ಉರ್ದು ವಿನಿಂದ ಹಿಂದಿಗೆ ತರ್ಜುಮೆ ಮಾಡಲಾಗಿದೆ. ಈ ಪುಸ್ತಕವನ್ನು ಎಸ್.ಎಂ ಮುಷರಫ್ ಎಂಬುವವರು ಬರೆದಿದ್ದಾರೆ. ಮದರಸಾದಲ್ಲಿ ಆರ್‌ಎಸ್‌ಎಸ್ ವಿರುದ್ಧ ಮಕ್ಕಳಲ್ಲಿ ವಿಷಬೀಜ ಬಿತ್ತಲು ಮೌಲ್ವಿ ಮೊಹಮದ್ ತಫ್ಸೀರುಲ್ ಆರಿಫೀನ್ ಈ ಪುಸ್ತಕವನ್ನು ಬಳಕೆ ಮಾಡುತ್ತಿರಬಹುದು ಎಂದು ಅನುಮಾನಿಸಲಾಗಿದೆ.

## ಮಲ್ಲಿಕಾರ್ಜುನ ಖರ್ಗೆ-ಅಮೆರಿಕಾ ರಾಯಭಾರಿ ಗಾರ್ಸೆಟ್ಟಿ ಮಾತುಕತೆ

**ನವದೆಹಲಿ:** ಭಾರತದಲ್ಲಿರುವ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಉಭಯ ದೇಶಗಳ ನಡುವಿನ ಬಾಂಧವ್ಯವನ್ನು ಬಲಪಡಿಸುವ ಕುರಿತು ಚರ್ಚಿಸಿದರು. ಸಭೆಯ ನಂತರ ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಖರ್ಗೆ ಅವರು ಭಾರತ ಮತ್ತು ಯುನೈಟೆಡ್ ಸ್ಟೇಟ್ಸ್ ಮಾನವ ಪ್ರಯತ್ನದ ಬಹುತೇಕ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ಆನಂದಿಸುತ್ತವೆ, ಇದು ಹಂಚಿಕೆಯ ಪ್ರಜಾಪ್ರಭುತ್ವ ಮೌಲ್ಯಗಳಿಂದ ನಡೆಸಲ್ಪಡುತ್ತದೆ ಎಂದಿದ್ದಾರೆ. ಭಾರತಕ್ಕೆ ಯುಎಸ್ ರಾಯಭಾರಿ ಎರಿಕ್ ಗಾರ್ಸೆಟ್ಟಿ, ರಾಜಕೀಯ ವ್ಯವಹಾರಗಳ ಸಚಿವ-ಸಮಾಲೋಚಕ ಗ್ರಹಾಂ ಮೇಯರ್ ಮತ್ತು ಮುಖ್ಯಸ್ಥೆ ಲಿಸಾ ಬ್ರೌನ್ ಅವರನ್ನು ಭೇಟಿಯಾಗಲು ಸಂತೋಷವಾಗಿದೆ ಮತ್ತು ಉಭಯ ದೇಶಗಳ ನಡುವಿನ ಬಾಂಧವ್ಯವನ್ನು ಬಲಪಡಿಸುವ ಕುರಿತು ಚರ್ಚಿಸಲಾಗಿದೆ ಎಂದು ಖರ್ಗೆ ಹೇಳಿದ್ದಾರೆ.

## ಭೀಕರ ಅಪಘಾತ: ನಾಲ್ವರು ಭಾರತೀಯರು ಸಜೀವ ದಹನ

**ಹೂಸ್ಟನ್:** ಅಮೆರಿಕದ ಟೆಕ್ಸಾಸ್ ರಾಜ್ಯದಲ್ಲಿ ಸಂಭವಿಸಿದ ಐದು ವಾಹನಗಳ ನಡುವಿನ ಸರಣಿ ಅಪಘಾತದಲ್ಲಿ ನಾಲ್ವರು ಭಾರತೀಯರು ಸಜೀವ ದಹನಗೊಂಡಿದ್ದಾರೆ. ಹೂಸ್ಟನ್‌ನಲ್ಲಿರುವ ಭಾರತೀಯ ಕಾನ್ಸುಲ್ ಜನರಲ್ ಡಿ. ಸಿ. ಮಂಜುನಾಥ್ ಅವರು ಮೃತರ ಗುರುತನ್ನು ದೃಢಪಡಿಸಿದ್ದಾರೆ. ಕಚೇರಿಯು ಮೃತರ ಕುಟುಂಬದೊಂದಿಗೆ ಸಂಪರ್ಕದಲ್ಲಿದ್ದು, ಸಾಧ್ಯವಿರುವ ಎಲ್ಲಾ ನೆರವನ್ನು ನೀಡುವುದಾಗಿ ಹೇಳಿದ್ದಾರೆ. 'ಕಳೆದ ಶುಕ್ರವಾರ ಮಧ್ಯಾಹ್ನದ ವೇಳೆಗೆ ಅಪಘಾತ ಸಂಭವಿಸಿದೆ. ಟ್ರಾಫಿಕ್‌ನಲ್ಲಿ ವಾಹನಗಳು ನಿಂತಿದ್ದ ವೇಳೆ ಹಿಂದಿನಿಂದ ಅತಿ ವೇಗದಲ್ಲಿ ಬಂದ ಟ್ರಕ್ ಕಾರಿಗೆ ಗುದ್ದಿದೆ.

ಇದರಿಂದಾಗಿ ಕಾರಿಗೆ ಬೆಂಕಿ ಹೊತ್ತಿಕೊಂಡಿದ್ದು, ಕಾರಿನಲ್ಲಿದ್ದ ನಾಲ್ವರು ಮೃತಪಟ್ಟಿದ್ದಾರೆ ಎಂದು ಪ್ರಾಥಮಿಕ ವರದಿ ಮತ್ತು ಪ್ರತ್ಯಕ್ಷದರ್ಶಿಗಳ ಹೇಳಿಕೆಯನ್ನು ಉಲ್ಲೇಖಿಸಿ ವರದಿ ತಿಳಿಸಿದೆ. ಸಿನಿಮಾ ಮೃತರನ್ನು ಹೈದರಾಬಾದ್‌ನ ಆರ್ಯನ್ ರಂಗನಾಥನ್ ಒರಂಪಟ್ಟಿ, ಆತನ ಸ್ನೇಹಿತ ಫಾರೂಕ್ ಶೇಖ್, ವಿದ್ಯಾರ್ಥಿ ಲೋಕೇಶ್ ಮತ್ತು ತಮಿಳುನಾಡಿನ ದರ್ಶಿನಿ ವಾಸುದೇವ್ ಎಂದು ಗುರುತಿಸಲಾಗಿದೆ. ಮೃತದೇಹಗಳು ಗುರುತು ಹಿಡಿಯಲಾಗದಷ್ಟು ಸುಟ್ಟು ಕರಕಲಾಗಿದ್ದರಿಂದ ಅಧಿಕೃತವಾಗಿ ಗುರುತಿಸಲು ಸಮಯ ಹಿಡಿಯಿತು. ಘಟನೆಯಲ್ಲಿ ಹಲವು ಗಾಯಗೊಂಡಿದ್ದಾರೆ ಎಂದು ಮಂಜುನಾಥ್ ತಿಳಿಸಿದ್ದಾರೆ.

## ಬ್ರೂನೈ ರಾಜ ಹಸನಲ್ ಬೊಲ್ಕಿಯಾ ಭೇಟಿಯಾದ ಪ್ರಧಾನಿ ಮೋದಿ

**ಬಂದಾರ್ ಸೆರಿ ಬೆಗಾವನ್:** ಬ್ರೂನೈ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಬ್ರೂನೈ ದೊರೆ ಮತ್ತು ಪ್ರಧಾನಿ ಹಸನಲ್ ಬೊಲ್ಕಿಯಾ ಅವರು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಫೋಟೋಗಳನ್ನು ಹಂಚಿಕೊಂಡಿರುವ ಮೋದಿ, 'ಸುಲ್ತಾನ್ ಹಸನಲ್ ಬೊಲ್ಕಿಯಾ ಅವರನ್ನು ಭೇಟಿಯಾಗಿ ಸಂತೋಷವಾಗಿದೆ. ನಮ್ಮ ಮಾತುಕತೆಗಳು ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಭದ್ರಪಡಿಸುವ ಮಾರ್ಗಗಳನ್ನು ಒಳಗೊಂಡಿತ್ತು.

ವ್ಯಾಪಾರ ಸಂಬಂಧ, ವಾಣಿಜ್ಯ ಸಂಪರ್ಕ, ಕೌಶಲ ವಿನಿಮಯವನ್ನು ಇನ್ನಷ್ಟು ವಿಸ್ತರಿಸಲಿದ್ದೇವೆ' ಎಂದು ಬರೆದುಕೊಂಡಿದ್ದಾರೆ. ಭಾರತದ ಪ್ರಧಾನಿಯೊಬ್ಬರು ದ್ವಿಪಕ್ಷೀಯ ಮಾತುಕತೆಗಾಗಿ ಬ್ರೂನೈಗೆ ಭೇಟಿ ನೀಡಿದ್ದು ಇದೇ ಮೊದಲು. ಉಭಯ ದೇಶಗಳ ನಡುವಣ ರಾಜತಾಂತ್ರಿಕ ಸಂಬಂಧ ಸ್ಥಾಪನೆಯ 40ನೇ ವರ್ಷಾಚರಣೆಯ ಸಮಯದಲ್ಲೇ ಈ ಭೇಟಿ ನಡೆದಿದೆ. ಆಕ್ಟ್ ಈಸ್ಟ್ ನೀತಿ ಮತ್ತು ಇಂಡೋ-ಪೆಸಿಫಿಕ್ ವಿಷನ್‌ನಲ್ಲಿ ಭಾರತಕ್ಕೆ ಬ್ರೂನೈ ಪ್ರಮುಖ ಪಾಲುದಾರ ಆಗಿದೆ.

## ಯಾರಿಗೆ ಹೆಚ್ಚಿಗೆ ಸೀಟು ಸಿಗುತ್ತದೊ ಆ ಪಕ್ಷಕ್ಕೆ ಸಿಎಂ ಸ್ಥಾನ: ಶರದ್ ಪವಾರ್



**ಕೋಲ್ಹಾಪುರ:** 'ಚುನಾವಣೆಗೆ ಮುನ್ನವೇ ಮಹಾ ವಿಕಾಸ ಅಘಾಡಿಯಾದ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂದು ಘೋಷಿಸುವ ಅಗತ್ಯವಿಲ್ಲ. ಚುನಾವಣೆ ಪೂರ್ಣಗೊಂಡ ಬಳಿಕ ಮುಖ್ಯಮಂತ್ರಿ ಯಾರಾಗಬೇಕು ಎಂದು ನಿರ್ಧರಿಸಲಾಗುತ್ತದೆ. ಜೊತೆಗೆ ಯಾವ ಪಕ್ಷಕ್ಕೆ ಹೆಚ್ಚು ಸ್ಥಾನ ದೊರೆಯುತ್ತದೆಯೋ ಆ ಪಕ್ಷದವರು ಮುಖ್ಯಮಂತ್ರಿಯಾಗುತ್ತಾರೆ' ಎಂದು ಎನ್‌ಸಿಪಿ (ಶರದ್ ಬಣ) ಮುಖ್ಯಸ್ಥ ಶರದ್ ಪವಾರ್ ಹೇಳಿದರು.

ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, 'ಮೈತ್ರಿಕೂಟದ ನಾಯಕರು ಮಾತುಕತೆ ಮೂಲಕ ಸೀಟು ಹಂಚಿಕೆಯನ್ನು ಆದಷ್ಟುಬೇಗ ಪೂರ್ಣಗೊಳಿಸಬೇಕು ಮತ್ತು ಚುನಾವಣಾ ಪ್ರಚಾರ ಆರಂಭಿಸಬೇಕು. ಇದೇ 7ರಿಂದ 9ರವರೆಗೆ ಮೈತ್ರಿಕೂಟದ ನಾಯಕರ ಸಭೆ ನಡೆಯಲಿದೆ' ಎಂದರು. 'ಸಿಪಿಐ, ಸಿಪಿಎಂ, ಪೀಸೆನ್ಸ್ ಆ?ಯಂಡ್ ವರ್ಕರ್ಸ್‌ರ ಪಾರ್ಟಿ (ಪಿಡಬ್ಲುಪಿ) ಜೊತೆಗೆ ವಿಧಾನಸಭೆ ಚುನಾವಣೆಯಲ್ಲಿಯೂ ಮೈತ್ರಿಕೂಟವು ಹೊಂದಾಣಿಗೆ ಮಾಡಿಕೊಳ್ಳಬೇಕು. ಲೋಕಸಭೆ ಚುನಾವಣೆಯಲ್ಲಿ ನಮ್ಮ ಗೆಲುವಿನಲ್ಲಿ ಈ ಪಕ್ಷಗಳ ಪಾತ್ರವೂ ಇದೆ' ಎಂದರು.



ಮದುವೆ ಲೈಫ್ ಬಗ್ಗೆ ಮಾತನಾಡಿದ ರಿಯಾ

# ಪ್ರೀತಿಸಲು ಕೋರ್ಟ್ ಅನುಮತಿ ಬೇಡ

ಬಾಲಿವುಡ್ ನಟಿ ರಿಯಾ ಚಕ್ರವರ್ತಿ ಮೊದಲ ಬಾರಿಗೆ ಮದುವೆ ಲೈಫ್ ಬಗ್ಗೆ ಮಾತನಾಡಿದ್ದಾರೆ. ಪ್ರೀತಿ ಮಾಡಲು ಕೋರ್ಟ್ ಅನುಮತಿ ಬೇಕಿಲ್ಲ ಎಂದು ರಿಯಾ ನೀಡಿರುವ ಹೇಳಿಕೆ ಸೋಶಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿದೆ. ಓಪನ್ ಆಗಿ ಮದುವೆ ಲೈಫ್ ಬಗ್ಗೆ ನಟಿ ಮಾತನಾಡಿದ್ದಾರೆ. ಜೆರೋಡಾ ಕಂಪನಿಯ ಸಹ ಸಂಸ್ಥಾಪಕ ನಿಖಿಲ್ ಕಾಮತ್ ಜೊತೆ ರಿಯಾ ಡೇಟಿಂಗ್ ಮಾಡುತ್ತಿದ್ದಾರೆ ಎಂಬ ಸುದ್ದಿ ಕೆಲ ದಿನಗಳಿಂದ ಹರಿದಾಡುತ್ತಿದೆ. ಈ ಬಗ್ಗೆ ಇಬ್ಬರೂ ಸ್ಪಷ್ಟನೆ ನೀಡಿಲ್ಲ. ಇದರ ನಡುವೆ ರಿಯಾ ಲವ್, ಮದುವೆ ಬಗ್ಗೆ ಸಂದರ್ಶನವೊಂದರಲ್ಲಿ ಮುಕ್ತವಾಗಿ ಮಾತನಾಡಿದ್ದಾರೆ. ಇಷ್ಟು ವಯಸ್ಸಿಗೆ ಮದುವೆ ಆಗಬೇಕು ಅಂತ ಹೇಳಲು ಆಗಲ್ಲ. ಮದುವೆಗೆ ಒಬ್ಬೊಬ್ಬರಿಗೆ ಒಂದೊಂದು ವಯಸ್ಸು ಸೂಕ್ತ ಎನಿಸುತ್ತದೆ. ಮದುವೆ ವಿಷಯದಲ್ಲಿ ಹೆಣ್ಣು ಏನು ಎದುರಿಸುತ್ತಾಳೋ ಅದನ್ನು ಪುರುಷ ಎದುರಿಸಲಾರ. ಮದುವೆ ಎಂದಾಗ ಒಂದಷ್ಟು ಒತ್ತಡ ಇರುತ್ತದೆ ಎಂದಿದ್ದಾರೆ. ಎಲ್ಲಾ ವಯಸ್ಸಿನಲ್ಲಿಯೂ ಮಗು ಮಾಡಿಕೊಳ್ಳಲಾಗೋದಿಲ್ಲ. ಮಗು ಮಾಡಿಕೊಳ್ಳಲು ಅಂಡಾಣು ಸಂಗ್ರಹ ಕೂಡ ಆಯ್ಕೆ ಮಾಡಿಕೊಳ್ಳಬಹುದು. ನನ್ನ ಅನೇಕ ಸ್ನೇಹಿತರು 20 ಮತ್ತು 30ನೇ ವಯಸ್ಸಿಗೆ ಮದುವೆಯಾಗಿದ್ದಾರೆ. ಅವರು 40ನೇ ವಯಸ್ಸಿಗೆ ಮಗು ಮಾಡಿಕೊಂಡಿದ್ದಾರೆ. ಇನ್ನೂ ಕೆಲವರು 20ನೇ ವಯಸ್ಸಿಗೆ ಮಕ್ಕಳನ್ನು ಮಾಡಿಕೊಂಡಿದ್ದಾರೆ. ಆದರೆ ತಡವಾಗಿ ಮದುವೆ ಆಗುತ್ತಿರೋದು ಹೆಚ್ಚಾಗ್ತಿದೆ ಎಂದು ರಿಯಾ ಹೇಳಿದ್ದಾರೆ.

32ನೇ ವಯಸ್ಸಿನಲ್ಲಿರುವ ನಾನು 40ನೇ ವಯಸ್ಸಿಗೆ ಮದುವೆ ಆಗೋದಕ್ಕೆ ಬಯಸುವೆ. ನಾನು ಇನ್ನೂ ಮದುವೆ ಆಗೋಕೆ ರೆಡಿ ಇಲ್ಲ. ನನಗೆ ವೃತ್ತಿ ಜೀವನದ ಕಡೆಗೆ ಗಮನ ಕೊಡಬೇಕಿದೆ.



# ಬಾಲಿವುಡ್‌ನತ್ತ ನಟ- 'ಜಬ್ ವಿ ಮೆಟ್' ನಿರ್ದೇಶಕನ ಸಿನಿಮಾದಲ್ಲಿ ಫಹಾದ್ ಫಾಸಿಲ್

ಪುಷ್ಪ, ಆವೇಶಂ ಸಿನಿಮಾಗಳ ಮೂಲಕ ಸಕ್ಸಸ್ ಕಂಡಿರುವ ಫಹಾದ್ ಫಾಸಿಲ್ ಇದೀಗ ಬಾಲಿವುಡ್‌ನತ್ತ ಮುಖ ಮಾಡಿದ್ದಾರೆ. 'ಜಬ್ ವಿ ಮೆಟ್' ಡೈರೆಕ್ಟರ್ ಇಮ್ತಿಯಾಜ್ ಅಲಿ ನಿರ್ದೇಶನದ ಹೊಸ ಸಿನಿಮಾದಲ್ಲಿ ಫಹಾದ್ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾದ ಸುದ್ದಿಯೊಂದು ಈಗ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಬಹುಭಾಷಾ ನಟನಾಗಿ ಗುರುತಿಸಿಕೊಂಡಿರುವ ಮಾಲಿವುಡ್ ನಟ ಫಹಾದ್‌ಗೆ ಸದ್ಯ ಬಾಲಿವುಡ್‌ನಿಂದ ಬುಲಾವ್ ಬಂದಿದೆ. ರಾಕ್‌ಸ್ಟಾರ್, ಜಬ್ ವಿ ಮೆಟ್ ಸಿನಿಮಾಗಳನ್ನು ನಿರ್ದೇಶನ ಮಾಡಿ ಸೈ ಎನಿಸಿಕೊಂಡಿದ್ದ ಇಮ್ತಿಯಾಜ್ ಈಗ ಫಹಾದ್‌ಗೆ ನಿರ್ದೇಶನ ಮಾಡಲು ಹೊರಟಿದ್ದಾರೆ ಎನ್ನಲಾಗಿದೆ.

ಇಮ್ತಿಯಾಜ್ ಅವರು ಚೆಂದದ ಲವ್ ಸ್ಟೋರಿಯೊಂದನ್ನು ಸಿದ್ಧಪಡಿಸಿದ್ದಾರೆ. ಅದಕ್ಕೆ ಫಹಾದ್ ಸೂಕ್ತ ನಾಯಕ ಎಂದೆನಿಸಿ ನಟನನ್ನು ಭೇಟಿಯಾಗಿ ಕಥೆ ಹೇಳಿದ್ದಾರೆ. ನಿರ್ದೇಶಕನ ಕಥೆಗೆ ಫಹಾದ್ ಕೂಡ ಓಕೆ ಎಂದಿದ್ದಾರೆ ಎನ್ನಲಾಗಿದೆ. ಅಧಿಕೃತ ಮಾಹಿತಿ ಸಿಗುವವರೆಗೂ ಕಾಯಬೇಕಿದೆ.

ಇನ್ನೂ ಇದುವರೆಗೂ ಫಹಾದ್ ಬಾಲಿವುಡ್‌ನಲ್ಲಿ ನಟಿಸಿಲ್ಲ. ಆದರೆ ಅವರು ನಟಿಸಿರುವ ಸಿನಿಮಾಗಳು ಹಿಂದಿಯಲ್ಲಿ ಡಬ್ ಆಗಿ ಪ್ರೇಕ್ಷಕರ ಗಮನ ಸೆಳೆದಿದೆ. ಹಿಂದಿಯಲ್ಲೂ ಅಪಾರ ಅಭಿಮಾನಿಗಳನ್ನು ನಟ ಸಂಪಾದಿಸಿದ್ದಾರೆ. ಹಾಗಾಗಿ ಪೂರ್ಣ ಪ್ರಮಾಣದಲ್ಲಿ ಬಾಲಿವುಡ್ ಸಿನಿಮಾದಲ್ಲಿ ಕಾಣಿಸಿಕೊಳ್ಳಲು ನಟ ನಿರ್ಧರಿಸಿದ್ದಾರೆ ಎನ್ನಲಾಗಿದೆ.



# ಬ್ಯಾಚುಲರ್ ಪಾರ್ಟಿ ಸಂಭ್ರಮದಲ್ಲಿ ಮೇಘಾ


ತೆಲುಗು, ತಮಿಳು ಸಿನಿಮಾಗಳ ಮೂಲಕ ಸದ್ದು ಮಾಡಿರುವ ಮೇಘಾ ಆಕಾಶ್ ಅವರು ಬಹುಕಾಲದ ಗೆಳೆಯನ ಜೊತೆ ಮದುವೆಗೆ ಸಿದ್ಧವಾಗಿದ್ದಾರೆ. ಇದರ ನಡುವೆ ಶ್ರೀಲಂಕಾದಲ್ಲಿ 'ಪೆಟ್ಟಾ' ನಟಿ ಮೇಘಾ ಆಕಾಶ್ ಬ್ಯಾಚುಲರ್ ಪಾರ್ಟಿ ಆಚರಿಸಿಕೊಂಡಿದ್ದಾರೆ. ಸುಂದರ ಫೋಟೋಗಳನ್ನು ನಟಿ ಹಂಚಿಕೊಂಡಿದ್ದಾರೆ.

ಬ್ಯಾಚುಲರ್ ಪಾರ್ಟಿ ಸೆಲೆಬ್ರೇಟ್ ಮಾಡಲು ಶ್ರೀಲಂಕಾಗೆ ಸ್ನೇಹಿತೆಯರ ಜೊತೆ ಮೇಘಾ ಆಕಾಶ್ ವಿಸಿಟ್ ಮಾಡಿದ್ದಾರೆ. ಬಿಳಿ ಬಣ್ಣದ ಗೌನ್ ಧರಿಸಿ ಮುದ್ದಾಗಿ ನಟಿ ಕಾಣಿಸಿಕೊಂಡಿದ್ದಾರೆ. ಈ ಮೂಲಕ ಬ್ಯಾಚುಲರ್ ಲೈಫ್‌ಗೆ ನಟಿ ಗುಡ್ ಬೈ ಹೇಳ್ತಿದ್ದಾರೆ. ಅಂದಹಾಗೆ, ಆಗಸ್ಟ್‌ನಲ್ಲಿ ಬಹುಕಾಲದ ಗೆಳೆಯ ಸಾಯಿ ವಿಷ್ಣು ಜೊತೆ ಮೇಘಾ ನಿಶ್ಚಿತಾರ್ಥ ಮಾಡಿಕೊಂಡಿದ್ದರು. ಇದೀಗ ಇದೇ ಸೆ.14 ಮತ್ತು 15ರಂದು ನಟಿ ಹಸೆಮಣೆ ಏರಲು ಸಜ್ಜಾಗಿದ್ದಾರೆ. ಹಲವು ವರ್ಷಗಳ ಪ್ರೀತಿಗೆ ಮದುವೆಯ ಮುದ್ರೆ, ಒತ್ತಲು ರೆಡಿಚೆನ್ನೈನಲ್ಲಿ ನಡೆಯಲಿರುವ ಈ ಮದುವೆಗೆ ಸ್ಟಾರ್ ನಟ ರಜನಿಕಾಂತ್, ನಟ ನಿತಿನ್, ಅದಿತ್ ಅರುಣ್ ಸೇರಿದಂತೆ ಅನೇಕರಿಗೆ ನಟಿ ಮೇಘಾ ಆಹ್ವಾನ ನೀಡಿದ್ದಾರೆ.



# ಸ್ಯಾಂಡಲ್‌ವುಡ್‌ನಲ್ಲಿ ಲೈಂಗಿಕ ಕಿರುಕುಳ

ಸಿನಿಮಾ ಇಂಡಸ್ಟ್ರಿಯಲ್ಲಿ ಮಹಿಳೆಯರ ಸಮಸ್ಯೆ ಕುರಿತು ಮಲಯಾಳಂ ಸಿನಿಮಾರಂಗದಲ್ಲಿ ರಚನೆಯಾದ ಮಾದರಿ ಕನ್ನಡ ಸಿನಿಮಾ ಇಂಡಸ್ಟ್ರಿಯಲ್ಲೂ ತನಿಖಾ ಸಮಿತಿ ರಚಿಸುವ ಕುರಿತು ಒತ್ತಾಯ ಕೇಳಿ ಬಂದಿದೆ. ಮಲಯಾಳಂ ಚಿತ್ರರಂಗದಲ್ಲಿ ಲೈಂಗಿಕ ಕಿರುಕುಳ ಭುಗಿಲೆದ್ದ ಹಿನ್ನೆಲೆ ಸ್ಯಾಂಡಲ್‌ವುಡ್‌ನಲ್ಲೂ 'ಫೈರ್' ಹೆಸರಲ್ಲಿ ತನಿಖಾ ಸಮಿತಿ ರಚಿಸುವ ಕುರಿತು ಸರ್ಕಾರಕ್ಕೆ ಬೇಡಿಕೆ ಇಡಲಾಗಿದೆ.





ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಅಂಡ್ ಇಕ್ವಾಲಿಟಿ ಎಂಬ ಉದ್ದೇಶದಿಂದ ಫೈರ್ ರಚಿಸಲು ಚಿತ್ರರಂಗದಲ್ಲಿ ಅನೇಕರು ಒತ್ತಾಯಿಸಿದ್ದಾರೆ. ಕನ್ನಡ ಚಿತ್ರೋದ್ಯಮದಲ್ಲಿ ಮಹಿಳೆಯರು ಎದುರಿಸುತ್ತಿರುವ ಲೈಂಗಿಕ ಕಿರುಕುಳ ಸೇರಿದಂತೆ, ಲಿಂಗ ತಾರತಮ್ಯ, ಸವಾಲುಗಳು, ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿ ಮಾಡಲು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿ ರಚಿಸುವಂತೆ ಸರ್ಕಾರಕ್ಕೆ ಫೈರ್ ಸಂಸ್ಥೆ ಒತ್ತಾಯ ಮಾಡಿದೆ. ಉದ್ಯಮದ ಹಾಗೂ ವಿವಿಧ ಕ್ಷೇತ್ರಗಳ 153 ನಟಿಯರು ತಂತ್ರಜ್ಞರು ಪತ್ರಕರ್ತರು ಅರ್ಜಿಗೆ ಸಹಿ ಹಾಕಿ ಒತ್ತಾಯಿಸಿದ್ದಾರೆ.

ಚಿತ್ರರಂಗದಲ್ಲಿ ಮಹಿಳೆಯರು ಆರೋಗ್ಯಕರವಾಗಿ ಹಾಗೂ ಸಮಾನವಾಗಿ ಕೆಲಸ ಮಾಡುವಂತೆ ನಿಯಮಗಳನ್ನು ತರುವಂತೆ ಫೈರ್ ಸಂಸ್ಥೆ ಸಿಎಂಗೆ ಮನವಿ ಮಾಡಿದೆ.

ಪೂಜಾ ಗಾಂಧಿ, ಚೈತ್ರಾ ಆಚಾರ್, ನಿಶ್ವಿಕಾ ನಾಯ್ಡು, ನೀತು ಶೆಟ್ಟಿ, ಆಶಿಕಾ ರಂಗನಾಥ್, ನಟಿ ರಮ್ಯಾ, ಮಾನ್ವಿತಾ ಕಾಮತ್, ಐಂದ್ರಿತಾ ರೈ, ನಟ ಸುದೀಪ್, ವಿನಯ್ ರಾಜ್ ಕುಮಾರ್ ಸೇರಿದಂತೆ ಹಲವರು ಸಹಿ ಮಾಡಿ ಸಿಎಂಗೆ ಮನವಿ ಪತ್ರ ಸಲ್ಲಿಸಿದ್ದಾರೆ. 'ಫೈರ್' ಸಂಸ್ಥೆಯ ಮೂಲಕ ಆ ದಿನಗಳು ಖ್ಯಾತಿಯ ಚೇತನ್ ಮನವಿ ಮಾಡಿದ್ದಾರೆ.

# ನನ್ನ ಲೈಫ್‌ನಲ್ಲಿ ಆಗಿದ್ದು ಬೇರೆಯವರಿಗೆ ಆಗಬಾರದು



ಕಾಸ್ಟಿಂಗ್ ಕೌಚ್ ಬಗ್ಗೆ ಗಲ್ರಾನಿ ಪ್ರತಿಕ್ರಿಯೆ

ಮಲಯಾಳಂ ಚಿತ್ರರಂಗದಲ್ಲಿ ಲೈಂಗಿಕ ಕಿರುಕುಳ ಭುಗಿಲೆದ್ದ ಹಿನ್ನೆಲೆ ಸ್ಯಾಂಡಲ್‌ವುಡ್‌ನಲ್ಲೂ ನಟಿಯರಿಗಾಗಿ ಕೇರಳದಂತೆಯೇ ತನಿಖಾ ಸಮಿತಿ ರಚಿಸುವಂತೆ ಆಗ್ರಹಿಸುತ್ತಿದ್ದಾರೆ. ಈ ಬೆನ್ನಲ್ಲೇ ಫೈರ್ ಸಂಸ್ಥೆ ಬಗ್ಗೆ ಮತ್ತು ಸ್ಯಾಂಡಲ್‌ವುಡ್ ಕಾಸ್ಟಿಂಗ್ ಕೌಚ್ ಬಗ್ಗೆ ಮಾತನಾಡಿದ್ದಾರೆ. ನನ್ನ ಲೈಫ್‌ನಲ್ಲಿ ಆಗಿದ್ದು, ಬೇರೆ ಅವರಿಗೆ ಆಗಬಾರದು. ಹೀರೋಯಿನ್ ಮಾಡ್ತೀನಿ ಅಂತ ತಪ್ಪು ದಾರಿಗೆ ಎಳೆಯುತ್ತಾರೆ ಎಂದು 'ಪಬ್ಲಿಕ್ ಟಿವಿ'ಗೆ ಸಂಜನಾ ಗಲ್ರಾನಿ ಮಾತನಾಡಿದ್ದಾರೆ. ನಾನು ಈ ಹಿಂದೆಯೇ ಮೀಟೂ ಪ್ರಕರಣದಲ್ಲಿ ಮಾತಾಡಿದ್ದೆ, ಆಗ ಏನು ಆಯಿತು ಎಂಬುದು ಎಲ್ಲಾರಿಗೂ ಗೊತ್ತಿದೆ. ನಡೆದಿದ್ದು ನಡೆದಂಗೆ ಹೇಳಿದ್ರೆ, ಅದೇನೋ ಅಂತಾರಲ್ಲ ಹಾಗಾಯಿತು. ನನ್ನ ಲೈಫ್‌ನಲ್ಲಿ ನಡೆದಿದ್ದು, ಬೇರೆ ಅವರಿಗೆ ಆಗಬಾರದು.

ಚಿತ್ರರಂಗಕ್ಕೆ ಬರುವ ಹೊಸ ನಟಿಯರಿಗೆ ಈ ರೀತಿ ತೊಂದರೆ ಆಗಬಾರದು. ಅವತ್ತು ಅದರಿಂದ ಹೊರಗೆ ಬಂದು 55 ಸಿನಿಮಾ ಮಾಡಿ ಗುರುತಿಸಿಕೊಂಡಿದ್ದೇನೆ. ಈಗಲೂ 2 ಸಿನಿಮಾ ಮಾಡುತ್ತಿದ್ದೇನೆ. ನನಗೆ ಆದ ಹಾಗೆ ಬೇರೆ ಯಾರಿಗೂ ಆಗಬಾರದು ಎಂದು ಮಾತನಾಡಿದ್ದಾರೆ.

'ಫೈರ್' ಎನ್ನುವ ಸಂಸ್ಥೆಯದು ಅದ್ಭುತವಾದ ಐಡಿಯಾ. ಸದ್ಯ ನಟಿಯರ ಕಡೆಯಿಂದ ಸರ್ಕಾರಕ್ಕೆ ಪತ್ರ ಹೋಗಿದೆ. ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡುವ ಜೊತೆ ಆಫೀಸ್ ಕೂಡ ವ್ಯವಸ್ಥೆ ಮಾಡಬೇಕಿದೆ. ಇದು ಆಯಕ್ಟೀವ್ ಆಗಿ ನಡೆಯಬೇಕಿದೆ. ಇದನ್ನು ನಾವು ಎದುರು ನೋಡಬೇಕಿದೆ ಎಂದಿದ್ದಾರೆ.

ಇನ್ನೂ ಕನ್ನಡ ಇಂಡಸ್ಟ್ರಿ ಕೆಟ್ಟ ಜಾಗ ಅಲ್ಲ. ಒಕ್ಕೂಟದಲ್ಲಿರೋ ನಟ, ನಿರ್ದೇಶಕ, ನಿರ್ಮಾಪಕರು ಒಳ್ಳೆಯವರು. ಒಕ್ಕೂಟದಲ್ಲಿ ಇರದೇ ಹೊರಗಡೆ ಸಿನಿಮಾ ಮಾಡ್ತೀನಿ, ಫೈನಾನ್ಸ್ ಮಾಡ್ತಿದ್ದೀನಿ ಅಂತಾ ಹೇಳಿಕೊಂಡು ಓಡಾಡುತ್ತಾರೆ. ಹೀರೋಯಿನ್ ಮಾಡ್ತೀನಿ ಚಾನ್ಸ್ ಕೊಡಿಸ್ತೀನಿ ಅಂತಾ ಹೇಳಿ ಕನ್ನಡ ಇಂಡಸ್ಟ್ರಿ ಹೆಸರು ಹಾಳು ಮಾಡುತ್ತಾರೆ ಎಂದು ನಟಿ ಸಂಜನಾ ಮಾತನಾಡಿದ್ದಾರೆ.

# 1965ರ ನಂತರ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಪಾತಾಳಕ್ಕೆ ಕುಸಿದ ಪಾಕ್

## ತವರಿನಲ್ಲಿ ಬಾಂಗ್ಲಾದೇಶ ತಂಡವನ್ನು ಸುಲಭವಾಗಿ ಮಣಿಸುವ ಇರಾದೆಯಲ್ಲಿದ್ದ ಪಾಕ್ ತಂಡಕ್ಕೆ ಸರಣಿ ಸೋಲಿನ ಶಾಕ್

ಐಸಿಸಿ, ನೂತನ ಟೆಸ್ಟ್ ರ‍್ಯಾಂಕಿಂಗ್ ಪ್ರಕಟಿಸಿದ್ದು, ಬಾಂಗ್ಲಾದೇಶ ವಿರುದ್ಧ ತವರಿನಲ್ಲೇ 2-0 ಅಂತರದ ಹೀನಾಯ ಸೋಲು ಅನುಭವಿಸಿರುವ ಪಾಕಿಸ್ತಾನ ತಂಡ ಭಾರಿ ಹಿನ್ನಡೆ ಅನುಭವಿಸಿದೆ. ತವರಿನಲ್ಲಿ ಬಾಂಗ್ಲಾದೇಶ ತಂಡವನ್ನು ಸುಲಭವಾಗಿ ಮಣಿಸುವ ಇರಾದೆಯಲ್ಲಿದ್ದ ಪಾಕ್ ತಂಡಕ್ಕೆ ಸರಣಿ ಸೋಲಿನ ಶಾಕ್ ಒಂದೆಡೆಯಾದರೆ, ಇನ್ನೊಂದೆಡೆ ಟೆಸ್ಟ್ ರಯಾಂಕಿಂಗ್‌ನಲ್ಲಿ 8ನೇ ಸ್ಥಾನಕ್ಕೆ ಕುಸಿದಿದೆ.

ಬಾಂಗ್ಲಾದೇಶ ವಿರುದ್ಧದ ಟೆಸ್ಟ್ ಸರಣಿ ಸೋಲಿನ ನಂತರ ಇದೀಗ ಪಾಕಿಸ್ತಾನ ರಯಾಂಕಿಂಗ್‌ನಲ್ಲಿ ಎರಡು ಸ್ಥಾನ ಕೆಳಕ್ಕೆ ಜಾರಿದ್ದು, ಎಂಟನೇ ಸ್ಥಾನಕ್ಕೆ ತಲುಪಿದೆ. ಬಾಂಗ್ಲಾದೇಶದೊಂದಿಗಿನ ಟೆಸ್ಟ್ ಸರಣಿಗೂ ಮೊದಲು, ಪಾಕಿಸ್ತಾನ ತಂಡವು ಶ್ರೇಯಾಂಕದಲ್ಲಿ ಆರನೇ ಸ್ಥಾನದಲ್ಲಿತ್ತು. ಆದರೆ ಈ ಸರಣಿಯಲ್ಲಿ ತಂಡ ಅತ್ಯಂತ ಕಳಪೆ ಪ್ರದರ್ಶನ ನೀಡಿದ್ದರಿಂದ ತಂಡ ರ‍್ಯಾಂಕಿಂಗ್‌ನಲ್ಲೂ ಕುಸಿತಕಂಡಿದೆ. ಇದೀಗ ರ‍್ಯಾಂಕಿಂಗ್‌ನಲ್ಲಿ 8ನೇ ಸ್ಥಾನ ಪಡೆಯುವ ಮೂಲಕ ಪಾಕಿಸ್ತಾನ ತಂಡ 1965 ರ ನಂತರ ಈ ಕಳಪೆ ಸಾಧನೆಗೆ ಕೊರಳೊಡ್ಡಿದೆ. ಅಂದರೆ 1965ರ ನಂತರ ಐಸಿಸಿ ಟೆಸ್ಟ್ ಶ್ರೇಯಾಂಕದಲ್ಲಿ ಪಾಕಿಸ್ತಾನ ತಂಡ ಇಷ್ಟೊಂದು ಕೆಟ್ಟ ಸ್ಥಿತಿಯಲ್ಲಿರುವುದು ಇದೇ ಮೊದಲು. ಐಸಿಸಿ ಟೆಸ್ಟ್ ಶ್ರೇಯಾಂಕದಲ್ಲಿ ಪಾಕಿಸ್ತಾನ ತಂಡ ಈಗ ವೆಸ್ಟ್ ಇಂಡೀಸ್‌ಗಿಂತ ಕೆಳಕ್ಕೆ ಕುಸಿದಿದೆ. 76 ರೇಟಿಂಗ್ ಪಾಯಿಂಟ್‌ಗಳೊಂದಿಗೆ ಪಾಕಿಸ್ತಾನ ತಂಡ ಇದೀಗ 8ನೇ ಸ್ಥಾನದಲ್ಲಿದ್ದರೆ, ಶ್ರೀಲಂಕಾ ಮತ್ತು ವೆಸ್ಟ್ ಇಂಡೀಸ್ ತಂಡಗಳು ಲಾಭ ಪಡೆದಿವೆ.



ಮೊದಲ ಪಂದ್ಯದಲ್ಲೇ ಅರ್ಧಶತಕ

### ಆಸ್ಟ್ರೇಲಿಯಾ ಮೊದಲ ಸ್ಥಾನ

ಎರಡು ಪಂದ್ಯಗಳ ಟೆಸ್ಟ್ ಸರಣಿಗಾಗಿ ಪಾಕಿಸ್ತಾನ ಪ್ರವಾಸ ಮಾಡಿದ್ದ ಬಾಂಗ್ಲಾದೇಶ ತಂಡ ಮೊದಲ ಟೆಸ್ಟ್‌ನಲ್ಲಿ ಪಾಕಿಸ್ತಾನ ತಂಡವನ್ನು 10 ವಿಕೆಟ್‌ಗಳಿಂದ ಮಣಿಸಿದರೆ, ಎರಡನೇ ಪಂದ್ಯವನ್ನು 6 ವಿಕೆಟ್‌ಗಳಿಂದ ಗೆದ್ದುಕೊಂಡಿತು. ಎರಡೂ ಪಂದ್ಯಗಳಲ್ಲಿ ಪಾಕಿಸ್ತಾನದ ಬ್ಯಾಟಿಂಗ್ ಮತ್ತು ಬೌಲಿಂಗ್ ತೀರ ಕಳಪೆಯಾಗಿತ್ತು. ಪಾಕಿಸ್ತಾನವನ್ನು ಅವರದ್ದೇ ನೆಲದಲ್ಲಿ ಸೋಲಿಸಿ ದಾಖಲೆ ನಿರ್ಮಿಸಿರುವ ಬಾಂಗ್ಲಾದೇಶ ತಂಡ 66 ರೇಟಿಂಗ್ ಅಂಕಗಳೊಂದಿಗೆ ಪ್ರಸ್ತುತ 9 ನೇ ಸ್ಥಾನದಲ್ಲಿದೆ. ಸದ್ಯ 124 ಅಂಕಗಳೊಂದಿಗೆ ಆಸ್ಟ್ರೇಲಿಯಾ ಮೊದಲ ಸ್ಥಾನದಲ್ಲಿದ್ದು, 120 ಅಂಕಗಳೊಂದಿಗೆ ಟೀಂ ಇಂಡಿಯಾ ಎರಡನೇ ಸ್ಥಾನದಲ್ಲಿದೆ.

ಶ್ರೀಲಂಕಾ ತಂಡ ಆರನೇ ಸ್ಥಾನಕ್ಕೆ ಹಾಗೂ ವೆಸ್ಟ್ ಇಂಡೀಸ್ ತಂಡ ಏಳನೇ ಸ್ಥಾನಕ್ಕೆ ಬಡ್ತಿ ಪಡೆದುಕೊಂಡಿವೆ.

# ಸಚಿನ್‌ರ ದಾಖಲೆಯನ್ನು ಮುರಿಯುವುದು ಕಷ್ಟಸಾಧ್ಯ!

ಇಂಗ್ಲೆಂಡ್ ತಂಡದ ಟೆಸ್ಟ್ ಸ್ಪೆಷಲಿಸ್ಟ್ ಜೋ ರೂಟ್ ಕ್ರಿಕೆಟ್ ಕಾಶಿ ಲಾರ್ಡ್ಸ್ ಮೈದಾನದಲ್ಲಿ ಬ್ಯಾಕ್ ಟು ಬ್ಯಾಕ್ ಸೆಂಚುರಿ ಸಿಡಿಸಿ ಸಂಚಲನ ಸೃಷ್ಟಿಸಿದ್ದಾರೆ. ಈ ಶತಕಗಳೊಂದಿಗೆ ರೂಟ್ ಇಂಗ್ಲೆಂಡ್ ಪರ ಅತ್ಯಧಿಕ ಟೆಸ್ಟ್ ಸೆಂಚುರಿ ಸಿಡಿಸಿದ ಬ್ಯಾಟರ್ ಎನಿಸಿಕೊಂಡಿದ್ದಾರೆ. ಹಾಗೆಯೇ ಇದೀಗ ಟೆಸ್ಟ್ ರನ್ ಸರದಾರರ ಪಟ್ಟಿಯಲ್ಲೂ 7ನೇ ಸ್ಥಾನಕ್ಕೇರಿದ್ದಾರೆ.

ಇನ್ನು ಅಗ್ರಸ್ಥಾನಕ್ಕೇರಲು ಜೋ ರೂಟ್‌ಗೆ ಬೇಕಿರುವುದು 3544 ರನ್‌ಗಳು. ಸದ್ಯ 33 ವರ್ಷದ ರೂಟ್ ಇದೇ ಫಾರ್ಮ್ ಮುಂದುವರೆಸಿದರೆ ಸಚಿನ್ ತೆಂಡೂಲ್ಕರ್ ಹೆಸರಿನಲ್ಲಿರುವ 15921 ರನ್‌ಗಳ ದಾಖಲೆಯನ್ನು ಮುರಿಯಲಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

ಆದರೆ ಇದು ಅಂದುಕೊಂಡಷ್ಟು ಸುಲಭವಲ್ಲ. ಏಕೆಂದರೆ ಜೋ ರೂಟ್ ಇನ್ನೂ ಮೂರು ವರ್ಷಗಳ ಕಾಲ ಆಡಿದರೂ, ಇದೇ ಫಾರ್ಮ್‌ನಲ್ಲಿ ಬ್ಯಾಟಿಂಗ್ ಮಾಡಬೇಕಾಗುತ್ತದೆ. ಅಂದರೆ 50 ರ ಸರಾಸರಿಯಲ್ಲಿ ರನ್‌ಗಳಿಸಲೇಬೇಕು. ಅಂತಹದೊಂದು ಫಾರ್ಮ್ ಪ್ರದರ್ಶಿಸಿದರೆ ಟೆಸ್ಟ್ ರನ್ ಸರದಾರರ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಬಹುದು.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಎಂದರೆ 265 ಇನಿಂಗ್ಸ್‌ಗಳ ಬಳಿಕ ಸಚಿನ್ ಹಾಗೂ ಜೋ ರೂಟ್ ಕಲೆಹಾಕಿರುವ ಒಟ್ಟು ರನ್‌ಗಳು. ಇದೀಗ 265 ಇನಿಂಗ್ಸ್‌ಗಳನ್ನು ಆಡಿರುವ ಜೋ ರೂಟ್‌ಗಿಂತ ಸಚಿನ್ ತೆಂಡೂಲ್ಕರ್ ರನ್‌ಗಳಿಕೆಯಲ್ಲಿ ಮುಂದಿದ್ದರು ಎಂಬುದು ವಿಶೇಷ. ಸಚಿನ್ ತೆಂಡೂಲ್ಕರ್ 265 ಇನಿಂಗ್ಸ್‌ಗಳ ಮುಕ್ತಾಯದ ವೇಳೆಗೆ ಒಟ್ಟು 12970 ರನ್‌ಗಳನ್ನು ಕಲೆಹಾಕಿದ್ದರು. ಅಂದರೆ 54.72ರ ಸರಾಸರಿಯಲ್ಲಿ ರನ್‌ಗಳಿಸಿದ್ದರು. ಈ ವೇಳೆ 43 ಶತಕ ಹಾಗೂ 54 ಅರ್ಧಶತಕಗಳನ್ನು ಸಹ ಸಿಡಿಸಿದ್ದರು. ಜೋ ರೂಟ್ 265 ಇನಿಂಗ್ಸ್‌ಗಳಲ್ಲಿ ಕಲೆಹಾಕಿರುವುದು 12377 ರನ್‌ಗಳು. ಅಂದರೆ ಈವರೆಗೆ 50.93ರ ಸರಾಸರಿಯಲ್ಲಷ್ಟೇ ರನ್‌ಗಳಿಸಿದ್ದಾರೆ. ಇನ್ನು ಇದೇ ವೇಳೆ 34 ಶತಕಗಳನ್ನು ಮಾತ್ರ ಬಾರಿಸಿದ್ದಾರೆ. ಇದಾಗ್ಯೂ 64 ಅರ್ಧಶತಕಗಳನ್ನು ಸಿಡಿಸಿದ್ದಾರೆ. ಇಲ್ಲಿ ಸಚಿನ್‌ಗಿಂತ ರೂಟ್ ಅರ್ಧಶತಕಗಳ ಸಂಖ್ಯೆಯಲ್ಲಿ ಮಾತ್ರ ಮುಂದಿದ್ದಾರೆ.

ಇನ್ನು 265 ಇನಿಂಗ್ಸ್‌ಗಳ ಮುಕ್ತಾಯದ ಬಳಿಕ ಉಭಯರು ಕಲೆಹಾಕಿದ ರನ್‌ಗಳಿಕೆಯಲ್ಲಿ ಜೋ ರೂಟ್‌ಗಿಂತ (12377) ಸಚಿನ್ ತೆಂಡೂಲ್ಕರ್ (12970) 593 ರನ್‌ಗಳಿಂದ ಮುಂದಿದ್ದರು. ಹೀಗಾಗಿಯೇ ಪ್ರಸ್ತುತ ಫಾರ್ಮ್ ಮುಂದುವರೆಸಿದರೆ ಜೋ ರೂಟ್‌ಗೆ ಸಚಿನ್ ತೆಂಡೂಲ್ಕರ್ ಅವರ ಸಾರ್ವಕಾಲಿಕ ದಾಖಲೆ ಮುರಿಯುವುದು ಕಷ್ಟಸಾಧ್ಯ ಎನ್ನಬಹುದು. ಇದಾಗ್ಯೂ 33 ವರ್ಷದ ರೂಟ್ ಮುಂದಿನ ನಾಲ್ಕೈದು ವರ್ಷ ಟೆಸ್ಟ್ ತಂಡದಲ್ಲಿ ಮುಂದುವರೆದರೆ ಸಚಿನ್ ತೆಂಡೂಲ್ಕರ್ ಅವರ ಸಾರ್ವಕಾಲಿಕ ದಾಖಲೆಯನ್ನು ತಮ್ಮದಾಗಿಸಿಕೊಳ್ಳಬಹುದು.



# ಟಿ20 ಕ್ರಿಕೆಟ್‌ನಲ್ಲಿ ಹೊಸ ಇತಿಹಾಸ ನಿರ್ಮಿಸಿದ ಇಮ್ರಾನ್ ತಾಹಿರ್

ಟಿ20 ಕ್ರಿಕೆಟ್‌ನಲ್ಲಿ ಸೌತ್ ಆಫ್ರಿಕಾದ ಕ್ರಿಕೆಟಿಗ ಇಮ್ರಾನ್ ತಾಹಿರ್ ಹೊಸ ಇತಿಹಾಸ ಬರೆದಿದ್ದಾರೆ. ಅದು ಸಹ 45ನೇ ವಯಸ್ಸಿನಲ್ಲಿ ನಾಯಕನಾಗಿ ಕಣಕ್ಕಿಳಿಯುವ ಮೂಲಕ ಎಂಬುದು ವಿಶೇಷ. ಅಂದರೆ ಟಿ20 ಕ್ರಿಕೆಟ್‌ನಲ್ಲಿ ನಾಯಕನಾಗಿ ಕಣಕ್ಕಿಳಿದ ಅತ್ಯಂತ ಹಿರಿಯ ಆಟಗಾರ ಎಂಬ ದಾಖಲೆ ಇದೀಗ ಇಮ್ರಾನ್ ತಾಹಿರ್ ಪಾಲಾಗಿದೆ.

ಇಮ್ರಾನ್ ತಾಹಿರ್ ಪ್ರಸ್ತುತ ನಡೆಯುತ್ತಿರುವ ಕೆರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಗಯಾನಾ ಅಮೆಝೂನ್ ವಾರಿಯರ್ಸ್ ತಂಡದ ನಾಯಕರಾಗಿ ಕಣಕ್ಕಿಳಿಯುತ್ತಿದ್ದಾರೆ. ಈ ಮೂಲಕ ಟಿ20 ಕ್ರಿಕೆಟ್‌ನಲ್ಲಿ ತಂಡವನ್ನು ಮುನ್ನಡೆಸಿದ ಅತ್ಯಂತ ಹಿರಿಯ ಕ್ಯಾಪ್ಟನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಇದಕ್ಕೂ ಮುನ್ನ ಈ ದಾಖಲೆ ಆಸ್ಟ್ರೇಲಿಯಾದ ಶೇನ್ ವಾರ್ನ್ ಹೆಸರಿನಲ್ಲಿತ್ತು. 2013 ರ ಬಿಗ್ ಬ್ಯಾಷ್ ಲೀಗ್‌ನಲ್ಲಿ ವಾರ್ನ್ ಮೆಲ್ಬೋರ್ನ್ ಸ್ಟಾರ್ಸ್ ತಂಡ ನಾಯಕರಾಗಿ ಕಣಕ್ಕಿಳಿದಿದ್ದರು. ಈ ವೇಳೆ ಅವರಿಗೆ 43 ವರ್ಷ, 115 ದಿನಗಳ ವಯಸ್ಸಾಗಿತ್ತು.

ಇದೀಗ ಈ ದಾಖಲೆಯನ್ನು ಇಮ್ರಾನ್ ತಾಹಿರ್ ಮುರಿದಿದ್ದಾರೆ. 45ನೇ ವಯಸ್ಸಿನಲ್ಲಿ ಗಯಾನಾ ಅಮೆಝೂನ್ ವಾರಿಯರ್ಸ್ ತಂಡವನ್ನು ಮುನ್ನಡೆಸುವ ಮೂಲಕ ಟಿ20 ಕ್ರಿಕೆಟ್‌ನಲ್ಲಿ ನಾಯಕನಾಗಿ ಕಾಣಿಸಿಕೊಂಡ ಅತ್ಯಂತ ಹಿರಿಯ ಆಟಗಾರ ಎನಿಸಿಕೊಂಡಿದ್ದಾರೆ. ಇನ್ನು ಐಪಿಎಲ್‌ನಲ್ಲಿ ತಂಡವನ್ನು ಮುನ್ನಡೆಸಿದ ಅತ್ಯಂತ ಹಿರಿಯ ನಾಯಕ ಎಂಬ ದಾಖಲೆ ಮಹೇಂದ್ರ ಸಿಂಗ್ ಧೋನಿ ಹೆಸರಿನಲ್ಲಿದೆ. 2023 ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮುನ್ನಡೆಸುವ ಮೂಲಕ 41 ವರ್ಷದ ಧೋನಿ ಈ ದಾಖಲೆ ನಿರ್ಮಿಸಿದ್ದಾರೆ.



ಅತ್ಯಂತ ಹಿರಿಯ ಆಟಗಾರ

# ರಾಜಸ್ಥಾನ್ ತಂಡಕ್ಕೆ ದ್ರಾವಿಡ್ ಹೆಡ್ ಕೋಚ್

ರಾಜಸ್ಥಾನ್ ರಾಯಲ್ಸ್ ತಂಡದ ಮುಖ್ಯ ಕೋಚ್ ಆಗಿ ರಾಹುಲ್ ದ್ರಾವಿಡ್ ನೇಮಕವಾಗಿದ್ದಾರೆ. ಕಳೆದ ಸೀಸನ್‌ನಲ್ಲಿ ಆರ್‌ಆರ್ ತಂಡದ ಕೋಚ್ ಆಗಿ ಕುಮಾರ ಸಂಗಾಕ್ಕರ ಕಾರ್ಯ ನಿರ್ವಹಿಸಿದ್ದರು. ಇದೀಗ ಈ ಸ್ಥಾನಕ್ಕೆ ಟೀಮ್ ಇಂಡಿಯಾದ ಮಾಜಿ ಕೋಚ್ ದ್ರಾವಿಡ್ ಅವರನ್ನು ಆಯ್ಕೆ ಮಾಡಲಾಗಿದೆ. ಐಪಿಎಲ್ 2025 ರಲ್ಲಿ ಆರ್‌ಆರ್ ತಂಡದ ಮುಖ್ಯ ಕೋಚ್ ಆಗಿ ರಾಹುಲ್ ದ್ರಾವಿಡ್ ಕಾಣಿಸಿಕೊಳ್ಳಲಿದ್ದಾರೆ.



ಮತ್ತೊಂದೆಡೆ ಕಳೆದ ಸೀಸನ್‌ನಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ ಕೋಚ್ ಆಗಿ ಕಾಣಿಸಿಕೊಂಡಿದ್ದ ಕುಮಾರ ಸಂಗಾಕ್ಕರ ಆರ್‌ಆರ್ ಫ್ರಾಂಚೈಸಿಯ ಡೈರೆಕ್ಟರ್ ಹುದ್ದೆಯಲ್ಲಿ ಮುಂದುವರೆಯುವ ಸಾಧ್ಯತೆಯಿದೆ.

ಐಪಿಎಲ್ 2021 ರವರೆಗೆ ಸಂಗಾಕ್ಕರ ರಾಜಸ್ಥಾನ್ ರಾಯಲ್ಸ್ ತಂಡದ ಕ್ರಿಕೆಟ್ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಹೀಗಾಗಿ ಅದೇ ಹುದ್ದೆಗೆ ಅವರನ್ನು ಪುನರ್ ನೇಮಕ ಮಾಡುವ ಸಾಧ್ಯತೆಯಿದೆ.

ಈ ಹಿಂದೆ ರಾಹುಲ್ ದ್ರಾವಿಡ್ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕರಾಗಿ ಕಾಣಿಸಿಕೊಂಡಿದ್ದರು ಎಂಬುದು ವಿಶೇಷ. 2011 ರಿಂದ 2013ರವರೆಗೆ ಅವರು ಆರ್‌ಆರ್ ತಂಡವನ್ನು ಮುನ್ನಡೆಸಿದ್ದಾರೆ. ಈ ವೇಳೆ 46 ಪಂದ್ಯಗಳನ್ನಾಡಿರುವ ದ್ರಾವಿಡ್ 7 ಅರ್ಧಶತಕಗಳೊಂದಿಗೆ 1276 ರನ್ ಕಲೆಹಾಕಿದ್ದಾರೆ.

ಇದಾದ ಬಳಿಕ 2014 ಮತ್ತು 2015 ರಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ ಮೆಂಟರ್ ಆಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಇದೀಗ ತನ್ನ ಮಾಜಿ ಆಟಗಾರರನ್ನೇ ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿಯು ಮುಖ್ಯ ಕೋಚ್ ಆಗಿ ನೇಮಿಸಿಕೊಂಡಿರುವುದು ವಿಶೇಷ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966